
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಮನ್ವಯ ಸಂಸ್ಕೃತಿ ಮತ್ತು ಪಾಂಡಿತ್ಯದ ಸಮ್ಮಿಲನವಾಗಿದ್ದ

ಪ್ರೊ. ಮುಶಿರುಲ್ ಹಸನ್ ಇನ್ನಿಲ್ಲ



ಸಂಪುಟ 12 | ಸಂಚಿಕೆ 52 | ಡಿಸೆಂಬರ್ 24-30, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ರಾಫೇಲ್ ಮಹಾ ಹಗರಣ



ಇನ್ನೂ ಉತ್ತರ ಸಿಗದ ಹತ್ತು ಪ್ರಶ್ನೆಗಳು

ವಿವಾದಾಸ್ಪದ ತೀರ್ಪು



ಚರಿತ್ರೆ ತಿದ್ದಿದ್ದಾಯಿತು, ಈಗ ಜಿಡಿಪಿ ಸರದಿ



ಸರಕಾರಿ ಭೂಮಿ ಒತ್ತುವರಿ ಶೀಘ್ರ ತೆರವು ಮಾಡಬೇಕು

‘ಮನುವಾದ ಮುಕ್ತ ಭಾರತ’ ಸಂಸತ್ತಿನ ಮುಂದೆ ದಲಿತರ ಆಗ್ರಹ



ಎರಡು ಭೀಕರ ಕೈಗಾರಿಕಾ ಅಪಘಾತಗಳು

ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಬೆಂಬಲ–ಸಿಪಿಐ(ಎಂ) ಕೇಂದ್ರ ಸಮಿತಿ

ನಿರುದ್ಯೋಗ ಮತ್ತು ಕೃಷಿ ಸಂಕಟದ ವಿರುದ್ಧ ದೇಶವ್ಯಾಪಿ ಪ್ರತಿಭಟನೆ–ಹೋರಾಟಗಳಿಗೆ ಕರೆ

- **ಡಿಸೆಂಬರ್ 15 ಮತ್ತು 16ರಂದು ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ಕೊಟ್ಟಿರುವ ಜನವರಿ 8 ಮತ್ತು 9ರ ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.**
- **"ಕ್ಯಾಂಪಸ್‌ಗಳನ್ನು ಉಳಿಸಿ, ಶಿಕ್ಷಣವನ್ನು ಉಳಿಸಿ, ದೇಶವನ್ನು ಉಳಿಸಿ" ಎಂಬ ಘೋಷಣೆಯೊಂದಿಗೆ ವಿದ್ಯಾರ್ಥಿಗಳು, ಅಧ್ಯಾಪಕರು,ವಿಶ್ವವಿದ್ಯಾಲಯಗಳ ನೌಕರರು ಹಾಗೂ ನಾಗರಿಕ ಸಮಾಜದ ಸಂಘಟನೆಗಳು ಕೈಗೊಂಡಿರುವ ನಡೆಗೆ ಸಿಪಿಐ(ಎಂ)ನ ಬೆಂಬಲವನ್ನು ವ್ಯಕ್ತಪಡಿಸಿರುವ ಕೇಂದ್ರ ಸಮಿತಿ ಹೆಚ್ಚುತ್ತಿರುವ ನಿರುದ್ಯೋಗದ ಪ್ರಶ್ನೆಯ ಮೇಲೆ ಗಮನ ಕೇಂದ್ರೀಕರಿಸಿ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಲು ಮತ್ತು ಕೃಷಿ ಸಂಕಟದ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ಕೂಡ ನಿರ್ಧರಿಸಿದೆ.**
- **ಮಹಿಳೆಯರ ವಿರುದ್ಧ ಅಪರಾಧಗಳು ಏರುತ್ತಿದ್ದು, ಇದರ ವಿರುದ್ಧವೂ ದೇಶಾದ್ಯಂತ ಪ್ರತಿಭಟನೆಗಳಿಗೆ ಕರೆ ನೀಡಬೇಕು ಎಂದೂ ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಸಂಸತ್ತಿನ ಈ ಅಧಿವೇಶನದಲ್ಲಾದರೂ ಮಹಿಳಾ ಮೀಸಲಾತಿ ಮಸೂದೆಯನ್ನು ಪಾಸು ಮಾಡಬೇಕು ಎಂದು ಅದು ಮತ್ತೆ ಆಗ್ರಹಿಸಿದೆ. ದಲಿತರ ಮೇಲೆ ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಮುಂದುವರೆಯುತ್ತಿರುವ ಅತ್ಯಾಚಾರಗಳ ವಿರುದ್ಧ ಎಲ್ಲ ರಾಜ್ಯಗಳಲ್ಲೂ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಅದು ನಿರ್ಧರಿಸಿದೆ.**
- **ಚುನಾವಣಾ ಬಾಂಡುಗಳು ಮತ್ತು ಮೋದಿ ಸರಕಾರದ ಭ್ರಷ್ಟಾಚಾರದ ನಡುವೆ ನೇರ ಸಂಬಂಧ ಇರುವುದನ್ನು ದೇಶಾದ್ಯಂತ ಬಯಲಿಗೆಳೆಯುವ ಒಂದು ಪ್ರಚಾರಾಂದೋಲನವನ್ನು ನಡೆಸಬೇಕು ಎಂದು ಸಿಪಿಐ(ಎಂ)ನ ಕೇಂದ್ರ ಸಮಿತಿಯ ಈ ಸಭೆ ನಿರ್ಧರಿಸಿತು.**

ಲೋಕಸಭಾ ಚುನಾವಣೆಗಳಲ್ಲಿ ಕಾರ್ಯತಂತ್ರ

2019ರ ಲೋಕಸಭಾ ಚುನಾವಣೆಗಳಲ್ಲಿ ಪಕ್ಷದ ಮುಂದಿನ ಪ್ರಧಾನ ಕಾರ್ಯಭಾರವೆಂದರೆ ಬಿಜೆಪಿ ಮೈತ್ರಿಕೂಟವನ್ನು ಸೋಲಿಸುವುದು, ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವನ್ನು ಲೋಕಸಭೆಯಲ್ಲಿ ಹೆಚ್ಚಿಸುವುದು ಮತ್ತು ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯತೀತ ಸರಕಾರ ರಚನೆಯಾಗುವಂತೆ ಮಾಡುವುದು ಎಂದು ಈ ಹಿಂದಿನ ಅಕ್ಟೋಬರ್ 2018ರ ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಈ ಕಾರ್ಯತಂತ್ರಕ್ಕೆ ಅನುಗುಣವಾಗಿ ಸಿದ್ಧತೆಗಳನ್ನು ಮಾಡಬೇಕು ಎಂದು ಅದು ರಾಜ್ಯಸಮಿತಿಗಳಿಗೆ ಹೇಳಿದೆ.

ಇತ್ತೀಚಿನ ವಿಧಾನಸಭಾ ಚುನಾವಣೆಗಳು

ಐದು ರಾಜ್ಯಗಳ ವಿಧಾನಸಭೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗಳ ಫಲಿತಾಂಶಗಳ ಒಂದು ಪ್ರಾಥಮಿಕ ವಿಶ್ಲೇಷಣೆಯನ್ನು ಕೇಂದ್ರ ಸಮಿತಿ ನಡೆಸಿತು.

ರಾಜಸ್ಥಾನದ ಶ್ರೀದುಂಗರ್‌ಗಡ್ ಮತ್ತು ಭದ್ರಾ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ವಿಜಯಕ್ಕೆ ಪಕ್ಷದ ರಾಜಸ್ಥಾನ ಘಟಕವನ್ನು ಕೇಂದ್ರ ಸಮಿತಿ ಅಭಿನಂದಿಸಿತು. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಡ ವಿಧಾನಸಭಾ ಚುನಾವಣೆಗಳಲ್ಲಿಬಿಜೆಪಿಯ ಸೋಲು ಜನಗಳ ಮೇಲೆ ಅಸಹನೀಯ ಹೊರೆಗಳನ್ನು ಹೇರಿರುವ ಮೋದಿ ಸರಕಾರದ ಮತ್ತು ಬಿಜೆಪಿ ರಾಜ್ಯ ಸರಕಾರಗಳ ಧೋರಣೆಗಳ ವಿರುದ್ಧ ಜನಗಳ ಅಸಂತುಷ್ಟಿ ಮತ್ತು ಕ್ರೋಧದ ಒಂದು ಸ್ಪಷ್ಟ ಸಂಕೇತ ಎಂದು ಕೇಂದ್ರ ಸಮಿತಿ ಗಮನಿಸಿತು. ಚುನಾವಣೆಗಳಲ್ಲಿ ಬಿಜೆಪಿ ಅಜೇಯ ಎಂಬ ಎಂಬ ಮಿಥ್ಯೆಯನ್ನು ಈ ಫಲಿತಾಂಶಗಳು ಪುಡಿಗುಟ್ಟಿವೆ ಎಂದು ಅದು ವರ್ಣಿಸಿದೆ.

ಜನಗಳ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವ ಬದಲು ಬಿಜೆಪಿ ಸರಕಾರಗಳ ಧೋರಣೆಗಳು ಜನಗಳ ಸಂಕಟಗಳನ್ನು ಮತ್ತಷ್ಟು ಆಳಗೊಳಿಸಿವೆ ಮತ್ತು ಜನಗಳ ಗಮನವನ್ನು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಉದ್ದೇಶದಿಂದ ಬೇರೆಡೆಗಳಿಗೆ ತಿರುಗಿಸಲು ಪ್ರಯತ್ನಿಸಿವೆ. ಮುಸ್ಲಿಮರು ಮತ್ತು ದಲಿತರ ಮೇಲೆ ಹಲ್ಲೆಗಳು ಮತ್ತು ಜನಗಳನ್ನು ವಿಭಜಿಸಲು ಪೋಷಿಸಿದ ದ್ವೇಷ ಮತ್ತು ಹಿಂಸಾಚಾರ ಕೂಡ ಅವರು ನಿರೀಕ್ಷಿಸಿದ ಮಟ್ಟದಲ್ಲಿ ಯಶ್ವಿಯಾಗಿಲ್ಲೆಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ತೆಲಂಗಾಣದಲ್ಲಿ, ಟಿಆರ್‌ಎಸ್ ಭಾರೀ ಜಯ ಗಳಿಸಿದೆ, ಬಿಜೆಪಿಯ ಸೀಟುಗಳ ಸಂಖ್ಯೆ ಇಳಿದಿದೆ. ಮಿರೆಝೋರಾಂನಲ್ಲಿ ಎಂಎನ್‌ಎಫ್ ಒಂದು ನಿರ್ಣಾಯಕ ವಿಜಯ ಗಳಿಸಿ ಕಾಂಗ್ರೆಸ್ ಸರಕಾರವನ್ನು ಹೊರಹಾಕಿದೆ.

ಈ ಹಿಂದಿನ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ರಚನೆಗೊಂಡಿರುವ ಕಾಂಗ್ರೆಸ್ ಸರಕಾರಗಳು ಜನತೆಯ ತೀರ್ಪನ್ನು ಗೌರವಿಸಬೇಕು ಮತ್ತು ಜನಗಳ ಜೀವನಧಾರಗಳನ್ನು ಉತ್ತಮಪಡಿಸುವ ಮತ್ತು ಅವರ ಸಂಕಟಗಳನ್ನು ಕಡಿಮೆ ಮಾಡುವ ಉದ್ದೇಶದ ಧೋರಣೆಗಳನ್ನು ಅಂಗೀಕರಿಸಬೇಕು. ಬಿಜೆಪಿಯ ಕೋಮುವಾದಿ ಧ್ರುವೀಕರಣದ ಧೋರಣೆಗಳು ಜನಗಳ ಐಕ್ಯತೆಯನ್ನು ಮತ್ತು ದೇಶದ ಸಮಗ್ರತೆಯನ್ನು ಮತ್ತಷ್ಟು ಹಾಳುಹಗೆಡವದಂತೆ ನೋಡಿಕೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ತೆಲಂಗಾಣ ಮತ್ತು ರಾಜಸ್ಥಾನದಲ್ಲಿ ಪಕ್ಷದ ಫಲಿತಾಂಶಗಳನ್ನು ಕೇಂದ್ರ ಸಮಿತಿ ಚರ್ಚಿಸಿತು. ರಜ್ಯಸಮಿತಿಗಳು ಒಮದು ವಿವರವಾದ ಪರಾಮರ್ಶೆ ನಡೆಸಿದ ಮೇಲೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕೇಂದ್ರ ಸಮಿತಿ ಹೇಳಿದೆ.

ಜನಗಳ ಮೇಲೆ ಹೆಚ್ಚಿದ ಹೊರೆಗಳು

ಜನಗಳ ಮೇಲಿನ ಹೊರೆಗಳು ಹೆಚ್ಚುತ್ತಲೇ ಇರುವ ಬಗ್ಗೆ ಕೇಂದ್ರಸಮಿತಿ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ. ಒಟ್ಟಾರೆ ಆರ್ಥಿಕ ಸನ್ನಿವೇಶದ ಬಗ್ಗೆ ಮತ್ತು ಉದ್ಯೋಗದ ಸ್ಥಿತಿ–ಗತಿಯ ಬಗ್ಗೆ ನಿರಾಶಾಭಾವ ಹೆಚ್ಚುತ್ತಿದೆ ಎಂಬುದನ್ನು ಭಾರತೀಯ ರಿಝರ್ವ್ ಬ್ಯಾಂಕಿನ ನವಂಬರ್ 2018ರ 'ಬಳಕೆದಾರ ವಿಶ್ವಾಸ ಸರ್ವೆ' ತೋರಿಸುತ್ತಿದೆ. ಜನಗಳ ವೆಚ್ಚಗಳ ಮಟ್ಟಗಳು ಇಳಿಯುತ್ತಿರುವುದು ಆಂತರಿಕ ಬೇಡಿಕೆಗಳು ಇಳಿಯುತ್ತಿರುವುದನ್ನು ಸೂಚಿಸು ತ್ತವೆ., ಇದು ಒಟ್ಟಾರೆ ಆರ್ಥಿಕ ಮೂಲಾಂಶಗಳ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಗಳನ್ನು ಮುಂದು ವರೆಸುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಮುಂದುವರೆಯುತ್ತಿರುವ ಕರ್ಷಕ ಬಿಕ್ಕಟ್ಟನ್ನು ಗಮನಕ್ಕೆ ತಗೊಂಡ ಕೇಂದ್ರ ಸಮಿತಿ ಕೃಷಿ ಉತ್ಪಾದನೆ ನಿಧಾನ ಗೊಂಡಿರು ವುದರಿಂದ ಗ್ರಾಮೀಣ ಸಂಕಟ ಆಳಗೊಳ್ಳುತ್ತಿದೆ, ಇದರಿಂದಾಗಿ ಗ್ರಾಮೀಣ ಆದಾಯಗಳು ಕುಸಿಯುವಂತಾಗಿದೆ, ತನ್ಮೂಲಕ ಇದರಿಂದ ಗ್ರಾಮೀಣ ಬೇಡಿಕೆಗಳು ಕುಂಠಿತಗೊಳ್ಳುತ್ತ ಒಟ್ಟಾರೆ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತಿದೆ ಎಂದು ಹೇಳಿದೆ. ಮೋದಿ ಸರಕಾರ ಪ್ರಕಟಿಸಿರುವ ಹೆಚ್ಚಿನ ಕನಿಷ್ಟ ಬೆಂಬಲ ಬೆಲೆಗಳು ಅದು ಮಾಡಿರುವ ಮೋಸ ಎಂಬುದು ಬಯಲಾಗುತ್ತಿದೆ. ರೈತರ ಆದಾಯಗಳು ಇಳಿಯುತ್ತಲೇ ಇವೆ, ಈಗಲೂ ಉತ್ಪಾದನಾ ಖರ್ಚಿಗಿಂತ ಬಹಳ ಕೆಳಮಟ್ಟದಲ್ಲಿಯೇ ಇವೆ. ಇದು ಗ್ರಾಮೀಣ ಭಾರತದಲ್ಲಿ ಜನಗಳ ಸಂಕಷ್ಟಗಳನ್ನು ಮತ್ತಷ್ಟು ಆಳಗೊಳಿಸುತ್ತಿದೆ.

ದೇಶದಾದ್ಯಂತ ನಿರುದ್ಯೋಗ ಗಾಬರಿ ಹುಟ್ಟಿಸುವ ರೀತಿಯಲ್ಲಿ ಏರುತ್ತಿರುವ ಬಗ್ಗೆಯೂ ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಬ್ಯಾಂಕಿಂಗ್ ವಲಯದಲ್ಲಿ ಬಿಕ್ಕಟ್ಟು

ಬ್ಯಾಂಕಿಂಗ್ ವಲಯುವನ್ನು ಆವರಿಸಿರುವ ಬಿಕ್ಕಟ್ಟನ್ನು ಗಮನಕ್ಕೆ ತಗೊಂಡ ಕೇಂದ್ರ ಸಮಿತಿ ಮೋದಿ ಸರಕಾರ ಆರ್‌ಬಿಐ ಕಾಯ್ದೆಯ ಸೆಕ್ಷನ್ 7ನ್ನು ಎತ್ತುವ ಅಭೂತಪೂರ್ವ ಕ್ರಮ ಕೈಗೊಂಡಿರುವುದು ಹಣಕಾಸು ನಿಯಂತ್ರಕನಾಗಿ ಭಾರತೀಯ ರಿಝರ್ವ್ ಬ್ಯಾಂಕಿನ ಸ್ವಾತಂತ್ರ್ಯದ ಬುಡಕ್ಕೇ ಏಟು ಕೊಟ್ಟಿದೆ ಎಂದು ಅಭಿಪ್ರಾಯ ಪಟ್ಟಿದೆ. ನೋಟುರದ್ಧತಿ, ಕೆಟ್ಟಸಾಲಗಳ ನಿರ್ವಹಣೆಯ ರೀತಿ, ಈ ಸರಕಾರದ ಅವಧಿಯಲ್ಲಿ ಪ್ರತಿವರ್ಷ ರಿಝರ್ವ್ ಬ್ಯಾಂಕಿನ ಲಾಭಗಳ'99%ವನ್ನು ತಗೊಂಡಿರುವುದು, ಮತ್ತು ಇತ್ತೀಚೆಗೆ ರಿಝರ್ವ್ ಬ್ಯಾಂಕ್ ತನ್ನ ಮೀಸಲುಗಳಿಂದ 3.5ಲಕ್ಷ ಕೋಟಿ ರೂ.ಗಳನ್ನು ಸರಕಾರಕ್ಕೆ ಅದರ ಹಣಕಾಸು ಕೊರತೆಯನ್ನು ತಡೆಯುಲಿಕ್ಕಾಗಿ ಬಿಟ್ಟುಕೊಡುವಂತೆ ಬಲವಂತ ಮಾಡುವ ಪ್ರಯತ್ನ ಈ ವಿವಾದಗಳು ಗಂಭೀರ ಸೆಳೆತಗಳನ್ನು ಉಂಟು ಮಾಡಿವೆ. ಇದು ದೇಶದ ಈ ಕೇಂದ್ರೀಯ ಬ್ಯಾಂಕಿನ ಸ್ವಾತಂತ್ರ್ಯವನ್ನು ಬುಡಮೇಲು ಮಾಡಿದೆ. ಈ ಒತ್ತಡಗಳು ಸ್ಪಷ್ಟವಾಗಿ ಮೋದಿ ಸರಕಾರ ಚಮಚಾ ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ರಕ್ಷಿಸುತ್ತಿರುವುದರ ಫಲಿತಾಂಶ ಎಂದು ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ರಫೇಲ್ ಹಗರಣ: ಜೆಪಿಸಿ ರಚಿಸಿ

ಮೋದಿ ಸರಕಾರ ರಫೆಲ್ ವ್ಯವಹಾರದಲ್ಲಿ ಸುಪ್ರಿಂ ಕೋರ್ಟನ್ನು ತಪ್ಪುದಾರಿಗೆಳೆದಿದೆ ಎಂಬುದನ್ನು ಕೇಂದ್ರ ಸಮಿತಿ ಗಮನಿಸಿದೆ. ಸಂವಿಧಾನ ವಿಧಿಸಿರುವಂತೆ ಸಿಎಜಿ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿಯೂ ಇಲ್ಲ, ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅದನ್ನು ಪರೀಕ್ಷಿಸಿಯೂ ಇಲ್ಲ ಎಂಬುದು ಸ್ಫಟಿಕದಷ್ಟು ಸ್ಪಷ್ಟ. ಈ ವಿಷಯವನ್ನು ಸಂಪೂರ್ಣವಾಗಿ ತನಿಖೆ ಮಾಡಲು ಒಂದು ಜಂಟಿ ಸಂಸದೀಯ ಸಮಿತಿಯನ್ನು ರಚಿಸಬೇಕು ಎಂಬ ತನ್ನ ಬೇಡಿಕೆಯನ್ನು ಕೇಂದ್ರ ಸಮಿತಿ ಪುನರುಚ್ಚರಿಸಿದೆ.

ಚುನಾವಣಾ ಬಾಂಡುಗಳು

ಚುನಾವಣಾ ಬಾಂಡುಗಳನ್ನು ಕುರಿತಂತೆ ಸಿಪಿಐ(ಎಂ)ನ ನಿಲುವು ಸರಿಯೆಂದು ಸಾಬೀತಾಗಿದೆ ಎಂದು ಕೇಂದ್ರ ಸಮಿತಿ **ಪುಟ 14 ಕ್ಕೆ**

1984ರ ಸಿಖ್ಖರ ಹತ್ಯಾಕಾಂಡದ ಆರೋಪಿಗೆ ಶಿಕ್ಷೆ–ಸಿಪಿಐ(ಎಂ) ಸ್ವಾಗತ

"2002 ಮತ್ತಿತರ ಕೋಮು ಹಿಂಸಾಕಾಂಡಕ್ಕೆ ನೇತೃತ್ವ ನೀಡಿದವರಿಗೂ ಶಿಕ್ಷೆಯಾಗಬೇಕು"

1984ರಲ್ಲಿ ದಿಲ್ಲಿಯಲ್ಲಿ ನಡೆದ ಸಿಖ್ಖರ ಹತ್ಯಾಕಾಂಡದ ಒಬ್ಬ ಆರೋಪಿ ಸಜ್ಜನ್ ಕುಮಾರ್ ಗೆ ಶಿಕ್ಷೆ ವಿಧಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ. ಕೊನೆಗೂ ನ್ಯಾಯ ನೀಡುವಲ್ಲಿ ಕಾನೂನಿಗೆ 34 ವರ್ಷಗಳೇ ಬೇಕಾದವು.

ಎಲ್ಲ ಕೋಮುವಾದಿ ಹಿಂಸಾಕಾಂಡಗಳಲ್ಲಿ, ಅದು 1984ರದ್ದು ಆಗಿರಬಹುದು, 2002ದ್ದು, ಅಥವ ಬೇರೆ ಇಂತಹ ಘಟನೆಗಳಲ್ಲಿ ಆಗಿರಬಹುದು, ಇದಕ್ಕೆ ಬಲಿಯಾದವರಿಗೆಲ್ಲರಿಗೂ ನ್ಯಾಯ ಸಿಗಬೇಕು, ಇವುಗಳಲ್ಲಿ ಹಿಂಸಾಕಾಂಡ ನಡೆಸಿದ ಜನಜಂಗುಳಿಗಳಿಗೆ ನೇತೃತ್ವ ನೀಡಿದ, ಬೆಂಬಲಿಸಿದ ಮತ್ತು ಅವರಿಗೆ ರಕ್ಷಣೆ ನೀಡಿದ ರಾಜಕೀಯ ಮುಖಂಡರನ್ನು ಶಿಕ್ಷಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸಮನ್ವಯ ಸಂಸ್ಕೃತಿಯ ಮತ್ತು ಪಾಂಡಿತ್ಯದ ಅತ್ಯುತ್ತಮ ಸಮ್ಮಿಳನ–ಪ್ರೊ. ಮುಶಿರುಲ್ ಹಸನ್

ಪ್ರಖ್ಯಾತ ಇತಿಹಾಸಜ್ಞ ಮತ್ತು ಜಾಮಿಯ ಮಿಲಿಯ ಇಸ್ಲಾಮಿಯ ವಿಶ್ವ ವಿದ್ಯಾಲಯದ ಮಾಜಿ ಉಪಕುಲಪತಿ ಪ್ರೊ. ಮುಶಿರುಲ್ ಹಸನ್ ಡಿಸೆಂಬರ್ 10 ರಂದು ನಿಧನರಾಗಿದ್ದಾರೆ. ಅವರು ನಮ್ಮ ದೇಶದ ಸಮನ್ವಯ ಸಂಸ್ಕೃತಿಯ ಮತ್ತು ಪಾಂಡಿತ್ಯದ ಅತ್ಯುತ್ತಮ ಸಮ್ಮಿಳನ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅವರಿಗ ಎಶ್ರದ್ಧಾಂಜಲಿ ಅರ್ಪಿಸಿದೆ. ಡಿಸೆಂಬರ್ 15–16 ರಂದು ಸಭೆ ಸೇರಿದ ಕೇಂದ್ರ ಸಮಿತಿ ಇವರಲ್ಲದೆ ಇತ್ತೀಚೆಗೆ ನಿಧನರಾದ ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿಯ ಮಾಜಿ ಸದಸ್ಯರು, 50 ವರ್ಷಗಳ ಹಿಂದೆ 44 ದಲಿತ ಕುಟುಂಬಗಳನ್ನು ಬಲಿ ತೆಗೆದುಕೊಂಡ ಕಿಲ್ವನ್ಮಣಿ ಹತ್ಯಾಕಾಂಡದ ಸಮಯದ ದಾಳಿಗಳಿಗೆ ರೈತಾಪಿಗಳ ಪ್ರತಿರೋಧವನ್ನು ಕಟ್ಟಿ ಬೆಳೆಸಿದ ಜಿ.ವೀರಯ್ಯನ್, ಜನವಿಜ್ಞಾನ ಚಳುವಳಿ ಮತ್ತು ಸಾರ್ವಜನಿಕ ಆರೋಗ್ಯ ಆಂದೋಲನದ ಹಿರಿಯ ನೇತಾರ ಡಾ.ಅಮಿತ್ ಸೇನ್‌ಗುಪ್ತ, ವಿಜ್ಞಾನಿ, ಕೊಲ್ಲತಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಮತ್ತು ಸಿಪಿಐ(ಎಂ)ನ ರಾಜ್ಯ ಸಭಾ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಪ್ರೊ. ರೊಮೆನ್ ಪೊದ್ದಾರ್ ಮತ್ತು ಐರ್ಲೆಂಡ್‌ನ ಕಾರ್ಮಿಕರ ಪಕ್ಷದ ಹಿರಿಯ ಮುಖಂಡ ಸೀಯನ್ ಗಾರ್ಲೆಂಡ್ ಅವರಿಗೂ ಸಿಪಿಐ(ಎಂ) ಕೇಂದ್ರ ಸಮಿತಿ ಶ್ರದ್ಧಾಂಜಲಿಗಳನ್ನು ಅರ್ಪಿಸಿತು.

ರಫಾಲ್ ವಿಮಾನ ಕುರಿತ ಸುಪ್ರಿಂ ಕೋರ್ಟ್ ತೀರ್ಪು ಗಂಭೀರ ಪ್ರಶ್ನೆಗಳನ್ನು ಎತ್ತಿದೆ–ಸಿಪಿಐ(ಎಂ) ಕೇಂದ್ರ ಸಮಿತಿ

"ಈ ಹಗರಣದ ಹಿಂದಿರುವ ಸತ್ಯವನ್ನು ಹೊರಗೆಳೆಯಲು ಜೆಪಿಸಿ ತನಿಖೆಯೊಂದೇ ದಾರಿ"

ಸರಕಾರ ಮತ್ತು ಸಿಎಜಿ ನಡುವೆ ರಫಾಲ್ ಯುದ್ಧವಿಮಾನದ ಬೆಲೆಯನ್ನು ಕುರಿತಂತೆ ನಡೆದಿದೆಯೆನ್ನಲಾದ ಸಂವಹನದಿಂದಾಗಿ ತಾನು ಈ ಪ್ರಶ್ನೆಯನ್ನು ಪ್ರವೇಶಿಸುವುದಿಲ್ಲ ಎಂದು ಸುಪ್ರಿಂ ಕೋರ್ಟ್ ತನ್ನ ನಿರಾಕರಣೆಗೆ ಕಾರಣ ಕೊಟ್ಟಿದೆ. ಈ ಪ್ರಶ್ನೆಯ ಮೇಲೆ ಸಿಎಜಿ ಒಂದು ವರದಿಯನ್ನು "ಪ್ರಕಟಿಸಿದೆ", ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ) ಪರೀಕ್ಷಿಸಿದೆ, ಮತ್ತು ಅವರ "ವರದಿ"ಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ ಎಂದು ಸುಪ್ರಿಂ ಕೋರ್ಟಿನ ತೀರ್ಪು ಹೇಳುತ್ತದೆ. ಸಂವಿಧಾನ ವಿಧಿಸಿರುವಂತೆ ಸಂಸತ್ತಿನಲ್ಲಿ ಸಿಎಜಿ ವರದಿಯನ್ನು ಮಂಡಿಸಿಯೂ ಇಲ್ಲ, ಮತ್ತು ಪಿಎಸಿ ಅದನ್ನು ಪರೀಕ್ಷಿಸಲೂ ಆಗಿಲ್ಲ ಎಂಬುದು ಸ್ಫಟಿಕದಷ್ಟು ಸ್ಪಷ್ಟ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಆದ್ದರಿಂದ, ಸರ್ವೋಚ್ಚ ನ್ಯಾಯಾಲಯಕ್ಕೆ ಇಂತಹ ಮಾಹಿತಿಯನ್ನು ಒದಗಿಸಿದವರು ಯಾರು ಎಂಬ ಪ್ರಶ್ನೆಗೆ ಉತ್ತರ ಬೇಕಾಗಿದೆ ಎಂದು ಅದು ಹೇಳಿದೆ.

ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕ ಖಜಾನೆಯಿಂದ ಅಗಾಧ ಖರ್ಚನ್ನು ಒಳಗೊಂಡಿರುವ ರಫಾಲ್ ವ್ಯವಹಾರದ ತನಿಖೆಯನ್ನು ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ) ನಡೆಸುವ ಅಗತ್ಯವಿದೆ ಎಂದು ಪುನರುಚ್ಚರಿಸಿರುವ ಸಿಪಿಐ(ಎಂ) ಕೇಂದ್ರಸಮಿತಿ ಈ ಹಗರಣದ ಹಿಂದಿರುವ ಸತ್ಯವನ್ನು ಹೊರಗೆಳೆಯಲು ಇದೊಂದೇ ದಾರಿ ಎಂದು ಹೇಳಿದೆ.

ಸಂಪಾದಕೀಯ

ಸರಕಾರಿ ಭೂಮಿ ಒತ್ತುವರಿ ತೆರವು ಮತ್ತು ಬಗರ್ ಹುಕುಂ ಹಕ್ಕುಪತ್ತ ಕೊಡುವ ಪ್ರಕ್ರಿಯೆ ತೀವ್ರಗೊಳಿಸಬೇಕು

ವಿಧಾನಸಭೆಯಲ್ಲಿ ಮಂಡಿಸಲಾದ ಒತ್ತುವರಿಯಾದ ಸರಕಾರಿ ಭೂಮಿಯನ್ನು ತೆರವು ಬಗೆಗಿನ ಸಿಎಜಿ (ಮಹಾಲೇಖಪಾಲ) ವರದಿ ಈಗಾಗಲೇ ಸಾರ್ವಜನಿಕವಾಗಿ ಗೊತ್ತಿದ್ದ 'ಗುಟ್ಟ'ನ್ನು ಬಹಿರಂಗಪಡಿಸಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ 31,050 ಎಕರೆ ಭೂಮಿಯನ್ನು ತೆರವುಗೊಳಿಸಿದ್ದಾಗಿ ಸರ್ಕಾರ ಹೇಳುತ್ತಿದ್ದರೂ ಬೇಲಿ ಹಾಕಿ ಸಂರಕ್ಷಿಸಿರುವುದು 482.69 ಎಕರೆ ಮಾತ್ರ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಉಲ್ಲೇಖಿಸಿದೆ. ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಸಭೆಯ ಅಧಿವೇಶನದಲ್ಲಿ ಮಂಡಿಸಲಾದ 'ಸರ್ಕಾರಿ ಭೂಮಿ ಮಂಜೂರಾತಿ, ಗುತ್ತಿಗೆ, ಒತ್ತುವರಿ ತೆರವುಗೊಳಿಸುವಿಕೆ ಹಾಗೂ ಅಕ್ರಮ ಹಿಡುವಳಿಗಳನ್ನು ಸಕ್ರಮಗೊಳಿಸುವಿಕೆ' ಎಂಬ ಹೆಸರಿನ ಸಿಎಜಿ ವರದಿಯಲ್ಲಿ ಒತ್ತುವರಿ ಪ್ರಕ್ರಿಯೆಯ ಮಂದಗತಿಯ ಬಗ್ಗೆ ಹೇಳಲಾಗಿದೆ. ಮಾತ್ರವಲ್ಲದೆ, ಒತ್ತುವರಿ ತೆರವಿನ ಹೆಸರಿನಲ್ಲಿ ಸರ್ಕಾರ ಎಸಗಿರುವ ಭಾನಗಡಿಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ. ಅನರ್ಹರಿಗೆ ಮಂಜೂರಾತಿ ಮಾಡುವ ಮೂಲಕ ಬೊಕ್ಕಸಕ್ಕೆ ಆಗಿರುವ ನಷ್ಟದ ಲೆಕ್ಕವನ್ನೂ ನೀಡಿದೆ, ಎಂದು ವರದಿಯಾಗಿದೆ.

ಬೆಂಗಳೂರು ನಗರದಲ್ಲಿ 18,441 ಎಕರೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 12,609 ಎಕರೆ ಭೂಮಿ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಎಂದು ಸರಕಾರ ಹೇಳುತ್ತಿದೆ. ಆದರೆ, ಸಿಎಜಿ ಅಧಿಕಾರಿಗಳ ತಂಡವು ಒತ್ತುವರಿ ತೆರವಿನ ಬಗ್ಗೆ ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕಂದಾಯ ಇಲಾಖೆ ಸಿಬ್ಬಂದಿ ಜತೆ ಜಂಟಿ ಪರಿವೀಕ್ಷಣೆ ನಡೆಸಿತು. ತೆರವುಗೊಳಿಸಲಾಗಿದೆ ಎಂದು ತಿಳಿಸಲಾಗಿದ್ದ 43 ಪ್ರಕರಣಗಳ ಪೈಕಿ 219 ಎಕರೆ 14 ಗುಂಟೆ ಒಳಗೊಂಡಂತೆ 22 ಪ್ರಕರಣಗಳಲ್ಲಿ ಒತ್ತುವರಿ ಮುಂದುವರೆದಿತ್ತು ಎಂದು ವರದಿ ವಿವರಿಸಿದೆ. ಬೆಂಗಳೂರಿನ ಸುತ್ತಮುತ್ತ ಭೂಮಿಯ ಬೆಲೆ ಮಾರ್ಗಸೂಚಿ ದರ (ಮಾರುಕಟ್ಟೆ ದರವಲ್ಲ) ಎಕರೆಗೆ ರೂ.14 ಲಕ್ಷದಿಂದ ರೂ. 12 ಕೋಟಿವರೆಗೂ ಇದೆ. ಇಂತಹ ಅತ್ಯಮೂಲ್ಯ ಬೆಲೆಬಾಳುವ ಭೂಮಿಯನ್ನು 'ತೆರವು'ಗೊಳಿಸಿರುವುದಾಗಿ ಹೇಳಿದರೂ ಅದನ್ನು ಪುನಃ ಒತ್ತುವರಿದಾರರ ಬಳಿಯೇ ಬಿಟ್ಟಿರುವುದು ಏಕೆ ಎಂದು ಸಿಎಜಿ ಪ್ರಶ್ನಿಸಿದೆ.

ಒತ್ತುವರಿ ತೆರವು ಎಂಬುದು ಕೇವಲ ಕಣ್ಣೊರೆಸುವ ತಂತ್ರ ಎಂಬುದನ್ನು ಸಿಎಜಿ ವರದಿಯು ಹಲವು ಪ್ರಕರಣಗಳ ಮೂಲಕ ವಿವರಿಸಿದೆ. ಫಲಾನುಭವಿಗಳು ಅರ್ಜಿ ಸಲ್ಲಿಸದಿದ್ದರೂ ಹಾಗೂ ಅದಕ್ಕಾಗಿ ಯಾವುದೇ ಕಾರಣ ದಾಖಲಿಸದೆ ಐದು ಪ್ರಕರಣಗಳಲ್ಲಿ ರೂ. 19.61 ಕೋಟಿ ಮೊತ್ತದಷ್ಟು ರಿಯಾಯಿತಿ ನೀಡಲಾಗಿತ್ತು. ಬೆಂಗಳೂರಿನ ಚನ್ನೇನಹಳ್ಳಿಯ ಜನಸೇವಾ ಟ್ರಸ್ಟ್, ಧಾರವಾಡದ ಕರ್ನಾಟಕ ಶಿಕ್ಷಣ ಮಂಡಳಿ, ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತು, ಕನಕಪುರದ ಮಹಾತ್ಮ ಗಾಂಧಿ ವಿದ್ಯಾಪೀಠ, ಬೆಂಗಳೂರಿನ ಕೃಷ್ಣ ಸೇವಾಶ್ರಮ ಟ್ರಸ್ಟ್ ರಿಯಾಯಿತಿ ಪಡೆದ ಸಂಸ್ಥೆಗಳು. 51 ಪ್ರಕರಣಗಳಲ್ಲಿ ರೂ. 176 ಕೋಟಿ ಮೌಲ್ಯದ ಭೂಮಿಯನ್ನು ಅನರ್ಹ ಫಲಾನುಭವಿಗಳಿಗೆ ನೀಡಲಾಗಿತ್ತು. 30 ಪ್ರಕರಣಗಳಲ್ಲಿ ಮಾರುಕಟ್ಟೆ ಮೌಲ್ಯ/ಮಾರ್ಗಸೂಚಿ ದರ ಕಡಿಮೆ ಪ್ರಮಾಣದಲ್ಲಿ ಅಳವಡಿಸಿಕೊಂಡ ಕಾರಣಕ್ಕೆ ರೂ. 17.83 ಕೋಟಿ ನಷ್ಟ. ಕೇಂದ್ರ ಮೌಲ್ಯಮಾಪನ ಸಮಿತಿಯ ತತ್ವಗಳನ್ನು ಅಳವಡಿಸಿಕೊಳ್ಳದ ಕಾರಣ 29 ಪ್ರಕರಣಗಳಲ್ಲಿ ರೂ. 35.40 ಕೋಟಿ ಮೊತ್ತದಷ್ಟು ಸಂಭಾವ್ಯ ವರಮಾನದ ಪಾವತಿಗೆ ತಗಾದೆ ಸೃಷ್ಟಿಸಲಿಲ್ಲ, ಎಂದೂ ಸಿಎಜಿ ವರದಿಯು ಹೊರಗೆಡವಿದೆ. ರಾಮನಗರ ಜಿಲ್ಲೆ ಬಿಡದಿ ಹೋಬಳಿಯಲ್ಲಿ ಚಾಮುಂಡೇಶ್ವರಿ ಬ್ಯುಲ್ಡ್ ಟೆಕ್ ಕಂಪೆನಿ ಒತ್ತುವರಿ ಮಾಡಿರುವ ಜಮೀನಿಗೆ ಸರ್ಕಾರ ನಿಗದಿಪಡಿಸಿರುವ ರೂ. 982 ಕೋಟಿ ಪಾವತಿಸದಿದ್ದರೆ ಜಮೀನನ್ನು ವಶಕ್ಕೆ ಪಡೆಯಲು ಸುಪ್ರೀಂ ಕೋರ್ಟ್ ನೀಡಿರುವ ಅಂತಿಮ ತೀರ್ಪನ್ನು ತಪ್ಪಾಗಿ ಅರ್ಥೈಸಲಾಗಿದೆ. ಎಂದೂ ಸಿಐಜಿ ವರದಿ ಟೀಕಿಸಿದೆ

ಭೂ ಒತ್ತುವರಿಯ ಸಮಸ್ಯೆ ಇಂದು–ನಿನ್ನೆಯದಲ್ಲ. ಬೆಂಗಳೂರು ನಗರದ ಸುತ್ತಮುತ್ತ ಆಗಿರುವ ಭೂ ಒತ್ತುವರಿಯ ಕುರಿತು ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ವಿಧಾನ ಸಭೆಯಲ್ಲಿ ಎತ್ತಿದ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು, ನೇಮಿಸಿದ್ದ ಎ.ಟಿ. ರಾಮಸ್ವಾಮಿ ನಾಯಕತ್ವದ (ಜಿ.ವಿ.ಶ್ರೀರಾಮರೆಡ್ಡಿ ಸೇರಿದಂತೆ) 5–ಸದಸ್ಯರ ಸಮಿತಿ ವಿವರವಾದ ತನಿಖೆ ನಡೆಸಿ 2007ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆ ವರದಿಯಂತೆ 40 ಸಾವಿರ ಕೋಟಿ ರೂ. ಮೌಲ್ಯದ ಸುಮಾರು 27,336 ಎಕರೆ ಭೂಮಿ ಒತ್ತುವರಿಯಾಗಿದೆ ಎಂದು ಉಲ್ಲೇಖಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಗಿರುವ ಸರ್ಕಾರಿ ಭೂಮಿ ಒತ್ತುವರಿ ಕುರಿತು ಬಾಲಸುಬ್ರಮಣಿಯನ್ ಅವರು 2011ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, 11.07 ಲಕ್ಷ ಎಕರೆ ಭೂಮಿ ಒತ್ತುವರಿಯಾಗಿದೆ ಎಂದು ತಿಳಿಸಿದೆ. ಅದರ ನಂತರವೂ ಸತತವಾಗಿ ಒತ್ತುವರಿ ಮುಂದುವರೆದಿದೆ. 2011ರಿಂದ 2014ರವರೆಗೆ ಸುಮಾರು 30 ಲಕ್ಷ ಎಕರೆ ಸರ್ಕಾರಿ ಭೂಮಿ ಭೂಗಳ್ಳರ ಪಾಲಾಗಿದೆ ಎಂದು ಅಂದಾಜು ಮಾಡಲಾಗಿದೆ. ಹತ್ತಾರು ಸಾವಿರಾರು ಕೋಟಿ ರೂ.ಗಳ ಮೌಲ್ಯದ ಭೂಮಿಯನ್ನು ಪ್ರಭಾವಿ ರಿಯಲ್ ಎಸ್ಟೇಟ್ ಧಣಿಗಳು, ರಾಜಕಾರಣಿಗಳು ಮತ್ತು ಅಧಿಕಾರಿಗಳ ದುಷ್ಟಕೂಟ ನುಂಗಿ ಹಾಕುತ್ತಿದೆ.

ಇನ್ನೊಂದು ಕಡೆ 2011ರ ಸಾಮಾಜಿಕ ಮತ್ತು ಆರ್ಥಿಕ ಜನಗಣತಿಯ ಪ್ರಕಾರ ಎಪಿಎಲ್, ಬಿಪಿಎಲ್ ಸೇರಿದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಒಟ್ಟು 69 ಲಕ್ಷ ಮಂದಿ ವಸತಿ ರಹಿತರಿದ್ದಾರೆ. ಸರಕಾರದ ಯಾವುದೇ ಸಮೀಕ್ಷೆಯಂತೆ ಇದು ಸಹ ಸಮಸ್ಯೆಯ ಅಗಾಧತೆಯ ಕಡಮೆ ಅಂದಾಜು ಎಂಬುದರ ಬಗ್ಗೆ ಸಂಶಯವಿಲ್ಲ. ಆದರೆ ಸರಕಾರಿ ಭೂಮಿಯ ಒತ್ತುವರಿಯನ್ನು ಶೀಘ್ರವಾಗಿ ತೆರವುಗೊಳಿಸಿದರೆ, ಅದರಿಂದ ವಸತಿ ರಹಿತರಿಗೆ ನಿವೇಶನ ಅಥವಾ ವಸತಿಗೆ ವ್ಯವಸ್ಥೆ ಮಾಡಬಹುದು ಎಂಬುದು ಸ್ವಯಂ–ವಿದಿತ. ಆದ್ದರಿಂದ ಸರಕಾರ ಸಿಎಜಿ ವರದಿಯಿಂದ ಎಚ್ಚೆತ್ತುಕೊಂಡು, ಸರಕಾರಿ ಭೂಮಿಯ ಒತ್ತುವರಿಯನ್ನು ಶೀಘ್ರವಾಗಿ ತೆರವುಗೊಳಿಸಲು ತುರ್ತು ಕ್ರಮ ವಹಿಸಬೇಕು.

ಒಂದು ಕಡೆ ಪ್ರಭಾವಿಗಳು ಸರಕಾರಿ ಜಮೀನನ್ನು ಒತ್ತುವರಿ ಮಾಡುತ್ತಿದ್ದರೆ, ಇನ್ನೊಂದು ಕಡೆ ಬಡವರು ಬಗರ್ ಹುಕುಂ ಜಮೀನನ್ನು ಅಭಿವೃದ್ಧಿ ಪಡಿಸುತ್ತಿದ್ದರು. ಬಂಜರು ಅಥವಾ ಖಾಲಿ ಬಿದ್ದಿರುವ ಸರಕಾರಿಯೋ ಅಥವಾ ಸಾರ್ವಜನಿಕ ಜಮೀನನ್ನು ಬಡವರು ಕೃಷಿಗೆ ಅಥವಾ ಇತರ ತನ್ನ ಜೀವನೋಪಾಯಗಳಿಗಾಗಿ ಬಳಸಿದ ಅಥವಾ ಕಷ್ಟ ಪಟ್ಟು ದುಡಿದು ಅಭಿವೃದ್ಧಿ ಪಡಿಸಿದ್ದನ್ನು ಬಗರ್ ಹುಕುಂ ಜಮೀನು ಎಂದು ಪರಿಗಣಿಸಲಾಗುತ್ತದೆ. ಬಗರ್ ಹುಕುಂ ಸಾಗುವಳಿದಾರರು ತಮಗೆ ಹಕ್ಕುಪತ್ರ ಕೊಡಬೇಕು ಎಂದು ಹೋರಾಟ ಮಾಡುತ್ತಾ ಬಂದಿದ್ದಾರೆ. ಸರಕಾರಗಳು ಭಾರೀ ಪ್ರಮಾಣದ ಜಮೀನನ್ನು ಒತ್ತುವರಿ ಮಾಡಿದ್ದನ್ನು, ಬಡವರ ಬಗರ್ ಹುಕುಂ ಜಮೀನನ್ನು ಒಂದೆ ತಕ್ಕಡಿಯಲ್ಲಿ ತೂಗುತ್ತಾ ಇಬ್ಬರನ್ನೂ ಕಾನೂನು ಪ್ರಕಾರ 'ಭೂಗಳ್ಳರು' ಎಂದು ಪರಿಗಣಿಸುತ್ತದೆ. ಆದರೆ ಬಗರ್ ಹುಕುಂ ಸಾಗುವಳಿದಾರರ ಸತತ ಹೋರಾಟದ ಒತ್ತಡದಿಂದ ಅವರ ಜಮೀನ್ನನು ಸಕ್ರಮಗೊಳಿಸಲು ಕಾನೂನಿಗೆ ಅಗತ್ಯ ತಿದ್ದುಪಡಿ ತರಲಾಗಿತ್ತು.

ಶಾಸಕರ ಅಧ್ಯಕ್ಷತೆಯ ಸಮಿತಿಗಳು ಈ ಅರ್ಜಿಗಳನ್ನು ವಿಲೇವಾರಿ ಮಾಡಬೇಕಿದ್ದು, ಬಗರ್ ಹುಕುಂ ಭೂಮಿಗಳ ಸಕ್ರಮಕ್ಕೆ ವಿಳಂಬವಾಗುತ್ತಿದೆ. ನಮೂನೆ 50 ರಲ್ಲಿ ಸಲ್ಲಿಕೆಯಾದ 9,937 ಮತ್ತು ನಮೂನೆ 53ರಲ್ಲಿ ಸಲ್ಲಿಕೆಯಾದ 1,84,329 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆಯೆಂದು ಸರಕಾರ ಒಪ್ಪಿಕೊಂಡಿದೆ. ಬಗರ್ಹುಕುಂ ಸಾಗುವಳಿದಾರರ ಜಮೀನು ಸಕ್ರಮಗೊಳಿಸಲು ಸಲ್ಲಿಕೆಯಾಗಿ ಬಾಕಿ ಉಳಿದಿರುವ ಅರ್ಜಿಗಳ ವಿಲೇವಾರಿಗೆ ಎರಡು ವರ್ಷ ಅವಧಿ ವಿಸ್ತರಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತರಲು ಮಂಡಿಸಿದ ಮಸೂದೆ ವಿಧಾನಸಭೆಯ ಬೆಳಗಾವಿ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕಾರಗೊಂಡಿದೆ. ಇದು ಸ್ವಾಗತಾರ್ಹ. ಆದರೆ ಈ ಪ್ರಕ್ರಿಯೆಯನ್ನು ಶೀಘ್ರವಾಗಿ ವಿಲೇವಾರಿ ಮಾಡಿ ಹಕ್ಕುಪತ್ರ ಕೊಡಲು ಸರಕಾರ ಕ್ರಮ ವಹಿಸಬೇಕು.

ಸರಕಾರಿ ಭೂಮಿ ಒತ್ತುವರಿ ತೆರವು ಮತ್ತು ಬಗರ್ ಹುಕುಂ ಸಾಗವಳಿದಾರರಿಗೆ ಹಕ್ಕುಪತ್ತ ಕೊಡುವ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು. ವಸತಿ/ನಿವೇಶನ ರಹಿತರಿಗೆ ಮನೆ/ನಿವೇಶನ ಕಲ್ಪಿಸುವ ಕಾರ್ಯಕ್ರಮವನ್ನು ಸರಕಾರ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಅದಕ್ಕಾಗಿ ಸರಕಾರದ ಮೇಲೆ ಚಳುವಳಿಯ ಮೂಲಕ ಒತ್ತಡ ಹೇರಲು ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಮುಂದಾಗಬೇಕು.

ಯು. ಬಸವರಾಜ್: ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ



ಸಿಪಿಐ(ಎಂ) ಕೇಂದ್ರ ಸಮಿತಿ ಡಿಸೆಂಬರ್ 15–16 ರಂದು ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಜಿ.ವಿ.ಶ್ರೀರಾಮರೆಡ್ಡಿ ಅವರನ್ನು, ಗಂಭೀರ ಅನುಚಿತ ನಡತೆಯ ಆರೋಪಗಳಿಂದಾಗಿ ಪಕ್ಷದ ಎಲ್ಲಾ ಚುನಾಯಿತ ಸ್ಥಾನಗಳಿಂದ ತೆಗೆಯಲು ನಿರ್ಧರಿಸಿದೆ. ಕರ್ನಾಟಕದಲ್ಲಿ ಸಿಪಿಐ(ಎಂ) ಪಕ್ಷದ ಸಂಘಟನಾ ಪರಿಸ್ಥಿತಿಯನ್ನು ಪರಿಶೀಲಿಸಿ ಕೇಂದ್ರ ಸಮಿತಿ ಇನ್ನೂ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದೆ.

ಡಿಸೆಂಬರ್ 18 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಕೆ.ಶಂಕರ್ ಅವರು ವಹಿಸಿದ್ದರು. ಈ ಸಭೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಮತ್ತು ಇತರ ಪೊಲಿಟ್ ಬ್ಯುರೊ ಸದಸ್ಯರುಗಳಾದ ಎಸ್.ರಾಮಚಂದ್ರನ್ ಪಿಳ್ಳೆ, ಪ್ರಕಾಶ್ ಕಾರಟ್, ಬಿ.ವಿ.ರಾಘವುಲು ಮತ್ತು ಎಂ.ಎ.ಬೇಬಿ ಭಾಗವಹಿಸಿದ್ದರು.

ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಅವರು, ಕರ್ನಾಟಕದಲ್ಲಿ ಪಕ್ಷದ ಸಂಘಟನಾ ಪರಿಸ್ಥಿತಿಯನ್ನು ಪರಿಶೀಲಿಸಿ ಕೇಂದ್ರ ಸಮಿತಿ ತೆಗೆದುಕೊಂಡಿರುವ ನಿರ್ಣಯಗಳನ್ನು ವರದಿ ಮಾಡಿ ವಿವರಿಸಿದರು. ರಾಜ್ಯದಲ್ಲಿ ಪಕ್ಷದ ಮತ್ತು ಪಕ್ಷದ ನಾಯಕತ್ವದ ಸಾಮೂಹಿಕ ಸಂಘಟನೆಗಳ ಹರಡುತ್ತಿರುವ ಚಳುವಳಿಗಳ, ಚಟುವಟಿಕೆಗಳ ಒಟ್ಟು ಸಾಧ್ಯತೆಗಳಿಗೆ ಅನುಗುಣವಾಗಿ ರಾಜಕೀಯ ಮುನ್ನಡೆ ಸಾಧಿಸಲು ಬೇಕಾದ ಐಕ್ಯತೆಯನ್ನು ಬಲಪಡಿಸಲು ಈ ನಿರ್ಣಯಗಳು ನೆರವಾಗುತ್ತವೆ. ಈ ನಿರ್ಣಯಗಳನ್ನು ಚರ್ಚಿಸಿ ಮುತುವರ್ಜಿಯಿಂದ ಜಾರಿ ಮಾಡಲು ಅವರು ರಾಜ್ಯ ಸಮಿತಿಗೆ ಕರೆ ನೀಡಿದರು. ರಾಜ್ಯ ಸಮಿತಿ ಈ ಕುರಿತು ಚರ್ಚಿಸಿ ಅವುಗಳ ಜಾರಿಗೆ ಬೇಕಾದ ನಿರ್ಣಯಗಳನ್ನು ಅಂಗೀಕರಿಸಿತು.

ಯು. ಬಸವರಾಜ್ ಅವರನ್ನು ರಾಜ್ಯ ಸಮಿತಿ ತನ್ನ ಹೊಸ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಚುನಾಯಿಸಿತು.

ಕೇಂದ್ರ ಮತ್ತು ರಾಜ್ಯ ಸಮಿತಿಯ ಈ ನಿರ್ಣಯಗಳನ್ನು ಪಕ್ಷದ ಎಲ್ಲಾ ಜಿಲ್ಲಾ ಸಮಿತಿಗಳು ಮತ್ತು ಜಿಲ್ಲಾ ಸಂಘಟನಾ ಸಮಿತಿಗಳಿಗೆ ಪಿ.ಬಿ.ಸದಸ್ಯರು ವರದಿ ಮಾಡಲಿದ್ದು, ಅದನ್ನು ಮುಂದಿನ 3 ವಾರಗಳೊಳಗೆ ಮುಗಿಸಬೇಕು ಎಂದೂ ನಿರ್ಧರಿಸಲಾಯಿತು. ಅದರ ವೇಳಾಪಟ್ಟಿ ಇಂತಿದೆ:

ಕ್ರ.ಸಂ.	ಜಿಲ್ಲಾ ಸಮಿತಿ ಸಭೆ ನಡೆಯುವ ಸ್ಥಳ	ಜಿಲ್ಲಾ ಸಮಿತಿಗಳು	ದಿನಾಂಕ	ಪಿ.ಬಿ. ಸದಸ್ಯರುಗಳು
1	ಇ.ಎಂ.ಎಸ್. ಭವನ, ಬೆಂಗಳೂರು.	ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	19–12–2018	ಕಾಂ. ಪ್ರಕಾಶ್ ಕಾರಟ್
2	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	19–12–2018	ಕಾಂ. ಎಸ್.ಆರ್.ಪಿಳ್ಳೆ, ಕಾಂ. ಎಂ.ಎ. ಬೇಬಿ
3	ಗುಲ್ಬರ್ಗಾ	ಗುಲ್ಬರ್ಗಾ, ಬೀದರ್	19–12–2018	ಕಾಂ. ಬಿ.ವಿ. ರಾಘವಲು
4	ಮಂಗಳೂರು	ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ	22–12–2018	ಕಾಂ. ಎಂ.ಎ. ಬೇಬಿ
5	ಬಳ್ಳಾರಿ	ಬಳ್ಳಾರಿ, ರಾಯಚೂರು, ಕೊಪ್ಪಳ, ಚಿತ್ರದುರ್ಗ, ದಾವಣಗೆರೆ, ಯಾದಗಿರಿ	27–12–2018	ಕಾಂ. ಬಿ.ವಿ. ರಾಘವಲು
6	ಹುಬ್ಬಳ್ಳಿ	ಧಾರವಾಡ, ಬೆಳಗಾವಿ, ವಿಜಯಪುರ	2–1–2019	ಕಾಂ. ಎಂ.ಎ. ಬೇಬಿ
7	ಮೈಸೂರು	ಮೈಸೂರು, ಮಂಡ್ಯ, ಕೊಡಗು, ಹಾಸನ	4–1–2019	ಕಾಂ. ಎಂ.ಎ. ಬೇಬಿ
8	ಕೋಲಾರ	ಕೋಲಾರ	5–1–2019	ಕಾಂ. ಎಂ.ಎ. ಬೇಬಿ
9	ತುಮಕೂರು	ತುಮಕೂರು	5–1–2019	ಕಾಂ. ವಿಜಯ ರಾಘವನ್
10	ಬೆಂಗಳೂರು	ರಾಜ್ಯ ಸಮಿತಿ ಅಡಿಯ ಶಾಖೆಗಳು ಮತ್ತು ಬೆಂಗಳೂರು ಉತ್ತರ ಮತ್ತು ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಯ ಪಕ್ಷದ ಸಾಮಾನ್ಯ ಸದಸ್ಯರುಗಳಿಗೆ	13–1–2019	ಕಾಂ. ಎಂ.ಎ. ಬೇಬಿ

ಆ ನಂತರ ಪಕ್ಷದ ಸರ್ವಸದಸ್ಯರ ಸಭೆಗಳಲ್ಲಿ ಎಲ್ಲಾ ಸದಸ್ಯರಿಗೂ ಇವುಗಳನ್ನು ವರದಿ ಮಾಡಲಾಗುವುದು. ಈ ಎಲ್ಲಾ ಸಭೆಗಳಲ್ಲಿ ನೂತನ ಕಾರ್ಯದರ್ಶಿಗಳು ಹಾಜರಿರುತ್ತಾರೆ.

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಸೋಲಿಸಿ: ಇಂಟಕ್ ನಾಯಕ ರಾಕೇಶ್ ಮಲ್ಲಿ



ವಿಪರೀತ ಬೆಲೆಯೇರಿಕೆಯಿಂದಾಗಿ ದೇಶದ ಜನತೆ ತತ್ತರಿಸುತ್ತಿದ್ದಾರೆ. ಕೇಂದ್ರ ಸರಕಾರದ 7ನೇ ವೇತನ ಆಯೋಗವು ಕನಿಷ್ಠ ಕೂಲಿ ರೂ 18,000 ನೀಡಬೇಕೆಂದು ಶಿಫಾರಸು ಮಾಡಿದ್ದರೂ, ಕಳೆದ 2 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಮೂಲಕ ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ಕಾಪಾಡುತ್ತಿದೆ. ಒಳ್ಳೆಯ ದಿನಗಳು ಬರಲಿದೆ ಎಂಬ ಭ್ರಮೆಯನ್ನು ಸೃಷ್ಟಿಸಿದ ಕೇಂದ್ರ ಸರಕಾರವು ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ ಮೂಲಕ ಮಾಲಕ ವರ್ಗದ ಪರವಾಗಿ ಕಾರ್ಯ ನಿರ್ವಹಿಸುತ್ತಿದೆ. ಹೀಗಾಗಿ ಸರಕಾರವು ದೇಶದ ದುಡಿಯುವ ವರ್ಗದ ಮೇಲೆ ಗಂಭೀರವಾದ ಪ್ರಹಾರವನ್ನು ನಡೆಸುತ್ತಿದೆ ಎಂದು ಕೇಂದ್ರ ಕಾರ್ಮಿಕ ಸಂಘಟನೆಯಾದ ಇಂಟಕ್ ನ ರಾಜ್ಯಾಧ್ಯಕ್ಷರಾದ ರಾಕೇಶ್ ಮಲ್ಲಿ ಯವರು ಹೇಳಿದರು.

2019ರ ಜನವರಿ 8, 9 ರಂದು ಜರುಗಲಿರುವ ಅಖಿಲ ಭಾರತ ಮಹಾಮುಷ್ಕರವನ್ನು ಯಶಸ್ವಿಗೊಳಿಸುವ ಸಲುವಾಗಿ ಅಯೋಜಿಸಲಾದ 3 ದಿನಗಳ ಕಾಲ ದ.ಕ.ಜಿಲ್ಲೆಯಾದ್ಯಂತ ಸಂಚರಿಸಲಿರುವ ವಾಹನ ಪ್ರಚಾರ ಜಾಥಾವನ್ನು ಉದ್ಘಾಟಿಸುತ್ತಾ ಅವರು, ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ, 'ಲಾಭದಾಯಕವಾದ ಜಿಲ್ಲೆಯ ವಿಜಯ ಬ್ಯಾಂಕ್ ನ್ನು ನಷ್ಟಗೊಳಪಟ್ಟ ಬ್ಯಾಂಕ್ ನೊಂದಿಗೆ ವಿಲೀನಗೊಳಿಸುವ ಮೂಲಕ ವಿಜಯ ಬ್ಯಾಂಕನ್ನೇ ಹೇಳ ಹೆಸರಿಲ್ಲದಂತೆ ಮಾಡಲು ಹೊರಟಿದೆ. ಮಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕೂಡ ಖಾಸಗೀಕರಣ ಮಾಡಲು ಹೊರಟ ಕೇಂದ್ರ ಸರಕಾರದ ನೀತಿಯಿಂದಾಗಿ ಜಿಲ್ಲೆಗೆ ಭಾರೀ ಪೆಟ್ಟು ಬೀಳಲಿದೆ. ಯುವಜನರು ಉದ್ಯೋಗವಿಲ್ಲದೆ ಪರದಾಡುತ್ತಿದ್ದಾರೆ. ಬೀಡಿ ಉದ್ಯಮ ಭಾರೀ ಸಂಕಷ್ಟದಲ್ಲಿದೆ. ಆದ್ದರಿಂದ ಕಾರ್ಮಿಕ ವರ್ಗ ಕರೆ ನೀಡಿದ ಮಹಾ ಮುಷ್ಕರವನ್ನು ಜಿಲ್ಲೆಯಾದ್ಯಂತ ಯಶಸ್ವಿಗೊಳಿಸಲು ಜಿಲ್ಲೆಯ ಜನತೆ ಮುಂದಾಗಬೇಕು' ಎಂದು ಕರೆ ನೀಡಿದರು.

AITUC ಜಿಲ್ಲಾ ಮುಖಂಡರಾದ ಎಚ್ ವಿ ರಾವ್ ರವರು ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಸವಿವರವಾಗಿ ಹೇಳುತ್ತಾ ಕಾರ್ಮಿಕ ವರ್ಗ ಒಂದಾಗಿ ಹೋರಾಡಬೇಕೆಂದು ಹೇಳಿದರು.

ಈ ಸಂಧರ್ಭದಲ್ಲಿ ಇಂಟಕ್ ಜಿಲ್ಲಾ ನಾಯಕರಾದ ಮನೋಹರ ಶೆಟ್ಟಿ, ಚಿತ್ತರಂಜನ್ ಶೆಟ್ಟಿ, ವಾಲ್ಟರ್ ಪಿಂಟೋ, ಉಮೇಶ್ ದೇವಾಡಿಗ, ಉಮೇಶ್ ಕೋಟ್ಯಾನ್, AITUC ಮುಖಂಡರಾದ ಸೀತಾರಾಮ ಬೇರಿಂಜ, ಕರುಣಾಕರ್, ಶೇಖರ್, ಸುರೇಶ್ ಕುಮಾರ್, ವಿ.ಕುಕ್ಯಾನ್, CITU ಜಿಲ್ಲಾ ನಾಯಕರಾದ ಸುನಿಲ್ ಕುಮಾರ್ ಬಜಾಲ್, ಯು.ಬಿ.ಲೋಕಯ್ಯ, ಯೋಗೀಶ್ ಜಪ್ಪಿನಮೊಗರು, ಜಯಂತಿ ಶೆಟ್ಟಿ, ಭಾರತಿ ಬೋಳಾರ, ರಾಮಣ್ಣ ವಿಟ್ಲ, HMS ಜಿಲ್ಲಾ ಮುಖಂಡರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

–ಸುನಿಲ್ ಕುಮಾರ್ ಬಜಾಲ್

ಬೆಳಗಾವಿಯಲ್ಲಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಪ್ರತಿಭಟನೆ



ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಹಲವು ಬೇಡಿಕೆಗಳನ್ನು ಈಡೇರುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು. 20 ಡಿಸೆಂಬರ್ 2018 ರ ಗುರುವಾರ ಸುವರ್ಣ ವಿಧಾನ ಸೌಧ ಎದುರು ಸುವರ್ಣ ಗಾರ್ಡನ್ ಟೆಂಟ್ ನಂಬರ್ 3 ರಲ್ಲಿ ಸಾಮೂಹಿಕ ಧರಣಿ ನಡೆಯಿತು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರು ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರು ಶ್ರೀ ಪ್ರಿಯಾಂಕ ಖರ್ಗೆ ರವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು

ಪ್ರಮುಖ ಬೇಡಿಕೆಗಳು

* 3312 ಜನ ಹಾಸ್ಟೆಲ್ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುವ ಆದೇಶ ರದ್ದಾಗ ಬೇಕು.
* ನಿವೃತ್ತಿ ವರೆಗೆ ಸೇವಾ ಭದ್ರತೆ ಮತ್ತು ಕಾಯಂ ಮಾಡಲು ಒತ್ತಾಯಿಸಿ
* ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಥಾಸ್ಥಿತಿ ಆದೇಶ ಜಾರಿ ಮಾಡದೇ ಕೆಲಸದಿಂದ ತೆಗೆದು ಹಾಕಿರುವ ನೌಕರರನ್ನು ಮತ್ತೆ ನೇಮಕ ಮಾಡಿ ಕೊಳ್ಳಲು ಒತ್ತಾಯಿಸಿ
* ಬಾಕಿ ಇರುವ ಸಂಬಳ ತಕ್ಷಣ ಕೊಡಲು ಆಗ್ರಹಿಸಿ.
* ESI ಮತ್ತು PF ಹಾಗೂ ಕಾರ್ಮಿಕ ಕಾನೂನುಗಳ ಜಾರಿಗೆ ಒತ್ತಾಯಿಸಿ

LIC ಏಜೆಂಟರ ರಾಜ್ಯ ಸಮ್ಮೇಳನ

ಸಿಐಟಿಯು ಸಂಯೋಜಿತ LIC ಏಜೆಂಟರ ಸಂಘಟನೆ (LICOI)ನ 5 ನೇ ಕರ್ನಾಟಕ ರಾಜ್ಯ ಸಮ್ಮೇಳನ ಉದ್ಘಾಟಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ರಾದ ಕಾಮ್ರೇಡ್ ಕೆ.ಪ್ರಕಾಶ್ ಮಾತಾನಾಡುತ್ತಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರು ಟೌನ್ ನ ಶಿವಪುರ ದ ಕಾಮ್ರೇಡ್ ಎಸ್. ಪ್ರಸನ್ನ ಕುಮಾರ್ ವೇದಿಕೆ ಎಂದು ಹೆಸರಿಸಲಾದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ರಾಜ್ಯಾದ್ಯಂತ ವಿಮಾ ಪ್ರತಿನಿಧಿಗಳು ಭಾಗವಹಿಸಿದ್ದಾರೆ.



ಅಕ್ಷರದಾಸೋಹ ನೌಕರರ 4 ನೇ ಉಡುಪಿ ಜಿಲ್ಲಾ ಸಮ್ಮೇಳನ

ಉಡುಪಿ ಜಿಲ್ಲೆಯ ಅಕ್ಷರದಾಸೋಹ ನೌಕರರ 4ನೇ ಸಮ್ಮೇಳನ ನಾರಾಯಣ ಗುರು ಸಭಾಂಗಣದಲ್ಲಿ ದಾಸ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಯಮುನಾ ಗಾಂವ್ಕರ್ ಉದ್ಘಾಟಿಸಿ ಮಾತನಾಡಿದರು. ಹಸಿವು ಅಪೌಷ್ಠಿಕತೆ ಲಿಂಗ ಮತ್ತು ಸಾಮಾಜಿಕ ತಾರತಮ್ಯದ ಅಪಮಾನ ಹಾಗೂ ಅನಕ್ಷರತೆಯ ಕಾರಣಕ್ಕಾಗಿ ದೇಶದ ಪ್ರಗತಿ ಕುಂಠಿತವಾಗುತ್ತಿದೆ. ಇದನ್ನು ತಡೆಯಲು ಇರುವ ಸಂವಿಧಾನಬದ್ಧವಾದ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಖಾಸಗಿಕರಣ ಮತ್ತು ಗುತ್ತಿಗೆ ಆಧಾರಿತವಾಗಿ ಕೆಲಸ ಪಡೆಯುವುದು ಹೆಚ್ಚಿದ್ದರಿಂದ, ಬೆಲೆ ವಿಪರೀತ ಏರಿದರೂ ಕೂಲಿ ಹೆಚ್ಚಿಸದೇ ಇರುವುದರಿಂದ ದುಡಿಮೆಗಾರರಿಗೆ ನ್ಯಾಯ ಸಿಗುತ್ತಿಲ್ಲ. ಬಿಸಿ ಅಡುಗೆಯಂಥ ಸಾಮಾಜಿಕ ಕಾಳಜಿಯ ಯೋಜನೆಯು ಬಿಜೆಪಿ ಸರ್ಕಾರದ ಮಹಿಳಾ ವಿರೋಧಿ ಆರ್ಥಿಕ ನೀತಿಯಿಂದ ಬಳಲುತ್ತಿದೆ, ಬಜೆಟ್ ಹಣ ಕಡಿತವಾಗಿದೆ. ಹಿಂದಿನ ಯುಪಿಎ ಸರ್ಕಾರವು ಹೆಚ್ಚಿಸಿದ ಸಾವಿರ ರೂಪಾಯಿ ಕೂಡ ಎನ್ ಡಿ ಎ ಮೋದಿ ಸರಕಾರ ಜಾರಿ ಮಾಡದೇ ಮಹಿಳೆಯರ ಅನ್ನ ಕಸಿದಿದೆ. ಮೇಲಾಗಿ ಶ್ರೀಮಂತರ ಚಮಚಾಗಿರಿ ರಾಜಕಾರಣ ಭಾಗವಾಗಿ ಕೇಂದ್ರೀಕೃತ ಅಡುಗೆ ಪದ್ಧತಿಗೆ ಬಿಸಿಯೂಟ ವಹಿಸಲಾಗುತ್ತಿದೆ. ಮಹಿಳೆಯರನ್ನು ಅಪವಿತ್ರದ ಕಾರಣವೊಡ್ಡಿ ಅಪಮಾನ ಮಾಡಿ ಸಾಮಾಜಿಕ ಧಾರ್ಮಿಕ ಹಕ್ಕಿನಿಂದ ವಂಚಿಸುತ್ತಿದೆ. ಕನಿಷ್ಠ ಕೂಲಿ ಕೊಡಿ ಎಂದರೆ, ಸಹಸ್ರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಪಟೇಲ್ ಮೂರ್ತಿ, ರಾಮ ಮೂರ್ತಿ, ವಿದೇಶಯಾತ್ರೆ, ಅದಾನಿ ಅಂಬಾನಿ ಮಲ್ಯಾಗಳಂಥ ಲೂಟಿಕೋರರಿಗೆ ಹಣಕಾಸು ಸಹಾಯ ನೀಡಿ ದೇಶ ಬಿಟ್ಟೋಡಲು ದಾರಿ ಮಾಡುತ್ತಿದೆ. ಭ್ರಷ್ಟಾಚಾರ ಮತ್ತು ಸುಳ್ಳು, ವಂಚನೆಯಲ್ಲೆ ಇರುವ ಬಿಜೆಪಿ ಕೇಂದ್ರ ಸರ್ಕಾರ, ಇತ್ತ ಅಯೋಧ್ಯೆ ಶಬರಿಮಲೈ ವಿಚಾರ ಕೈಗೆತ್ತಿ ಜನತೆಯಲ್ಲಿ ದ್ವೇಷದ ವಾತಾವರಣ ಸೃಷ್ಟಿಸುತ್ತಿದೆ. ಇದರ ವಿರುದ್ಧ ಜನವರಿ 8–9 ದೇಶಾದ್ಯಂತ ನಡೆಯುವ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ಮಾಡೋಣ ಎಂದರು.



ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಶಂಕರ್, ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಶುಭಕೋರಿ ಮಾರ್ಗದರ್ಶನ ಮಾಡಿ ಮಾತನಾಡಿದರು. ಸಂಘಟನಾತ್ಮಕ ಕೆಲಸ ಕಲಾಪಗಳು ವರದಿ ಮಂಡನೆಯ ನಂತರ ನಡೆದ ನೂತನ ಸಮಿತಿ ಆಯ್ಕೆ ನಡೆಯಿತು. ಗೌರವಾಧ್ಯಕ್ಷರಾಗಿ ದಾಸ್ ಭಂಡಾರಿ, ಅಧ್ಯಕ್ಷರಾಗಿ ಜಯಶ್ರೀ ಬೈಂದೂರು, ಉಪಾಧ್ಯಕ್ಷರಾಗಿ ಲತಾ ಹೊಸಂಗಡಿ, ಬೇಬಿ ಭಂಡಾರಿ ಕಾರ್ಕಳ, ನಾಗರತ್ನ ಕುಂದಾಪುರ, ಪ್ರಧಾನ ಕಾರ್ಯದರ್ಶಿಯಾಗಿ ಸುನಂದಾ ಉಡುಪಿ, ಸಹಕಾರ್ಯದರ್ಶಿಗಳಾಗಿ ಸಿಂಗಾರಿ ನಾವುಂದ, ಸುನಿತಾ ಶೆಟ್ಟಿ ಕಾರ್ಕಳ, ಭವಾನಿ ಬ್ರಹ್ಮಾವರ, ಖಜಾಂಚಿಯಾಗಿ ಕಮಲಾ ಉಡುಪಿ ಹಾಗೂ ಕಾರ್ಯಕಾರಿ ಸಮಿತಿಗೆ 12 ಜನ ಆಯ್ಕೆಯಾದರು. ಇಟ್ಟ ಹೆಜ್ಜೆ ಮಂದಕೆ ಹಾಡಿನೊಂದಿಗೆ ಹಿರಿಯ ಸಂಗಾತಿ ಬೇಬಿ ಭಂಡಾರಿ ಚಳುವಳಿಯ ಬೇಡಿಕೆಯ ಘೋಷಣೆ ಹಾಕಿ ಚಾಲನೆ ನೀಡಿದರೆ, 'ಗೆಲುವು ನಮ್ಮದು' ಎಂಬ ಸಾಮೂಹಿಕ ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

BSNL ಗುತ್ತಿಗೆ ನೌಕರರ ಪ್ರತಿಭಟನೆ

ಬಾಕಿಯಾದ 2 ತಿಂಗಳ ಸಂಬಳವನ್ನು ಕೂಡಲೇ ನೀಡಬೇಕು ಹಾಗೂ ಕೆಲಸದ ಭದ್ರತೆ ನೀಡಬೇಕೆಂದು ಒತ್ತಾಯಿಸಿ BSNL ಗುತ್ತಿಗೆ ನೌಕರರು ಮಂಗಳೂರಿನಲ್ಲಿರುವ BSNL ಪ್ರಧಾನ ಕಚೇರಿಯೆದುರು CITU ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು.



ಬಳ್ಳಾರಿಯ ಮೂರು ದಾರುಣ ಆತ್ಮಹತ್ಯೆಗಳು
ಎರಡು ರೈತರ ಆತ್ಮಹತ್ಯೆ



ಕರಿಬಸಪ್ಪ

ಬಳ್ಳಾರಿ ಜಿಲ್ಲಾ ಕೊಟ್ಟೂರು ತಾಲೂಕಿನ ಕಾಳಾಪುರ ಗ್ರಾಮದ ಲಿಂಗಾಯತ ಜನ ಸಮುದಾಯಕ್ಕೆ ಸೇರಿದ ದಿನಾಂಕ 20.09.2018 ರಂದು ತೀವ್ರ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಯುವ ರೈತ ಕರಿಬಸಪ್ಪ (42 ವರ್ಷ) ನವರ ದುಃಖ ತಪ್ತ ಕುಟುಂಬವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಉನ್ನತ ಮಟ್ಟದ ನಿಯೋಗ ದಿನಾಂಕ ಡಿಸೆಂಬರ್ 7 ರಂದು ಭೇಟಿ ಮಾಡಿ ಸಂತೈಸಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಯು.ಬಸವರಾಜ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಅಧ್ಯಕ್ಷರಾದ ಬಿ. ಮಾಳಮ್ಮ ಮತ್ತು ಕೆಪಿಆರ್ ಎಸ್ ಜಿಲ್ಲಾ ಕಾರ್ಯದರ್ಶಿಗಳಾದ ಗಾಳಿ ಬಸವರಾಜ, ರೈತ ಹಾಗೂ ಹಮಾಲಿ ಸಂಘದ ಮುಖಂಡರಾದ ಯು.ತಿಪ್ಪೇಸ್ವಾಮಿ ಹಾಗೂ ದಲಿತ ಹಕ್ಕು ಸಮಿತಿ ತಾಲೂಕಾ ಸಂಚಾಲಕರಾದ ರುದ್ರೇಶ ರವರು ನಿಯೋಗದಲ್ಲಿದ್ದರು.

ದಿ. ಕರಿಬಸಪ್ಪ ನವರು, ಮಾರುತಿ (ಪಿಯುಸಿ ಮೊದಲ ವರ್ಷ) ಹಾಗೂ ಹರೀಶ (9 ನೇ ತರಗತಿ) ಎಂಬ ಇಬ್ಬರು ಮಕ್ಕಳು ಹಾಗೂ ಪತ್ನಿ ಶ್ರೀಮತಿ ನಾಗವೇಣಿ (35 ವರ್ಷ) ಇವರೊಂದಿಗೆ, ತಂದೆ,ತಾಯಿ, ಇಬ್ಬರು ತಮ್ಮಂದಿರು ಸೇರಿದಂತೆ ಒಟ್ಟು 11 ಜನರಿರುವ ತುಂಬಿದ ಕುಟುಂಬವನ್ನು ಅಗಲಿದ್ದಾರೆ.

ಮಳೆಯಾಶ್ರಯದ 8 ಎಕರೆ ಜಮೀನಿನಲ್ಲಿ ಬೇಸಾಯದಲ್ಲಿ ತೊಡಗಿದ್ದರು. ಅದು ಕುಟುಂಬವನ್ನು ಸಲುಹದೆಂದು ಒಂದು ಸಣ್ಣ ಅಂಗಡಿಯೊಂದನ್ನು ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ಸತತವಾದ ಬರಗಾಲದಿಂದ ತತ್ತರಿಸಿದ ಕೆಳ ಮದ್ಯಮ ವರ್ಗದ ಈ ಕುಟುಂಬ ಜೀವನೋಪಾಯ ಮುಂದುವರೆಸಲು ಜಮೀನನ್ನು ಅಂತರ್ಜಲದ ಮೂಲಕ ನೀರಾವರಿಗೊಳಪಡಿಸಲು ಪ್ರಯತ್ನಿಸಿ ವಿಫಲವಾಗಿದೆ. ಸುಮಾರು 400 ರಿಂದ 600 ಅಡಿ ಆಳದ 5–6 ಬೋರ್ ವೆಲ್ ಗಳನ್ನು ಕೊರೆಸಿದೆ.

ಈಚೆಗೆ, ತಮ್ಮನ ಮಗನಾದ ಯೋಗೇಶ್ (4 ವರ್ಷ)ನ ಎರಡೂ ಮೂತ್ರಪಿಂಡದ ವೈಫಲ್ಯಕ್ಕೆ ಸುಮಾರು 3–4 ಲಕ್ಷ ರೂಗಳಿಗೂ ಅಧಿಕ ಮೊತ್ತವನ್ನು ಖರ್ಚು ಮಾಡಿ ಮತ್ತಷ್ಟು ವೆಚ್ಚ ಭರಿಸಲಾಗದೆಂದು ಮಗುವನ್ನು ಆಸ್ಪತ್ರೆಯಿಂದ ವಾಪಾಸು ಕರೆಸಿಕೊಂಡಿದೆ. ಮನೆ ರಿಪೇರಿ, ತಮ್ಮನ ಮದುವೆ ವೆಚ್ಚವೆಂದು 45 ಲಕ್ಷ ರೂ ವೆಚ್ಚಿಸಲಾಗಿದೆ.

ಉಜ್ಜಯನಿಯ ಸಹಕಾರ ಬ್ಯಾಂಕ್ ನಲ್ಲಿ ಪಡೆಯಲಾದ 70 ಸಾವಿರ ಸಾಲ ಬಿಟ್ಟರೇ ಉಳಿದದ್ದೆಲ್ಲಾ ದುಬಾರಿ ಬಡ್ಡಿಯ ಖಾಸಗೀ ಸಾಲವಾಗಿದೆ. ಕಳೆದ ಏಳೆಂಟು ವರ್ಷಗಳಿಂದ ಬರಗಾಲ ಮತ್ತಿತರೇ ಕಾರಣಕ್ಕೆ ಹೂಡಿದ ಬಂಡವಾಳ ಸಾಲವಾಗಿ ಕುಟುಂಬಕ್ಕೆ ತಿರುಗಿ ಬಿದ್ದಿದೆ.

ಸಾಲಬಾಧಿತನಾದ ಕರಿಬಸಪ್ಪ ಮನೆಯ ಯಾವುದೇ ಸದಸ್ಯರಿಗೆ ಗುಟ್ಟು ಬಿಟ್ಟುಕೊಡದೇ ಯಾರನ್ನು ತನ್ನಂತೇ ನೋವು ಹಾಗೂ ಒತ್ತಡ ಅನುಭವಿಸಲು ಬಿಡದೇ, ಗೌರವದಿಂದ ಬದುಕುವ ಅನ್ಯ ಮಾರ್ಗ ತಿಳಿಯದೇ, ಎಲ್ಲರು ಸುಖ ನಿದ್ರೆಯಲ್ಲಿರುವಾಗ ನೀರವ ರಾತ್ರಿ ಎರಡು ಘಂಟೆಯ ಸುಮಾರಿಗೆ ಮೋನೋಕ್ರೋಟೋಫಾಸ್ ವಿಷ ಸೇವಿಸಿ ನಿರ್ಧಾಯಿ ಹಾಗೂ ಕಟುಕ ಸಮಾಜಕ್ಕೆ ವಿದಾಯ ಹೇಳಿದ್ದಾನೆ.



ಬಸವರಾಜ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಗರಗ ಗ್ರಾಮದಲ್ಲಿ ಆತ್ಮ ಹತ್ಯೆ ಮಾಡಿಕೊಂಡ ಮತ್ತೊಬ್ಬ ಯುವ ರೈತನ ದಾರುಣ ಕಥೆಯಿದು. ಈತ ಎಂ. ಬಸವರಾಜ ಪರಿಶಿಷ್ಟ ಪಂಗಡಕ್ಕೆ ಸೇರಿದ ಮೇದಾರ ಜನ ಸಮುದಾಯಕ್ಕೆ ಸೇರಿದ ಯುವ ರೈತ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಾಗಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಗರಗ ಗ್ರಾಮದ ಒಟ್ಟು 9 ಎಕರೆ ಮಳೆಯಾಶ್ರಯದ ಪ್ರದೇಶದಲ್ಲಿ ವ್ಯವಸಾಯದಲ್ಲಿ ತೊಡಗಿದ, ಮದುವೆಯಾದ 6 ಜನ ಸಹೋದರರನ್ನು ಹೊಂದಿ ಒಟ್ಟಾಗಿ 11 ಮಕ್ಕಳಿರುವ ಒಟ್ಟು 25 ಜನ ಸದಸ್ಯರಿರುವ ಅವಿಭಕ್ತ ತುಂಬು ಕುಟುಂಬದ ಒಡೆಯನಾಗಿದ್ದಾತ.

ತೀವ್ರ ಸಾಲಬಾಧಿತನಾದ ಎಂ. ಬಸವರಾಜ ದಿನಾಂಕ 11.11.2018 ರಂದು ತನ್ನದೇ ಹೊಲದಲ್ಲಿನ ಕಣದಲ್ಲಿರುವ ಹುಣುಸೇ ಮರಕ್ಕೆ ನೇಣು ಬಿಗಿದುಕೊಂಡು ಈ ಕ್ರೂರ ಸಮಾಜಕ್ಕೆ ವಿದಾಯ ಹೇಳಿದ ಮಗದೊಬ್ಬ ಅನ್ನದಾತ.

ಇವರು ಮಕ್ಕಳಾದ ಎಂ. ರಾಕೇಶ್ (ಬಿಎಸ್ಸಿ ಪ್ರಥಮ), ಎಂ.ವಿನಾಯಕ (9 ನೇ ತರಗತಿ), ಎಂ.ಮಂಜುನಾಥ (6ನೇ ತರಗತಿ) ಮತ್ತು ಪತ್ನಿ ಶ್ರೀಮತಿ ಸುಲೋಚನಮ್ಮ (35 ವರ್ಷ) ಇವರ ಜೊತೆ ತುಂಬು ಕುಟುಂಬದ 25 ಸದಸ್ಯರನ್ನು ಅಗಲಿದ್ದಾರೆ.

ನೀರಾವರಿಗೊಳಪಡಿಸಲು ಹಲವು ಬೋರ್ ಗಳನ್ನು ಕೊರೆಸಿದ್ದಾರೆ. ವ್ಯವಸಾಯಕ್ಕಾಗಿ ಸಮೀಪದ ಸಹಕಾರ ಸಂಘದಲ್ಲಿ ಸುಮಾರು 1.90 ಲಕ್ಷ ರೂಪಾಯಿ ಸಾಲ ಮಾಡಿದ್ದಾರೆ. ಸಹೋದರರ ಮದುವೆಗಳಿಗಾಗಿ ಸಾಲ ಮಾಡಿದ್ದಾರೆ. ಬರಗಾಲಗಳು ಬೆಳೆಯನ್ನು ತಾರದಿರುವಾಗ ತುಂಬು ಕುಟುಂಬದ ಜೀವನಕ್ಕಾಗಿಯೂ ಸಾಲ ಮಾಡಿದ್ದಾರೆ.

ಮನೆಯ ಹಿರಿಯನಾಗಿ, ಎಲ್ಲ ಸಾಲದ ಹೊಣೆಯನ್ನು ತಾನೇ ಹೊತ್ತುಕೊಂಡಿದ್ದಾರೆ. ಇವರು ಕೂಡಾ ಸಾಲಬಾಧೆಯ ಗುಟ್ಟನ್ನು ಇತರೆ ಸಹೋದರರಿಗೆ ಬಿಟ್ಟು ಕೊಟ್ಟಿಲ್ಲ. ತನಗಷ್ಟೇ ನೋವಿರಲಿ ತನ್ನವರಿಗೆ ಬದುಕಿರಲಿ ಎಂದು ಬಾಳಿದ್ದಾರೆ. ಸಹೋದರರು ಪ್ರತ್ಯೇಕವಾಗಿ ವ್ಯವಸಾಯದಲ್ಲಿ ತೊಡಗಲಿ ಎಂದು ಈ ವ್ಯವಸಾಯದ ಪೂರ್ವವಷ್ಟೇ ತಲಾ ಒಂದೂವರೆ ಎಕರೆ ಜಮೀನನ್ನು ಹಂಚಿಕೊಟ್ಟಿದ್ದಾರೆ. ತಾವು ತಮ್ಮ ಪಾಲಿನ ಜಮೀನಿನಲ್ಲಿ ಕಬ್ಬು ಬೆಳೆದಿದ್ದಾರೆ.ಅದರಲ್ಲೂ ನಷ್ಟವೇ ಆಗಿದೆ. ಬ್ಯಾಂಕ್ ಸಾಲ, ಖಾಸಗೀ ಸಾಲಗಳ ಬಾಧೆಗಳು ಅವರನ್ನು ಬಲಿ ಹಾಕಿವೆ.

ಕರ್ನಾಟಕ ಪ್ರಾಂತ ರೈತ ಸಂಘದ ನಿಯೋಗ ದಿನಾಂಕ 07.12.2018 ರಂದು ಈ ಗ್ರಾಮಕ್ಕೆ ಭೇಟಿ ದುಃಖತಪ್ತ ಈ ಕುಟುಂಬಕ್ಕೆ ಹಾಗೂ ನಿರಂತರ ಬರಗಾಲಗಳಿಂದ ಬಾಧಿತ ರೈತರಿಗೆ ಸಾಂತ್ವನ ಹೇಳಿದೆ.

ನಿಯೋಗದಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ, ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಗಾಳಿ ಬಸವರಾಜ, ಸಂಡೂರು ತಾಲೂಕಾ ಸಂಚಾಲಕರಾದ ಯು.ತಿಪ್ಪೇಸ್ವಾಮಿ, ಹಗರಿಬೊಮ್ಮನಹಳ್ಳು ತಾಲೂಕ ಅಧ್ಯಕ್ಷರಾದ ಗಾಳೆಪ್ಪ ಉಪಾಧ್ಯಕ್ಷ ಸಿ. ಹನುಮಂತಪ್ಪ ಅಲ್ಲದೇ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಅಧ್ಯಕ್ಷರಾದ ಬಿ. ಮಾಳಮ್ಮ ಮತ್ತು ಸಿಐಟಿಯು ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷರಾದ ಎಸ್. ಜಗನ್ನಾಥ ಇವರು ಭಾಗಿಯಾಗಿದ್ದರು.

ದಲಿತ ಕೂಲಿಕಾರ ಮಹಿಳೆ ಹಾಲಮ್ಮನ ಆತ್ಮಹತ್ಯೆ



ಬಳ್ಳಾರಿ ಜಿಲ್ಲಾ ಸಂಡೂರು ತಾಲೂಕಿನ ಚಿಕ್ಕ ಕೆರೆಯಸಗಿನ ಹಳ್ಳಿಯಲ್ಲಿ ಎರಡು ತಿಂಗಳು ತುಂಬುವಷ್ಟರಲ್ಲಿ ಮೂರನೆ ಆತ್ಮಹತ್ಯೆಯ ಧಾರುಣ ಘಟನೆ ಸಂಭವಿಸಿದೆ. ಈ ಬಾರಿ ಆತ್ಮಹತ್ಯೆಗೆ ಶರಣಾದವರು ದಲಿತ ಹಾಗೂ ಕೂಲಿಕಾರ ಮಹಿಳೆ ಹಾಲಮ್ಮ(ವಯಸ್ಸು 45 ವರ್ಷ)

ಇವರು ಸಾಲದಬಾಧೆ, ಕುಟುಂಬದ ಜೀವನ ನಿರ್ವಹಣೆಯ ತೊಂದರೆ ಹಾಗೂ ತಮ್ಮಹೃದಯ ಸಂಬಂಧಿ ಖಾಯಿಲೆಗೆ ಅಗತ್ಯ ಹಣ ದೊರೆಯದೇ ಜೀವನದಲ್ಲಿ ಜಿಗುಪ್ಸೆ ಹೊಂದಿ ಡಿಸೆಂಬರ್ 11 ರಂದು ಮದ್ಯಾಹ್ನ 1.00 ಗಂಟೆಗೆ ಸಮೀಪದ ಕೆರೆಗೆ ಹಾರಿ ಅತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇವರ ಗಂಡನಾದ ದಿ. ಕಲ್ಲಪ್ಪನು ಈಗ್ಗೆ ಸುಮಾರು 6 ತಿಂಗಳ ಕೆಳಗೆ ತಿಂಗಳ ಕಾಲ ಜ್ವರ ಪೀಡಿತನಾಗಿ ತನಗೆ ವೈದ್ಯರಿರುವೆಡೆ ತೆರಳಲು ಹಣವಿಲ್ಲದೆ ಮತ್ತು ಹೆಂಡತಿಯ ಅನಾರೋಗ್ಯಕ್ಕೆ ಹಣ ಜೋಡಿಸಲಾಗದೇ, ಹೊಟ್ಟೆಪಾಡು ಕಷ್ಟವಾಗಿ ಮರಣ ಹೊಂದಿದ್ದಾನೆ. ಇದೀಗ ಅಂತಹದ್ದೇ ಕಾರಣಕ್ಕೆ ಹೆಂಡತಿಯು ಬಲಿಯಾಗಿದ್ದಾಳೆ. ಮೂವರು ಚಿಕ್ಕಮಕ್ಕಳನ್ನು ಇವರು ಅಗಲಿದ್ದಾರೆ.

ಇದುವರೆಗೆ ಯಾವುದೇ ಶಾಸಕರು ಮತ್ತಿತರೆ ರಾಜಕೀಯ ಪ್ರತಿ ನಿಧಿಗಳು ಈ ಕುಟುಂಬವನ್ನು ಸಂತೈಸಲು ಬಂದಿಲ್ಲವೆಂದು ಅಲ್ಲಿನ ದಲಿತ ಬಂಧುಗಳು ನಿಯೋಗದ ಮುಂದೆ ಬೇಸರ ವ್ಯಕ್ತ ಪಡಿಸಿದ್ದಾರೆ.

ದಲಿತ ಹಕ್ಕುಗಳ ಸಮಿತಿ – ಕರ್ನಾಟಕ ದ ರಾಜ್ಯ ಸಮಿತಿ ಉನ್ನತ ಮಟ್ಟದ ನಿಯೋಗ ಗ್ರಾಮಕ್ಕೆ ಭೇಟಿ ನೀಡಿ ಕುಟುಂಬವನ್ನು ಮತ್ತು ದಲಿತ ಬಂದುಗಳನ್ನು ಸಂತೈಸಿ ಧೈರ್ಯ ಹೇಳಿದೆ. ಮಾತ್ರವಲ್ಲಾ ಆ ಕುಟುಂಬದ ದುಸ್ಥಿತಿಯನ್ನು ಆಲಿಸಿದೆ. ನಿಯೋಗದಲ್ಲಿ ದಲಿತ ಹಕ್ಕುಗಳ ಸಮಿತಿಯ ಯು.ಬಸವರಾಜ, ಬಿ. ಮಾಳಮ್ಮ, ಯು. ತಿಪ್ಪೇಸ್ವಾಮಿ, ಇವರು ಇದ್ದರು.

ಹಾಲಮ್ಮಳು ಕಳೆದ ಮೂರು–ನಾಲ್ಕು ವರ್ಷದಿಂದ ಹೃದಯ ಸಂಬಂಧಿ ಖಾಯಿಲೆಯಿಂದ ನರಳುತ್ತಿದ್ದು ಅವರ ಆರೋಗ್ಯ ಸರಿಪಡಿಸಲು ಕಡುಬಡತನದಲ್ಲಿ ಬಳಲುವ ಪರಿಶಿಷ್ಟ ಜಾತಿಯ ಮಾದಾರ ಸಮುದಾಯಕ್ಕೆ ಸೇರಿದ ಈ ಕುಟುಂಬ, ಮಣಿಪಾಲ್ ಮತ್ತು ಬೆಂಗಳೂರನ್ನು ಸುತ್ತಿದೆ. ಇದಕ್ಕಾಗಿ ಎರಡು ಲಕ್ಷ ರೂಗಳ ಖಾಸಗೀ ಮತ್ತು ಸ್ತ್ರೀ ಶಕ್ತಿ ಸಂಘಗಳಲ್ಲಿ ಸಾಲ ಮಾಡಿದೆ. ಬಡ್ಡಿ, ಚಕ್ರಬಡ್ಡಿ ಸೇರಿ ಅದೀಗ 4 ಲಕ್ಷ ರೂಗಳಾಗಿದೆ.

ವ್ಯವಸಾಯದ ಕೂಲಿ ಕೆಲಸವನ್ನೇ ಜೀವನಾಧಾರವಾಗಿ ಹೊಂದಿದ್ದ ಈ ಕುಟುಂಬ ನಿರಂತರವಾಗಿ ಬಾಧಿಸಿದ ಬರಗಾಲಗಳಿಂದಾಗಿ, ಹೊಟ್ಟೆ ಪಾಡಿಗಾಗಿ ತೀವ್ರವಾಗಿ ಪರದಾಡಿದೆ.

8 ನೇ ತರಗತಿ ಓದುತ್ತಿದ್ದ ಮಗಳಾದ ಅಕ್ಕಮ್ಮ (15 ವರುಷ)ಳನ್ನು ಶಾಲೆ ಬಿಡಿಸಿ ಕೂಲಿಗೆಲಸಕ್ಕೆ ಹಚ್ಚಲಾಗಿದೆ. ಇದೀಗ ತಂದೆ ತಾಯಿಯನ್ನು ಕಳೆದುಕೊಂಡ ಇವಳು ತನ್ನ ಅಣ್ಣ ದುರುಗಪ್ಪ 19 ವರುಷ ಮತ್ತು ತಮ್ಮ ನಾಗರಾಜ (10 ವರುಷ) ರಿಗೆ ಅಡುಗೆ ಮತ್ತಿತರೆ ಮನೆಗೆಲಸಗಳನ್ನು ಮಾಡಿಕೊಂಡಿರುವಂತಾಗಿದೆ.

ಬರಗಾಲದಿಂದ ಕೇವಲ ಒಂದೆರಡು ತಿಂಗಳ ಇಟ್ಟಂಗಿ ಭಟ್ಟಿಯ ಕೂಲಿಕೆಲಸವೇ ಇವರಿಗೆ ಆಧಾರವಾಗಿತ್ತು. ಅದು ಈ ಕುಟುಂಬಕ್ಕೆ ಬಹುತೇಕ ಮಾಸಿಕ ಎರಡು ಸಾವಿರ ರೂ ಆದಾಯವನ್ನು ಒದಗಿಸುತ್ತಿರಲಿಲ್ಲ. ಐದು ಜನರಿರುವ ಈ ಕುಟುಂಬದ ಪ್ರತಿ ದಿನದ ಆದಾಯ. ಸರಾಸರಿ 65 ರೂಗಳು ಮಾತ್ರವೇ ಆಗಿತ್ತು. ಆಶ್ರಯ ಯೋಜನೆಯ ಮನೆಯನ್ನು ಪೂರ್ಣ ಗೋಳಿಸಲು ಹಾಲಮ್ಮ ಪರದಾಡಿ ಅದಕ್ಕೂ ಸಾಲ ಮಾಡಿದ್ದಾಳೆ.

ತಕ್ಷಣವೇ ರಾಜ್ಯ ಸರಕಾರ ಬಾದಿತ ಕುಟುಂಬಕ್ಕೆ 10 ಲಕ್ಷ ರೂಗಳ ಪರಿಹಾರ ನೀಡಬೇಕು. ಆ ಕುಟುಂಬದ ಎಲ್ಲ ಸಾಲವನ್ನು, ಸರಕಾರ ವಹಿಸಿಕೊಳ್ಳ ಬೇಕು. ಮಕ್ಕಳಾದ ಅಕ್ಕಮ್ಮ ಹಾಗೂ ನಾಗರಾಜ ಇವರು ವಿದ್ಯಾಭ್ಯಾಸ ಮುಂದುವರೆಸಲು ಅವರನ್ನು ರೆಡಿಸಿಡೆನ್ಸಿಯಲ್ ಶಾಲೆಗಳಿಗೆ ಸೇರಿಸಿ ಅವರ ವಿದ್ಯಾಭ್ಯಾಸಕ್ಕೆ ಅಗತ್ಯ ನೆರವು ನೀಡಬೇಕು. ದೊಡ್ಡ ಮಗನಿಗೆ ವ್ಯವಸಾಯದಲ್ಲಿ ತೊಡಗಲು ಐದು ಎಕರೆ ಜಮೀನ್ನು ಕೊಡಬೇಕು. ಕನಿಷ್ಠ ಒಂದು ವರ್ಷಕ್ಕೆ ಪೂರ್ಣ ಪ್ರಮಾಣದ ಆಹಾರದ ರೇಷನ್ ಒದಗಿಸ ಬೇಕು. ಎಂದು ದಲಿತ ಹಕ್ಕುಗಳ ರಾಜ್ಯ ಸಮಿತಿ ಒತ್ತಾಯಿಸಿದೆ.

ಇದಕ್ಕಾಗಿ 31.12.2018 ರಂದು ರಾಜ್ಯ ಸರಕಾರವನ್ನು ಒತ್ತಾಯಿಸಲು ಸಂಡೂರು ತಾಲೂಕಾ ಕಛೇರಿ ಎದುರು ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆಯೆಂದು ಡಿ.ಹೆಚ್.ಎಸ್ ಪ್ರಕಟಿಸಿದೆ.

ಚರಿತ್ರೆ ತಿದ್ದಿದ್ದಾಯಿತು, ಈಗ ಜಿಡಿಪಿ ಅಂಕಿಅಂಶಗಳ ತಿರುಚುವ ಪರ್ವ!



ಪ್ರೊ. ಟಿ. ಆರ್. ಚಂದ್ರಶೇಖರ

ನಮ್ಮ ದೇಶದಲ್ಲಿ ಬಲಪಂಥೀಯ ಶಕ್ತಿಗಳು ಇತಿಹಾಸವನ್ನು ತಿರುಚುವ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿವೆ. ವಿಜ್ಞಾನವನ್ನು ನಗೆಗೀಡು ಮಾಡಲಾಗುತ್ತಿದೆ. ನಗರಗಳ, ರಸ್ತೆಗಳ ಹೆಸರುಗಳನ್ನು ಬದಲಾಯಿಸಲಾಗುತ್ತಿದೆ. ಇದನ್ನು ಒಂದು ಸಾಧನೆ ಎಂದು ಹೆಮ್ಮೆಯಿಂದ ಬಣ್ಣಿಸಲಾಗುತ್ತಿದೆ. ಸಂವಿಧಾನಾತ್ಮಕ ಸಂಸ್ಥೆಗಳನ್ನು ಭ್ರಷ್ಟಗೊಳಿಸಲಾಗುತ್ತಿದೆ. ಚುನಾವಣಾ ಆಯೋಗವು ಕೇಂದ್ರದ ಅನುಕೂಲಕ್ಕೆ ತಕ್ಕಂತೆ ಕುಣಿಯುತ್ತಿರುವಂತೆ ಕಾಣುತ್ತಿದೆ. ಸಿಬಿಐ ದುರಂತ ಕಥೆಯನ್ನು ಹೇಳುವ ಅಗತ್ಯವಿಲ್ಲ. ರಿಸರ್ವ್ ಬ್ಯಾಂಕಿನ ಬಂಡವಾಳ ನಿಧಿಯನ್ನು ಕಬಳಿಸುವ ದಿಶೆಯಲ್ಲಿ ಸರ್ಕಾರ ಮುಂದಾದಾಗ ಅದನ್ನು ವಿರೋಧಿಸಿ ಗವರ್ನರ್ ಡಾ. ಉರ್ಜಿತ್ ಪಟೇಲ್ ರಾಜೀನಾಮೆ ನೀಡಿದರು. ಈಗ ಕೇಂದ್ರ ಸಾಂಖ್ಯಿಕ ಸಂಘಟನೆಯು (ಸೆಂಟ್ರಲ್ ಸ್ಟಾಟಿಸ್ಟಿಕಲ್ ಆರ್ಗನೈಸೇಶನ್) ಇಂತಹ ತಿರುಚುವಿಕೆಗೆ ಒಳಗಾಗಿದೆ. 'ಕುಣಿಯಲು ಬಾರದವರು ನೆಲ ಡೊಂಕು ಅಂದರಂತೆ' ಎಂಬ ಕನ್ನಡ ಗಾದೆಯು ಕೇಂದ್ರ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳಿಗೆ ಚೆನ್ನಾಗಿ ಅನ್ವಯವಾಗುತ್ತದೆ. ಹಿಂದಿನ ಸರ್ಕಾರದ ಸಾಧನೆಯನ್ನು ಅಲ್ಲಗಳೆಯುವುದು ಇಂದಿನ ಸರ್ಕಾರದ ಪ್ರಧಾನ ಪ್ರಣಾಳಿಕೆಯಾಗಿರುವಂತೆ ಕಾಣುತ್ತಿದೆ. ಕಳೆದ 60 ವರ್ಷಗಳಲ್ಲಿ ಏನು ಸಾಧನೆ ಮಾಡಲಾಗಿದೆ ಎಂಬ ಪ್ರಶ್ನೆಯನ್ನು ಪ್ರಧಾನಿ ಮೊದಲು ಮಾಡಿಕೊಂಡು ಕೇಂದ್ರದ ಸಚಿವರೆಲ್ಲರೂ ಗಿಳಿ ಪಾಠದಂತೆ ಪುನರುಚ್ಚರಿಸುತ್ತಿದ್ದಾರೆ. ಈ ಹಿಂದೆ ಯಾವ ಸರ್ಕಾರಗಳೂ ಇಂತಹ ಕುಚೋದ್ಯಕ್ಕೆ ಕೈಹಾಕಿರಲಿಲ್ಲ.

ಸರ್ಕಾರವೊಂದು ತನ್ನ ಸಾಧನೆಯನ್ನು ಹೇಳಿಕೊಳ್ಳುವುದು ಒಂದು ಕ್ರಮ. ಆದರೆ ತನ್ನ ಸಿದ್ಧಿ ಸಾಧನೆಗಳು ಟೊಳ್ಳು ಟೊಳ್ಳಾಗಿದ್ದಾಗ ಸರ್ಕಾರವು ಹಿಂದಿನ ಸರ್ಕಾರದ ಸಾಧನೆಯನ್ನು ತಿರುಚಿ–ತಗ್ಗಿಸಿ ತನ್ನ ಸಾಧನೆ ಅದಕ್ಕಿಂತ ಮಿಗಿಲಾಗಿದೆ ಎಂಬುದನ್ನು ತೋರಿಸಲು ಪ್ರಯತ್ನಿಸುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ. ಹಿಂದಿನ ವರ್ಷಗಳ (ಯುಪಿಎ 1 ಮತ್ತು 2: 2004–05 ರಿಂದ 2012–13) ಜಿಡಿಪಿ(ಒಟ್ಟು ಆಂತರಿಕ ಉತ್ಪನ್ನ)ಯ ಮೌಲ್ಯದ ಲೆಕ್ಕಾಚಾರದಲ್ಲಿ ಅದು ಮೂಗು ತೂರಿಸುತ್ತಿದೆ. ಇದರಿಂದಾಗಿ ಅದು ತನಗೆ ಗೊತ್ತಿಲ್ಲದಂತೆ ತನ್ನ ಮೂಗಿನ ರೂಪವನ್ನೇ ವಿಕಾರಗೊಳಿಸಿಕೊಳ್ಳುತ್ತಿದೆ. ಯುಪಿಎ 1 ಮತ್ತು 2 ಸಾಧನೆಯು ಏನು ಎಂಬುದು ಇಂದು ಇತಿಹಾಸ. ಅದರ ಉತ್ಖನನದಿಂದ ಏನು ಪ್ರಯೋಜನ ಎಂಬುದು ಸರ್ಕಾರಕ್ಕೆ ಅರ್ಥವಾಗಬೇಕು. ನಿಜ, ಆ ಸರ್ಕಾರವು ನಮಗೆ ಆದರ್ಶವೆನ್ನಬಹುದಾದ ಆಡಳಿತವನ್ನೇನು ನೀಡಿರಲಿಲ್ಲ. ಅದು ಬೇರೆ ಸಂಗತಿ. ಅದು 2008–09ರ ನಂತರದ ಜಾಗತಿಕ ಆರ್ಥಿಕ ಕುಸಿತವನ್ನು ಹೇಗೆ ನಿರ್ವಹಿಸಿತು ಎಂಬುದರ ವಿವರ ನಮ್ಮ ಮುಂದಿದೆ. ಅಂತಹ ರಾಕ್ಷಸ ಸದೃಶ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ನಮ್ಮ ಆರ್ಥಿಕತೆಯನ್ನು ಅದು ರಕ್ಷಿಸಿತು. ಈಗ ಅದರ ಸಾಧನೆಯನ್ನು ಅಂಕಿಸಂಖ್ಯೆಗಳ ತಿರುಚುವಿಕೆ ಮೂಲಕ ಅಲ್ಲಗಳೆಯಲು ನಡೆಸಿರುವ ಪ್ರಯತ್ನಗಳು ಜಾಗತಿಕವಾಗಿ ನಗೆಪಾಟಲಿಗೆ ಒಳಗಾಗಿವೆ. ಒಂದು ಪತ್ರಿಕೆಯಂತೂ (ಬ್ಯುಸಿನೆಸ್ ಸ್ಟಾಂಡರ್ಡ್) ಈ ಜಿಡಿಪಿ ಅಂಕಿಸಂಖ್ಯೆಗಳನ್ನು ಸರ್ಕಾರವು ಹಿಂಪಡೆಯಬೇಕು ಎಂದು ಒತ್ತಾಯಿಸಿದೆ.

ರಾಷ್ಟ್ರೀಯ ಸಾಂಖ್ಯಿಕ ಆಯೋಗವು 2015ರಲ್ಲಿ ಹೀಗೆ ಹಿಂದಿನ ವರ್ಷಗಳಿಗೆ ಜಿಡಿಪಿ ಗಣನೆ ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಿಸಿತ್ತು. ಅದು ಪ್ರಕಟಿಸಿದ ವರದಿ ಪ್ರಕಾರ 2004–05 ರಿಂದ 2013–14ರ ಅವಧಿಯಲ್ಲಿನ ಜಿಡಿಪಿ ಬೆಳವಣಿಗೆ ದರಗಳು ಉನ್ನತ ಮಟ್ಟದಲ್ಲಿದ್ದುದು ಕಂಡು ಬಂದಿತ್ತು. ವಾಸ್ತವವಾಗಿ ಯುಪಿಎ–2 ರ 2010–11ರಲ್ಲಿ ಜಿಡಿಪಿ ದರ ಹಳೆಯ ವಿಧಾನದಲ್ಲಿ ಇದ್ದುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಶೇ.10.3 ರಷ್ಟಿದೆಯೆಂದು ಅದು ನಿರೂಪಿಸಿತ್ತು. ಆದರೆ ಇದನ್ನು ಒಪ್ಪದ ಕೇಂದ್ರ ಸರ್ಕಾರವು ನೀತಿ ಆಯೋಗದ ಜೊತೆ ಸೇರಿಕೊಂಡು ಮತ್ತೊಂದು ವಿಧಾನವನ್ನು ಅಳವಡಿಸಿಕೊಂಡು ಯುಪಿಎ ಅವಧಿಯಲ್ಲಿನ ಜಿಡಿಪಿ ಬೆಳವಣಿಗೆ ದರ ಶೇ.6.7 ರಷ್ಟಿದ್ದರೆ ಎನ್‌ಡಿಎ ಸರ್ಕಾರದ ನಾಲ್ಕು ವರ್ಷದ ಅವಧಿಯಲ್ಲಿ ಅದು ಶೇ.7.35 ರಷ್ಟಿದೆ ಎಂದು ತೋರಿಸಲಾಗಿದೆ. ನಮ್ಮ ಸಾಧನೆಯು ಹಿಂದಿನ ಸರ್ಕಾರದ ಸಾಧನೆಗಿಂತ ಉನ್ನತವಾದುದು ಎಂಬುದನ್ನು ಅಂಕಿಸಂಖ್ಯೆಗಳ ತಿರಿಚುವಿಕೆ ಮೂಲಕ ತೋರಿಸಲಾಗುತ್ತಿದೆ. ಅನೇಕ ತಜ್ಞರು ಅಭಿಪ್ರಾಯ ಪಡುವಂತೆ ನೀತಿ ಆಯೋಗವು ಬಿಡುಗಡೆ ಮಾಡಿರುವ ಎನ್‌ಡಿಎ ಅವಧಿಯ ಜಿಡಿಪಿ ಅಂಕಿಸಂಖ್ಯೆಗಳು ಅದಕ್ಕೆ ಸಮಾನಾಂತರ ಅಭಿವೃದ್ಧಿ ಸೂಚಿಗಳಾದ ಕಾರ್ಪೋರೇಟ್ ಮಾರಾಟ, ಅವುಗಳ ಲಾಭ, ಬಂಡವಾಳ ಹೂಡಿಕೆ, ನೇರ ತೆರಿಗೆ ಸಂಗ್ರಹ, ಕೈಗಾರಿಕಾ ಉತ್ಪಾದನೆ, ಉದ್ದರಿ ಬೆಳವಣಿಗೆ, ರಫ್ತು–ಆಮದು ಮುಂತಾದವುಗಳ ಸಾಧನೆಗೆ ಅನುರೂಪವಾಗಿಲ್ಲ. ದೇಶದ ಜಿಡಿಪಿಯು 2014–18ರ ಅವಧಿಯಲ್ಲಿ ಉತ್ತಮವಾಗಿದ್ದರೆ ಉಳಿದ ಅಭಿವೃದ್ಧಿ ಸೂಚಿಗಳ ಬೆಳವಣಿಗೆ ದರಗಳು ಏಕೆ ಮಂದಗತಿಯಲ್ಲಿವೆ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ.

ಹಿಂದಿನ ವರ್ಷಗಳ ಜಿಡಿಪಿ ಗಣನೆ ಎಂದರೇನು?

ಜಿಡಿಪಿಯನ್ನು ಪ್ರಸಕ್ತ ಬೆಲೆಗಳಲ್ಲಿ ಲೆಕ್ಕಹಾಕುವುದು ಒಂದು ಕ್ರಮ. ಈ ಕ್ರಮವು ಜಿಡಿಪಿ ಬೆಳವಣಿಗೆಯ ನಿಜ ರೂಪವನ್ನು ತೋರಿಸುವುದಿಲ್ಲ. ಏಕೆಂದರೆ ಉತ್ಪನ್ನದಲ್ಲಿ ಏನೂ ಏರಿಕೆಯಾಗದಿದ್ದರೂ ಅವುಗಳ ಬೆಲೆಯಲ್ಲಿ ಏರಿಕೆಯಾದರೆ ಉತ್ಪನ್ನದ ಮೌಲ್ಯ ಅಧಿಕವಾಗುತ್ತದೆ. ಉದಾ: ಒಂದು ಸರಕಿನ ಬೆಲೆ ರೂ. 10 ಎಂದಿಟ್ಟುಕೊಳ್ಳೋಣ. ಈಗ 100 ಸರಕುಗಳ ಮೌಲ್ಯ ರೂ.1000ವಾಯಿತು. ಮುಂದಿನ ವರ್ಷ ಉತ್ಪನ್ನದ ಸಂಖ್ಯೆಯಲ್ಲಿ ಬದಲಾವಣೆಯಾಗದೆ ಸರಕಿನ ಬೆಲೆ ರೂ.10 ಇದ್ದುದು ಈಗ ರೂ.15 ಆಗಿದೆ ಎಂದು ಊಹಿಸೋಣ. ಜಿಡಿಪಿ ಏನಾಯಿತು? ಈಗ 100 ಸರಕುಗಳ ಮೌಲ್ಯ ರೂ.1500 ರಷ್ಟಾಯಿತು. ಇಲ್ಲಿ ನಿಜವಾದ ಬೆಳವಣಿಗೆಯಾಗಿಲ್ಲ. ಕೇವಲ ಹಣದ ರೂಪದಲ್ಲಿ ಬೆಳವಣಿಗೆಯಾಗಿದೆ. ಈ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಹಿಂದಿನ ವರ್ಷಗಳ ಬೆಲೆಯಲ್ಲಿ ಪ್ರಸಕ್ತ ವರ್ಷದ ಜಿಡಿಪಿಯನ್ನು ಲೆಕ್ಕ ಹಾಕುವ ಕ್ರಮವನ್ನು ಅನುಸರಿಸಲಾಗುತ್ತದೆ. ಇದನ್ನು ಸ್ಥಿರ ಬೆಲೆಗಳಲ್ಲಿ ಜಿಡಿಪಿ ಎಂದು ಕರೆಯಲಾಗುತ್ತದೆ.

ಹೀಗೆ ಮಾಡುವಾಗ ಹಿಂದಿನ ವರ್ಷ ಅನ್ನುವುದು ಪ್ರಸಕ್ತ ವರ್ಷದಿಂದ ತುಂಬ ದೂರವಿರಬಾರದು ಎಂಬುದು ಒಂದು ನಿಯಮ. ಇದಕ್ಕಾಗಿ ಸ್ಥಿರ ವರ್ಷವನ್ನು ಆಗಿಂದ್ದಾಗ್ಗೆ ಬದಲಾಯಿಸಲಾಗುತ್ತದೆ. ಒಂದು ಹಂತದಲ್ಲಿ 2004–05 ಸ್ಥಿರ ವರ್ಷವಾಗಿತ್ತು. ಆದರೆ ಅದೀಗ ಪ್ರಸಕ್ತ ವರ್ಷಕ್ಕೆ ತುಂಬಾ ದೂರದ್ದಾಗುತ್ತದೆ. ಅದಕ್ಕೆ ಅದನ್ನು ಈಗ 2011–12ಕ್ಕೆ ಬದಲಾಯಿಸಲಾಗಿದೆ. ಈ ಕ್ರಮದಿಂದಾಗಿ 2004–05ರ ನಂತರದ ವರ್ಷಗಳಿಗೆ 2011–12ನೆಯ ಸಾಲಿನ ಬೆಲೆಗಳನ್ನು ಆಧಾರ ಮಾಡಿಕೊಂಡು ಜಿಡಿಪಿ ಗಣನೆ ಮಾಡಬೇಕಾಗುತ್ತದೆ. ಇದನ್ನು ಹಿಂದಿನ ವರ್ಷಗಳಿಗೆ ಜಿಡಿಪಿ ಗಣನೆ ಎಂದು ಕರೆಯಲಾಗುತ್ತದೆ.

ರಾಷ್ಟ್ರೀಯ ಸಾಂಖ್ಯಿಕ ಆಯೋಗವು 2015ರಲ್ಲಿ ಹೀಗೆ ಹಿಂದಿನ ವರ್ಷಗಳಿಗೆ ಜಿಡಿಪಿ ಗಣನೆ ಮಾಡಲು ಒಂದು ತಜ್ಞರ ಸಮಿತಿಯನ್ನು ನೇಮಿಸಿತ್ತು. ಅದು ಪ್ರಕಟಿಸಿದ ವರದಿ ಪ್ರಕಾರ 2004–05 ರಿಂದ 2013–14ರ ಅವಧಿಯಲ್ಲಿನ ಜಿಡಿಪಿ ಬೆಳವಣಿಗೆ ದರಗಳು ಉನ್ನತ ಮಟ್ಟದಲ್ಲಿದ್ದುದು ಕಂಡುಬಂದಿತ್ತು. ವಾಸ್ತವವಾಗಿ ಯುಪಿಎ–2 ರ 2010–11ರಲ್ಲಿ ಜಿಡಿಪಿ ದರ ಹಳೆಯ ವಿಧಾನದಲ್ಲಿ ಇದ್ದುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಶೇ.10.3 ರಷ್ಟಿದೆಯೆಂದು ಅದು ನಿರೂಪಿಸಿತ್ತು. ಆದರೆ ಇದನ್ನು ಒಪ್ಪದ ಕೇಂದ್ರ ಸರ್ಕಾರವು ನೀತಿ ಆಯೋಗದ ಜೊತೆ ಸೇರಿಕೊಂಡು ಮತ್ತೊಂದು ವಿಧಾನವನ್ನು ಅಳವಡಿಸಿಕೊಂಡು ಯುಪಿಎ ಅವಧಿಯಲ್ಲಿನ ಜಿಡಿಪಿ ಬೆಳವಣಿಗೆ ದರ ಶೇ.6.7 ರಷ್ಟಿದ್ದರೆ ಎನ್‌ಡಿಎ ಸರ್ಕಾರದ ನಾಲ್ಕು ವರ್ಷದ ಅವಧಿಯಲ್ಲಿ ಅದು ಶೇ.7.35 ರಷ್ಟಿದೆ ಎಂದು ತೋರಿಸಲಾಗಿದೆ. ನಮ್ಮ ಸಾಧನೆಯು ಹಿಂದಿನ ಸರ್ಕಾರದ ಸಾಧನೆಗಿಂತ ಉನ್ನತವಾದುದು ಎಂಬುದನ್ನು ಅಂಕಿಸಂಖ್ಯೆಗಳ ತಿರಿಚುವಿಕೆ ಮೂಲಕ ತೋರಿಸಲಾಗುತ್ತಿದೆ.

ಈ ಕ್ರಮವನ್ನು ಅರ್ಥಶಾಸ್ತ್ರಜ್ಞರು, ಸಂಖ್ಯಾಶಾಸ್ತ್ರಜ್ಞರು ಮತ್ತು ವಿರೋಧ ಪಕ್ಷಗಳ ನಾಯಕರು ತೀವ್ರವಾಗಿ ಟೀಕಿಸುತ್ತಿದ್ದಾರೆ. ಭಾರತ ಸರ್ಕಾರದ ಹಿಂದಿನ ಮುಖ್ಯ ಸಾಂಖ್ಯಿಕ ಅಧಿಕಾರಿಯಾಗಿದ್ದ ಪ್ರನೋಬ್ ಸೆನ್ ಅವರು ಜಿಡಿಪಿ ಲೆಕ್ಕಾಚಾರದಲ್ಲಿ ನೀತಿ ಆಯೋಗ ತಲೆ ತೂರಿಸಿರುವುದನ್ನು 'ಜಿಡಿಪಿ ಲೆಕ್ಕಾಚಾರದ ರಾಜಕೀಯಕರಣ'ವೆಂದು ಕಟುವಾಗಿ ಟೀಕಿಸಿದ್ದಾರೆ. ಇದನ್ನು ಸಾಂವಿಧಾನಾತ್ಮಕ ಸ್ವಾಯತ್ತ ಸಂಸ್ಥೆಯಾದ ಕೇಂದ್ರ ಸಾಂಖ್ಯಿಕ ಸಂಸ್ಥೆ ಮಾಡಬೇಕಾಗಿತ್ತು. ಅಂದರೆ ಅವರ ಪ್ರಕಾರ ಕೇಂದ್ರ ಸಾಂಖ್ಯಿಕ ಸಂಸ್ಥೆಯ ಸ್ವಾಯತ್ತತೆಯನ್ನು ನೀತಿ ಆಯೋಗ ನಾಶ ಮಾಡಿದೆ. ಈ ಟೀಕೆಯಲ್ಲಿ ಸತ್ವವಿದೆ. ನೀತಿ ಆಯೋಗವು ಸಾಂವಿಧಾನಾತ್ಮಕ ಸಂಸ್ಥೆಯೂ ಅಲ್ಲ ಅಥವಾ ಶಾಸನಾತ್ಮಕ ಸಂಸ್ಥೆಯೂ ಅಲ್ಲ. ಇದು ಕೇಂದ್ರ ಸಚಿವ ಸಂಪುಟದ ನಿರ್ಣಯದ ಮೂಲಕ ರಚನೆಯಾಗಿರುವ ಒಂದು ಸಂಸ್ಥೆ. ಕೇಂದ್ರ ಸಾಂಖ್ಯಿಕ ಸಂಸ್ಥೆಯ ಕಾರ್ಯದಲ್ಲಿ ಮೂಗು ತೂರಿಸಿ ನೀತಿ ಆಯೋಗವು ಎನ್‌ಡಿಎ ಮುಖ್ಯಸ್ಥರಿಗೆ ತೃಪ್ತಿ ನೀಡುವಂತಹ ರೀತಿಯಲ್ಲಿ ಜಿಡಿಪಿ ಗಣನೆ ವಿಧಾನವನ್ನು ತಿರುಚುವ ಕೆಲಸವನ್ನು ಮಾಡಿದೆ.

ಎರಡನೆಯದಾಗಿ ಅನೇಕ ತಜ್ಞರು ಅಭಿಪ್ರಾಯ ಪಡುವಂತೆ ನೀತಿ ಆಯೋಗವು ಬಿಡುಗಡೆ ಮಾಡಿರುವ ಎನ್‌ಡಿಎ ಅವಧಿಯ ಜಿಡಿಪಿ ಅಂಕಿಸಂಖ್ಯೆಗಳು ಅದಕ್ಕೆ ಸಮಾನಾಂತರ ಅಭಿವೃದ್ಧಿ ಸೂಚಿಗಳಾದ ಕಾರ್ಪೋರೇಟ್ ಮಾರಾಟ, ಅವುಗಳ ಲಾಭ, ಬಂಡವಾಳ ಹೂಡಿಕೆ, ನೇರ ತೆರಿಗೆ ಸಂಗ್ರಹ, ಕೈಗಾರಿಕಾ ಉತ್ಪಾದನೆ, ಉದ್ದರಿ ಬೆಳವಣಿಗೆ, ರಫ್ತು–ಆಮದು ಮುಂತಾದವುಗಳ ಸಾಧನೆಗೆ ಅನುರೂಪವಾಗಿಲ್ಲ. ದೇಶದ ಜಿಡಿಪಿಯು 2014–18ರ ಅವಧಿಯಲ್ಲಿ ಉತ್ತಮವಾಗಿದ್ದರೆ ಉಳಿದ ಅಭಿವೃದ್ಧಿ ಸೂಚಿಗಳ ಬೆಳವಣಿಗೆ ದರಗಳು ಏಕೆ ಮಂದಗತಿಯಲ್ಲಿವೆ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ.


ಮೂರನೆಯದಾಗಿ ಜಿಡಿಪಿಯ ಬೆಳವಣಿಗೆ ದರವು ಸಾಮಾನ್ಯವಾಗಿ ಆರ್ಥಿಕತೆಯಲ್ಲಿನ ಉಳಿತಾಯದ ದರ ಮತ್ತು ಬಂಡವಾಳ ಹೂಡಿಕೆಗಳನ್ನು ಅವಲಂಬಿಸಿರುತ್ತದೆ. ಅಭಿವೃದ್ಧಿ ಅರ್ಥಶಾಸ್ತ್ರದ ಮೊದಲ ಪಾಠ ಇದಾಗಿದೆ. ದೇಶದಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಉಳಿತಾಯ ದರವು ಜಿಡಿಪಿಯ ಶೇ.36.2 ರಷ್ಟಿದ್ದುದು ಈಗ ಅದು ಶೇ.29.6ಕ್ಕೆ ಕುಸಿದಿದೆ. ಇದೇ ರೀತಿಯಲ್ಲಿ ಬಂಡವಾಳ ಹೂಡಿಕೆಯು ಯುಪಿಎ ಅವಧಿಯಲ್ಲಿ ಜಿಡಿಪಿಯ ಶೇ.39.8ರಷ್ಟಿದ್ದುದು ಈಗ ಶೇ.30.6ಕ್ಕೆ ಕುಸಿದಿದೆ. ಅಂದಮೇಲೆ ಜಿಡಿಪಿಯು ಕೆಳಮಟ್ಟದ ಉಳಿತಾಯ ಹಾಗೂ ಹೂಡಿಕೆ ಕಾರಣವಾಗಿ 2014ರ ನಂತರ ಕಡಿಮೆಯಾಗಿರಬೇಕು. ಅಂಕಿಸಂಖ್ಯೆಗಳ ತಿರಿಚುವಿಕೆಯ ಮೂಲಕ ಜಿಡಿಪಿಯನ್ನು ತಮ್ಮ ಕಾಲಾವಧಿಯಲ್ಲಿ ಉತ್ತಮವಾಗಿದೆ ಎಂಬುದನ್ನು ಸರ್ಕಾರ ಹೇಳಿಕೊಳ್ಳಬಹುದು. ಆದರೆ ವಾಸ್ತವ ಸಂಗತಿಗಳು ಅದಕ್ಕೆ ಪೂರಕವಾಗಿಲ್ಲ.

ಪ್ರಸಿದ್ಧ ಪತ್ರಿಕೆ ಬ್ಯುಸಿನೆಸ್ ಸ್ಟಾಂಡರ್ಡ್, ನೀತಿ ಆಯೋಗ ಬಿಡುಗಡೆ ಮಾಡಿರುವ ಜಿಡಿಪಿ ವಿಕೃತ ವಿವರಗಳನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿದೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಆರ್. ನಾಗರಾಜ್ ಅವರು ಹೊಸದಾಗಿ ಗಣನೆ ಮಾಡಿರುವ ಜಿಡಿಪಿಯ ವಿಧಾನದ ವಿವರಗಳನ್ನು ಪ್ರಕಟಿಸುವಂತೆ ಒತ್ತಾಯಿಸಿದ್ದಾರೆ.

ನಾಲ್ಕನೆಯದಾಗಿ ಕೆಲವು ವಲಯಗಳಿಗೆ ಆನ್ಯುಯಲ್ ಸರ್ವೆ ಆಫ್ ಇಂಡಸ್ಟ್ರೀಸ್(ಎಎಸ್ಐ) ವರದಿಯ ವಿವರಗಳನ್ನು ಬಳಸಿಕೊಂಡಿದ್ದರೆ ಮತ್ತೆ ಕೆಲವು ವಲಯಗಳಿಗೆ ಮಿನಿಸ್ಟ್ರಿ ಆಫ್ ಕಾರ್ಪೋರೇಶನ್ ಅಫೈರ್ಸ್(ಎಮ್‌ಸಿಎ 21) ವರದಿಯ ವಿವರಗಳನ್ನು ಬಳಸಿಕೊಂಡಿರುವಂತೆ ಕಾಣುತ್ತದೆ. ಇದು ಸರಿಯಾದ ಕ್ರಮವಲ್ಲ. ಇಲ್ಲಿ ಎರಡು ವರದಿಗಳ ವಿವರಗಳು ಏಕರೂಪದಲ್ಲಿರಲು ಸಾಧ್ಯವಿಲ್ಲ. ತುಲನೆ ಮಾಡಲು ಸಾಧ್ಯವಿಲ್ಲದ ಸಂಗತಿಗಳನ್ನು ಇಲ್ಲಿ ತುಲನೆ ಮಾಡುತ್ತಿರುವಂತೆ ಕಾಣುತ್ತದೆ.

ಪುಟ 10 ಕ್ಕೆ

ಕೃಪೆ: ಕೇಶವ





ಕಾಟೊವೀಟ್ಸ ನಿಯಮಗಳು: ಹವಾಮಾನ ಬದಲಾವಣೆ ಎದುರಿಸುವಲ್ಲಿ ಮತ್ತಷ್ಟು ಹೆಚ್ಚಲಿದೆ ಅಸಮಾನತೆ

ಕಾಟೊವೀಟ್ಸ ಫಲಿತಾಂಶದ ಬಗ್ಗೆ ಭಾರತ ಮತ್ತು ಇತರ ಅಭಿವೃದ್ಧಿಶೀಲ ದೇಶಗಳು ಗಂಭೀರ ಟೀಕೆ ಮಾಡಿವೆ. ಸಮತ್ವದ ಅಂಶದ ನಿರ್ಲಕ್ಷದ ಬಗ್ಗೆ ಭಾರತ ವಿಶೇಷ ಭಿನ್ನಮತ ಮಂಡಿಸಿದೆ. ಆದಾಗ್ಯೂ ಅವುಗಳು ಅಂತಿಮ ನಿರ್ಧಾರಗಳನ್ನು ತಡೆಯಲಿಲ್ಲ. ಜಗತ್ತಿನ ಜನಸಂಖ್ಯೆಯ ಬಹುಭಾಗವಾಗಿರುವ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಬಡ ರಾಷ್ಟ್ರಗಳ ಹಿತಾಸಕ್ತಿಗಳ ಮಟ್ಟಿಗೆ ಇದೊಂದು ಹಿನ್ನಡೆಯಾಗಿದೆ. ಈಗ ವಿಕಾಸಗೊಳ್ಳುತ್ತಿರುವ ಹವಾಮಾನ ಕಾನೂನುಗಳು ಹಲವು ರೀತಿಗಳಲ್ಲಿ ಜಾಗತಿಕ ವ್ಯಾಪಾರ ವ್ಯವಸ್ಥೆ ತಂದಿರುವ ಉತ್ತರ ಮತ್ತು ದಕ್ಷಿಣ ಗೋಳಾರ್ಧಗಳ ನಡುವಿನ ಜಾಗತಿಕ ಅಸಮಾನತೆಗಳನ್ನು ಇದು ಇನ್ನಷ್ಟು ಗಟ್ಟಿಗೊಳಿಸಲಿದೆ.



*** ಪ್ರಕಾಶ್ ಕಾರಟ್**

ಪೋಲೆಂಡ್ನ ಕಾಟೊವಿಟ್ಸದಲ್ಲಿ ಇತ್ತೀಚೆಗೆ ನಡೆದ ವಿಶ್ವ ಸಂಸ್ಥೆಯ ಹವಾಮಾನ ಸಮ್ಮೇಳನವನ್ನು (ಸಿ.ಒ.ಪಿ. 24–ಅಂದರೆ 24ನೇ ಕಾನ್ಫರೆನ್ಸ್ ಆಫ್ ಪಾರ್ಟೀಸ್–ಸಂಬಂಧಪಟ್ಟವರ ಸಮ್ಮೇಳನ)) ಪ್ಯಾರಿಸ್ ಒಪ್ಪಂದದ ಅನುಷ್ಠಾನಕ್ಕಾಗಿ ನಿಯಮಗಳನ್ನು ರೂಪಿಸಲು ಆಯೋಜಿಸಲಾಗಿತ್ತು. ಇಲ್ಲಿ ಅಂಗೀಕರಿಸಲಾದ ನಿರ್ಣಯಗಳು ಅಭಿವೃದ್ಧಿ ಹೊಂದಿದ ದೇಶಗಳ ಹಿಡಿತ ಇನ್ನಷ್ಟು ಬಿಗಿಗೊಂಡಿರುವುದರ ಸಂಕೇತವಾಗಿದೆ. ಪ್ಯಾರಿಸ್ ಒಪ್ಪಂದದಿಂದ ಹಿಂದೆ ಸರಿದಿರುವುದಾಗಿ ಅಮೆರಿಕ ಹೇಳಿದ್ದರೂ ಹಾಗೂ ತಾಪಮಾನ ಬದಲಾವಣೆ ಸಂಬಂಧ ತೆಗೆದುಕೊಳ್ಳಬೇಕಾದ ಕ್ರಮಗಳ ವಿಷಯದಲ್ಲಿ ಜಿ–8ನಂಥ ವೇದಿಕೆಗಳಲ್ಲಿ ಬಹಿರಂಗವಾಗಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರೂ ಯುರೋಪಿಯನ್ ಒಕ್ಕೂಟ ಹಾಗೂ ಇತರ ದೇಶಗಳೊಂದಿಗೆ ಅಮೆರಿಕವೇ ಚಾಲಕನ ಸ್ಥಾನದಲ್ಲಿ ಕುಳಿತಿರುವುದು ಸುಸ್ಪಷ್ಟವಾಗುತ್ತದೆ. ಇಲ್ಲಿ ರೂಪಿಸಿದ ನಿಯಮಗಳು ಒಪ್ಪಂದದ ಅಸಮಾನ ಹಾಗೂ ತಾರತಮ್ಯದ ಅಂಶಗಳನ್ನು ಮತ್ತಷ್ಟು ಗಟ್ಟಿಗೊಳಿಸಲೆಂದೇ ರೂಪಿಸಿರುವಂಥದ್ದಾಗಿವೆ. ಹೆಚ್ಚಿನ ಭಾರವನ್ನು ಶ್ರೀಮಂತ ದೇಶಗಳು ಅಭಿವೃದ್ಧಿಶೀಲ ದೇಶಗಳ ಮೇಲೆ ಹೊರಿಸುವುದನ್ನು ಖಾತರಿಪಡಿಸುವಂತಿವೆ ಈ ನಿಯಮಗಳು. ಅಲ್ಲದೆ ಜಾಗತಿಕ ತಾಪಮಾನಕ್ಕೆ ಕಾರಣವಾಗುವ ಅನಿಲ ಉತ್ಸರ್ಜನೆ (ಗ್ರೀನ್‌ಹೌಸ್ ಗ್ಯಾಸ್ ಎಮಿಶನ್) ವಿಚಾರದಲ್ಲಿ ಶ್ರೀಮಂತ ದೇಶಗಳು ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದನ್ನು ಮುಂದುವರೆಸಲೂ ಈ ನಿಯಮಗಳು ಸಹಕಾರಿಯಾಗಿವೆ.

ಸಿ.ಓ.ಪಿ.24ರ ಮಹತ್ವವನ್ನು ಮೋದಿ ಸರಕಾರ ತಪ್ಪಾಗಿ ಅಂದಾಜು ಮಾಡಿದೆ ಎಂಬುದು ಸ್ಪಷ್ಟ, ಅದು ಮಾತುಕತೆಗಳಲ್ಲಿ ಭಾರತದ ಹಿತಗಳಿಗೆ ಒಂದು ಮಹತ್ವದ ಏಟು ಕೊಡಲು ಅವಕಾಶ ಕೊಟ್ಟಿದೆ. ಸಮತ್ವ ಮತ್ತು ಅಭಿವೃದ್ಧಿಗೆ ಜಾಗತಿಕ ಇಂಗಾಲ ಅವಕಾಶವನ್ನು ಕಾಯ್ದುಕೊಳ್ಳುವ ನಿರ್ಣಾಯಕ ಪ್ರಶ್ನೆಗಳ ಮೇಲೆ ಅಮೆರಿಕ ಮತ್ತು ಅದರ ಮಿತ್ರರುಗಳು ಕಣ್ಣು ಕೆಂಪಗೆ ಮಾಡಿಕೊಳ್ಳುವುದನ್ನು ಎದುರಿಸಬೇಕಾಗಬಹುದೆಂದು ಅದು ತಾನು ಹೇಳಬೇಕೆಂದಿದ್ದುದನ್ನು ಒತ್ತಿ ಹೇಳಲಿಲ್ಲ, ಪರಿಣಾಮವೇನೂ ಇಲ್ಲದ ಪ್ರತಿಭಟನೆಯೊಂದಿಗೆ ಹಿಂದೇಟು ಹಾಕಿತು.

ಈ "ಕಾಟೊವೀಸ್ಟ ನಿಯಮಗಳು" ಎಂಬುದರ ಮೂಲಕ ವಿಭಿನ್ನ ದೇಶಗಳು ವಾತಾವರಣಕ್ಕೆ ಬಿಡುವ ಅನಿಲದ ಮಟ್ಟಗಳಲ್ಲಿ ಇರುವ ಅಗಾಧ ಭಿನ್ನತೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ತಾಪಮಾನ ಏರಿಕೆಗೆ ಎಲ್ಲಾ ದೇಶಗಳನ್ನು ಸಮಾನ ಹೊಣೆಯಾಗಿ ಮಾಡಿವೆ. ಇದು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ನಡುವಿನ ವ್ಯತ್ಯಾಸವನ್ನೇ ಬಹುಮಟ್ಟಿಗೆ ಅಳಿಸಿ ಹಾಕುತ್ತದೆ. ಈ ವ್ಯತ್ಯಾಸ ಹವಾಮಾನ ಬದಲಾವಣೆ ಕುರಿತ ವಿಶ್ವ ಸಂಸ್ಥೆಯ ಚೌಕಟ್ಟು ಸಮಾವೇಶ (ಯುಎನ್‌ಎಫ್‌ಸಿಸಿಸಿ)ದ ಮೂಲ ಜಾಗತಿಕ ಹವಾಮಾನ ಒಡಂಬಡಿಕೆಯ ಬುನಾದಿಯಾಗಿತ್ತು.. ಈ ನಿಯಮಗಳ ಅನುಷ್ಠಾನಕ್ಕೆ ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಾಮರ್ಥ್ಯಗಳ ಕೊರತೆ ಹೊಂದಿರುವ ಅಭಿವೃದ್ಧಿಶೀಲ ದೇಶಗಳಿಗೆ ನಿಯಮಗಳನನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಲಾಗಿದೆಯಾದರೂ, ಸದ್ಯೋಭವಿಷ್ಯದಲ್ಲಿ ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಬೇಕಾದ ಒತ್ತಡಕ್ಕೆ ಒಳಗಾಗುವ ರೀತಿಯಲ್ಲಿ ಶರತ್ತುಗಳನ್ನು ರೂಪಿಸಲಾಗಿದೆ.

ವ್ಯತ್ಯಾಸವನ್ನು ತೊಡೆದುಹಾಕಿದ್ದು ಮಾತ್ರವಲ್ಲದೆ ಪ್ಯಾರಿಸ್ ಒಪ್ಪಂದದ ಅನುಷ್ಠಾನದಲ್ಲಿ ಸಮತ್ವವನ್ನು ಕಾರ್ಯ ರೂಪಕ್ಕೆ ತರುವ ಬಗ್ಗೆಯಾಗಲೀ, ಮತ್ತು ಅದರ ಗುರಿಗಳನ್ನು ಸಾಧಿಸುವಲ್ಲಿ ಆಗಿರುವ ಪ್ರಗತಿಯನ್ನು ಕಾಲ–ಕಾಲಕ್ಕೆ ಮೌಲ್ಯಮಾಪನ ಮಾಡುವ ಬಗ್ಗೆಯಾಗಲೀ ಪ್ರಸ್ತಾವಿಸುವುದನ್ನು ತಡೆಯುವಲ್ಲಿಯೂ ಅಮೆರಿಕ ಮತ್ತದರ ಮಿತ್ರ ದೇಶಗಳು ಯಶಸ್ವಿಯಾಗಿವೆ.

ಮುಂದುವರಿದ ದೇಶಗಳು ಹವಾಮಾನ ಹಣಕಾಸು ವಿಚಾರದಲ್ಲಿ ಯಾವುದೇ ಅರ್ಥಪೂರ್ಣ ಪ್ರಗತಿ ಆಗುವುದನ್ನೂ ಅಭಿವೃದ್ಧಿ ಹೊಂದಿದ ದೇಶಗಳು ತಡೆದಿವೆ. ಅಭಿವೃದ್ಧಿಶೀಲ ದೇಶಗಳು ತೀವ್ರ ಪ್ರಯತ್ನಗಳನ್ನು ಮಾಡಿದರೂ, ಸಾರ್ವಜನಿಕ ಮೂಲಗಳಿಂದ ಹಣಕಾಸು ನೆರವು ನೀಡುವ ಯಾವುದೇ ಪ್ರಮುಖ ಆಶ್ವಾಸನೆ ನೀಡದೆ ತಪ್ಪಿಸಿಕೊಂಡಿವೆ. ಹವಾಮಾನ ಹಣಕಾಸನ್ನು ಬಹುರಾಷ್ಟ್ರೀಯ ಹಣಕಾಸು ಬಂಡವಾಳದ ಕಾರ್ಯಾಚರಣೆಯ ಹೊಸ ಅಂಗಳವನ್ನಾಗಿ ಮಾಡುವುದು ಅವುಗಳ ಉದ್ದೇಶವಾಗಿದೆ. ಈಗಿರುವ ನಿಯಮಗಳ ಪ್ರಕಾರ ಕೂಡ ತಾಪಮಾನ ಕಡಿತ ಕಾರ್ಯಕ್ರಮಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳಿಂದ ಪಡೆದ ಸಾಲಗಳನ್ನು ಯುಎನ್‌ಎಫ್‌ಸಿಸಿಸಿ ಅಡಿಯಲ್ಲಿ ಹವಾಮಾನ ಹಣಕಾಸು ಎಂದು ಪರಿಗಣಿಸಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಜಾಗತಿಕ ತಾಪಮಾನ ನಿಯಂತ್ರಣ ಕಾರ್ಯಾಚರಣೆಯ ಹೊಸ ಅವಕಾಶಗಳನ್ನು ಬಳಸುವ ಮೂಲಕ ಅಭಿವೃದ್ಧಿಶೀಲ ಜಗತ್ತಿನಿಂದ ಸಂಪತ್ತನ್ನು ವರ್ಗಾಯಿಸಿಕೊಳ್ಳುವ ಕೆಲಸವನ್ನು ಅಭಿವೃದ್ಧಿ ಹೊಂದಿರುವ ಜಗತ್ತು ತೀವ್ರಗೊಳಿಸುತ್ತಿದೆ.

ತಾಪಮಾನ ತಗ್ಗಿಸುವಿಕೆ ಹಾಗೂ ಒಗ್ಗಿಕೊಳ್ಳುವಿಕೆ (ಅಡಾಪ್ಟೇಷನ್)ಯನ್ನು ಪ್ರಮುಖವಾಗಿ ಬಹುರಾಷ್ಟ್ರೀಯ ಖಾಸಗಿ ಬಂಡವಾಳ ಮತ್ತು ಮಾರುಕಟ್ಟೆಗಳ ಮೂಲಕ ನಿರ್ವಹಿಸಲು ಅಮೆರಿಕ ಮತ್ತದರ ಮಿತ್ರದೇಶಗಳು ಉತ್ಸುಕವಾಗಿವೆ ಎನ್ನುವುದು ಇಂಗಾಲ ವ್ಯಾಪಾರದ ಮೇಲೆ ಮತ್ತು ತಂತ್ರಜ್ಞಾನ ವರ್ಗಾವಣೆ ಮುಂತಾದ ಅದರ ಸಂಬಂಧಿತ ಇತರ ವಿಷಯಗಳ ಬಗೆಗಿನ ತೀವ್ರ ಮಾತುಕತೆಗಳಿಂದ ವೇದ್ಯವಾಗುತ್ತದೆ. ಹವಾಮಾನ ಕಾರ್ಯಾಚರಣೆಯು ಜಗತ್ತಿನಾದ್ಯಂತ ಸಾರ್ವಜನಿಕ ಕ್ಷೇತ್ರ ಮತ್ತೆ ಮೂಡಿ ಬರುವುದಕ್ಕೆ ದಾರಿಯಾಗುವುದನ್ನು ತಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಈಗ ರೂಪಿಸಿರುವ ನಿಯಮಗಳು ಬಹುತೇಕವಾಗಿ ತಾಪಮಾನ ತಗ್ಗಿಸುವ ಮೇಲೆ ಗಮನ ಕೇಂದ್ರೀಕರಿಸಿದೆ. ವಾಸ್ತವವಾಗಿ ಅಭಿವೃದ್ಧಿಶೀಲ ದೇಶಗಳಿಗೆ ಒಗ್ಗಿಕೊಳ್ಳುವಿಕೆಗೆ ಹಾಗೂ ತೀವ್ರ ಪ್ರತಿಕೂಲ ಪರಿಸ್ಥಿತಿಗಳಿಂದ ಉಂಟಾಗುವ ನಷ್ಟ ಹಾಗೂ ಹಾನಿಯನ್ನು ನಿಭಾಯಿಸಲು ಹಣಕಾಸು ತುರ್ತು ಅಗತ್ಯವಾಗಿದೆ. ಈ ವಿಚಾರದಲ್ಲಿ ಅತ್ಯಂತ ಬಿಕ್ಕಟ್ಟಿನ ಸ್ಥಿತಿಯಲ್ಲಿರುವ ದೇಶಗಳಿಗೆ ಕೂಡ ಮುಂದುವರಿದ ದೇಶಗಳಿಂದ ಯಾವುದೇ ನೆರವು ಸಿಕ್ಕಿಲ್ಲ.

ಪ್ಯಾರಿಸ್ ಒಡಂಬಡಿಕೆ ಮತ್ತು ಅದರ ಅನುಷ್ಠಾನಕ್ಕೆ ಕಾಟೊವೀಟ್ಸದಲ್ಲಿ ರೂಪಿಸಿದ ನಿಯಮಗಳ ಪರಿಣಾಮಗಳು ಗಂಭೀರವಾದವುಗಳು. ಯಾಕೆಂದರೆ ದಕ್ಷಿಣ ಗೋಳಾರ್ಧದ ಅನೇಕ ದೇಶಗಳು, ವಿಶೇಷವಾಗಿ ಭಾರತದಂಥ ದೊಡ್ಡ ದೇಶಗಳ ಅಭಿವೃದ್ಧಿ ಅವಕಾಶಗಳನ್ನು ಮುರುಟಿಹಾಕಲು ಅವು ಸನ್ನದ್ಧವಾಗಿವೆ. ತಾಪಮಾನ ತಗ್ಗಿಸುವಿಕೆಗೆ ಪ್ರಯತ್ನಗಳನ್ನು ಹೆಚ್ಚಿಸಬೇಕೆಂದು ಭಾರತದ ಮೇಲೆ ಒತ್ತಡ ಬರುತ್ತದೆ. ಅದು ಮುಂದಿನ ವರ್ಷ ಭಾರತೀಯ ಕೈಗಾರಿಕೆ, ವಾಣಿಜ್ಯ ಮತ್ತು ಒಟ್ಟಾರೆಯಾಗಿ ದೇಶದ ಜನರ ಮೇಲೆ ಹೆಚ್ಚಿನ ಇಂಧನ ವೆಚ್ಚವನ್ನು ಹೇರುವ ಎಲ್ಲಾ ಸಾಧ್ಯತೆಗಳಿವೆ.

ಸಮಾವೇಶದ ಫಲಿತಾಂಶದ ಬಗ್ಗೆ ಭಾರತ ಮತ್ತು ಇತರ ಅಭಿವೃದ್ಧಿಶೀಲ ದೇಶಗಳು ಗಂಭೀರ ಟೀಕೆ ಮಾಡಿವೆ. ಸಮತ್ವದ ಅಂಶದ ನಿರ್ಲಕ್ಷದ ಬಗ್ಗೆ ಭಾರತ ವಿಶೇಷ ಭಿನ್ನಮತ ಮಂಡಿಸಿದೆ. ಆದಾಗ್ಯೂ ಅವುಗಳು ಅಂತಿಮ ನಿರ್ಧಾರಗಳನ್ನು ತಡೆಯಲಿಲ್ಲ. ಜಗತ್ತಿನ ಜನಸಂಖ್ಯೆಯ ಬಹುಭಾಗವಾಗಿರುವ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಬಡ ರಾಷ್ಟ್ರಗಳಿಗೆ, ಇದು ತಮ್ಮ ಹಿತಾಸಕ್ತಿಗಳ ಮಟ್ಟಿಗೆ ಒಂದು ವ್ಯೂಹಾತ್ಮಕ ಹಿನ್ನಡೆಯಾಗಿದೆ. ಈಗ ವಿಕಾಸಗೊಳ್ಳುತ್ತಿರುವ ಹವಾಮಾನ ಕಾನೂನುಗಳು ಹಲವು ರೀತಿಗಳಲ್ಲಿ ಜಾಗತಿಕ ವ್ಯಾಪಾರ ವ್ಯವಸ್ಥೆಯ ವಿಕಾಸವನ್ನು ನೆನಪಿಸುತ್ತಿವೆ. ಸಂಕೀರ್ಣ ನಿಯಮಗಳನ್ನು ರೂಪಿಸುವುದರ ಮೇಲೆ ಅದೇ ಒತ್ತು, ಸಾರ್ವಜನಿಕ ಹೂಡಿಕೆಯ ಮೇಲೆ ಹಾಗೂ ಅಭಿವೃದ್ಧಿಶೀಲ ಆರ್ಥಿಕ ವ್ಯವಸ್ಥೆಗಳಲ್ಲಿ ಬಡವರಿಗೆ ಬೆಂಬಲದ ಮೇಲೆ ಅದೇ ರೀತಿಯ ನಿರ್ಬಂಧಗಳು, ಈ ಮೂಲಕ ಉತ್ತರ ಮತ್ತು ದಕ್ಷಿಣ ಗೋಳಾರ್ಧಗಳ ನಡುವಿನ ಜಾಗತಿಕ ಅಸಮಾನತೆಗಳನ್ನು ಇನ್ನಷ್ಟು ಗಟ್ಟಿಗೊಳಿಸಲಿದೆ.

ಆದರೆ ಪ್ಯಾರಿಸ್ ಒಪ್ಪಂದವಾಗಲೀ ಅದರ ಅನುಷ್ಠಾನಕ್ಕೆ ರೂಪಿಸಿರುವ ನಿಯಮಗಳಾಗಲೀ ಜಾಗತಿಕ ತಾಪಮಾನದ ಏರಿಕೆಯ ಅಪಾಯಗಳಿಂದ ಯಾವುದೇ ಪರಿಹಾರವನ್ನು ಒದಗಿಸುವುದಿಲ್ಲ. ಸಮಸ್ಯೆಯ ಸಾರವನ್ನೇ ನಿರ್ಲಕ್ಷಿಸಲಾಗಿದೆ. ಅದೆಂದರೆ ಅಭಿವೃದ್ಧಿ ಹೊಂದಿದ ದೇಶಗಳ ಇಂಗಾಲ ವಿಸರ್ಜನೆ ಬಿಡುಗಡೆ ಪ್ರಮಾಣವನ್ನು ತೀವ್ರ ಪ್ರಮಾಣದಲ್ಲಿ ಕಡಿಮೆ ಮಾಡುವುದು. ಹೀಗೆ ಮಾಡದಿದ್ದರೆ ವಿಶ್ವವು ಅನಾಹುತಕಾರಿ ಜಾಗತಿಕ ತಾಪಮಾನ ಏರಿಕೆಯನ್ನು ಎದುರಿಸ ಬೇಕಾಗುತ್ತದೆ. ಅಂದರೆ ಪ್ಯಾರಿಸ್ ಒಪ್ಪಂದ ನಿಗದಿಪಡಿಸಿದ 1.5 ಅಥವಾ 2 ಡಿಗ್ರಿ ಸೆಲ್ಷಿಯಸ್ ಆಚೆ ಎಷ್ಟೋ ಹೆಚ್ಚಿನ ಮಟ್ಟದ ವರೆಗೆ ಏರಬಹುದು. ಮುಂದುವರಿದ ದೇಶಗಳು ಈ ಸಂಬಂಧ ಯಾವುದೇ ಹೊಸ ಅಥವಾ ಹೆಚ್ಚಿನ ವಚನಬದ್ಧತೆಗಳನ್ನು ಪ್ರಕಟಿಸಿಲ್ಲ.


ಹಿಂದಿರುಗಿ ನೋಡಿದಾಗ, 1.5 ಡಿಗ್ರಿ ತಾಪಮಾನ ಏರಿದರೂ ಗಂಭೀರ ಪರಿಣಾಮಗಳು ಉಂಟಾಗುತ್ತವೆ ಎಂದು ಐಪಿಸಿಸಿ ನೀಡಿದ ಇತ್ತೀಚಿನ ಎಚ್ಚರಿಕೆಯನ್ನು ನಿಯಮಗಳು ಹಾಗೂ ವಿಧಿ–ವಿಧಾನಗಳನ್ನು ಒಪ್ಪಿಕೊಳ್ಳುವಂತೆ ದೇಶಗಳ ನಡುವೆ ನೂಕುನುಗ್ಗಲು ನಡೆಯುವಂತೆ ಮಾಡಲು ಬಳಸಿಕೊಂಡಿರುವಂತೆ ಕಾಣುತ್ತದೆ.

ಪ್ರಸ್ತುತ ಪರಿಸ್ಥಿತಿಗಳಲ್ಲಿ ಹವಾಮಾನ ಬದಲಾವಣೆಯ ಜಾಗತಿಕ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸಲಿದೆ. ಬಿಸಿಯೇರುತ್ತಿರುವ ಜಗತ್ತನ್ನು ಬಂಡವಾಳಕ್ಕೆ ಸುರಕ್ಷಿತಗೊಳಿಸುತ್ತಲೇ ಮನುಕುಲಕ್ಕೆ ಮಾತ್ರ ಹೆಚ್ಚಿನ ಅಪಾಯವನ್ನು ಒಡ್ಡಲಿದೆ.

ಅನು: ವಿಶ್ವ

* ಜಾಗತಿಕ ತಾಪಮಾನ ನಿಯಂತ್ರಣ ಕಾರ್ಯಾಚರಣೆಯ ಹೊಸ ಅವಕಾಶಗಳನ್ನು ಬಳಸುವ ಮೂಲಕ ಅಭಿವೃದ್ಧಿಶೀಲ ಜಗತ್ತಿನಿಂದ ಸಂಪತ್ತನ್ನು ವರ್ಗಾಯಿಸಿಕೊಳ್ಳುವ ಕೆಲಸವನ್ನು ಅಭಿವೃದ್ಧಿ ಹೊಂದಿರುವ ಜಗತ್ತು ತೀವ್ರಗೊಳಿಸುತ್ತಿದೆ.
* 1.5 ಡಿಗ್ರಿ ತಾಪಮಾನ ಏರಿದರೂ ಗಂಭೀರ ಪರಿಣಾಮಗಳು ಉಂಟಾಗುತ್ತವೆ ಎಂದು ಐಪಿಸಿಸಿ ನೀಡಿದ ಇತ್ತೀಚಿನ ಎಚ್ಚರಿಕೆಯನ್ನು ನಿಯಮಗಳು ಹಾಗೂ ವಿಧಿ–ವಿಧಾನಗಳನ್ನು ಒಪ್ಪಿಕೊಳ್ಳುವಂತೆ ದೇಶಗಳ ನಡುವೆ ನೂಕುನುಗ್ಗಲು ನಡೆಯುವಂತೆ ಮಾಡಲು ಬಳಸಿಕೊಂಡಿರುವಂತೆ ಕಾಣುತ್ತದೆ.
* ಸಮಾವೇಶದ ಫಲಿತಾಂಶದ ಬಗ್ಗೆ ಭಾರತ ಮತ್ತು ಇತರ ಅಭಿವೃದ್ಧಿಶೀಲ ದೇಶಗಳು ಗಂಭೀರ ಟೀಕೆ ಮಾಡಿವೆ. ಸಮತ್ವದ ಅಂಶದ ನಿರ್ಲಕ್ಷದ ಬಗ್ಗೆ ಭಾರತ ವಿಶೇಷ ಭಿನ್ನಮತ ಮಂಡಿಸಿದೆ. ಆದಾಗ್ಯೂ ಅವುಗಳು ಅಂತಿಮ ನಿರ್ಧಾರಗಳನ್ನು ತಡೆಯಲಿಲ್ಲ.





ರಫೇಲ್ ಮಹಾ ಹಗರಣ

ಮೋದಿಯವರ ರಫೇಲ್ ವ್ಯವಹಾರ ಭಾರತದ ಅತಿ ದೊಡ್ಡ ಹಗರಣವಾಗಿದೆ. 59,000ಕೋಟಿ ರೂ.ಗಳ ಈ ಮಹಾ ಹಗರಣದಲ್ಲಿ ಮೋದಿ ಸರಕಾರ ಮಾಹಿತಿಯ ಕೊರತೆ, ಅರೆಸತ್ಯಗಳು ಮತ್ತು ಸುಳ್ಳುಗಳ ಹಿಂದೆ ಅಡಗಿಕೊಳ್ಳಲು ಪ್ರಯತ್ನಿಸುತ್ತಿದೆ.

ಈ ಹಿಂದೆ ಭಾರತೀಯ ವಿಮಾನ ಪಡೆ(ಐ.ಎ.ಎಫ್.)ಗೆ 126 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವ ಬಹಿರಂಗ ಟೆಂಡರ್ ಇತ್ತು. ಎಪ್ರಿಲ್ 2015ರಲ್ಲಿ ಪ್ಯಾರಿಸ್ ನಲ್ಲಿ ಮೋದಿಯವರು ಈ ಮೂಲ ಟೆಂಡರಿನ ಜಾಗದಲ್ಲಿ ಕೇವಲ 36 ಯುದ್ಧ ವಿಮಾನಗಳಿಗೆ ಆರ್ಡರ್ ನೀಡಿರುವುದಾಗಿ ಏಕಪಕ್ಷೀಯವಾಗಿ ಪ್ರಕಟಿಸಿದರು. ಇದರಲ್ಲಿ ರಕ್ಷಣಾ ಖರೀದಿಯ ಎಲ್ಲ ವಿಧಿ-ವಿಧಾನಗಳನ್ನು ಪ್ರಧಾನ ಮಂತ್ರಿಗಳು ಬದಿಗೊತ್ತಿದರು.

ದೇಶದ ರಕ್ಷಣೆಯ ದೃಷ್ಟಿಯಿಂದ ಹೀಗೆ ಮಾಡಬೇಕಾಯಿತು ಎಂದು ಇದನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ ವಾಸ್ತವವೆಂದರೆ, ಈ ಮೂಲಕ ಮೋದಿಯವರು ಭಾರತೀಯ ವಿಮಾನ ಪಡೆಯನ್ನು ದುರ್ಬಲಗೊಳಿಸಿದರು. ಅದಕ್ಕೆ 7 ಸ್ಕ್ವಾಡ್ರನ್‌ಗಳು ಬೇಕಾಗಿವೆ. ಆದರೆ ಪ್ರಧಾನಿಗಳು ಹಳೆಯದನ್ನು ರದ್ದು ಮಾಡಿ ನೀಡಿದ ಹೊಸ ಆರ್ಡರ್ 2 ಸ್ಕ್ವಾಡ್ರನ್ ಗಳಿಗೂ ಸಾಲದು. ಮೋದಿಯವರ ವಿನಾಶಕಾರಿ ಹಸ್ತಕ್ಷೇಪದಿಂದಾಗಿ ಈಗ ರಕ್ಷಣಾ ಮಂತ್ರಾಲಯ 110 ವಿಮಾನಗಳಿಗೆ ಮತ್ತೊಂದು ಟೆಂಡರ್ ಕರೆಯಬೇಕಾಗಿ ಬಂದಿದೆ.

ಮೋದಿಯವರ ಹೊಸ ಆರ್ಡರ್ ಮೂಲತ: ರಫೇಲ್ ತಯಾರಿಸುವ ದಸಾಲ್ ಕಂಪನಿಯ ಮೂಲ ಭಾಗೀದಾರ ಕಂಪನಿಯಾದ ಭಾರತದ ಸಾರ್ವಜನಿಕ ವಲಯದ ಹಿಂದುಸ್ತಾನ್ ಏರೊನಾಟಿಕ್ಸ್ ಲಿ.(ಹೆಚ್.ಎ.ಎಲ್.)ನ್ನು ಹೊರಗೆಸೆದಿದೆ, ಅದರ ಸ್ಥಾನದಲ್ಲಿ ಅನಿಲ್ ಅಂಬಾನಿಯ ಸಾಲಗ್ರಸ್ತ, ರಕ್ಷಣಾ ಉತ್ಪಾದನೆಯಲ್ಲಿ ಅಥವ ಬೇರೆ ತಯಾರಿಕೆಯಲ್ಲಿಯೂ ಯಾವುದೇ ಅನುಭವವಿಲ್ಲದ ರಿಲಯಂಸ್ ಕಂಪನಿಯನ್ನು ಒಳತರಲಾಗಿದೆ.. ಈ ಅನಿಲ್ ಅಂಬಾನಿಯ ರಿಲಯಂಸ್ ನ್ನು ಭಾರತದ ಕಡೆಯಿಂದ ಫ್ರಾನ್ಸ್ ಮೇಲೆ ಹೇರಲಾಯಿತು ಎಂದು ಮಾಜಿ ಫ್ರೆಂಚ್ ಅಧ್ಯಕ್ಷ ಹೊಲ್ಲಾಂದೆ ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ಮೋದಿಯವರು ಅತ್ಯಂತ ಕೆಟ್ಟ ರೀತಿಯ ಚಮಚಾ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸುತ್ತಿದ್ದಾರೆ ಮತ್ತು ದೇಶದ ರಕ್ಷಣೆಯನ್ನು ಅಪಾಯಕ್ಕೊಡ್ಡುತ್ತಿದ್ದಾರೆ ಎಂಬ ಆರೋಪಕ್ಕೆ ಅವಕಾಶವಾಗಿದೆ. ಜನಗಳಲ್ಲಿ ಹಲವಾರು ಸಂದೇಹಗಳನ್ನು ಹುಟ್ಟಿಸಿದೆ.

ಇನ್ನೂ ಉತ್ತರ ಸಿಗದ ಹತ್ತು ಪ್ರಶ್ನೆಗಳು

1. ಮೋದಿಯವರು ಎಪ್ರಿಲ್ 10, 2015ರಂದು ಈ ವ್ಯವಹಾರವನ್ನು ಪ್ರಕಟಿಸಿದರು. ಆದರೆ "ರಕ್ಷಣಾ ಗಳಿಕೆ ಮಂಡಳಿ"(ಡಿ.ಎ.ಪಿ.) ಭಾರತೀಯ ವಿಮಾನ ಪಡೆ(ಐ.ಎ.ಎಫ್.)ಗೆ 36 ರಫೆಲ್‌ಗಳು ಬೇಕು ಎಂದು ಮೇ 13,2015 ರಲ್ಲಷ್ಟೇ ಸ್ವೀಕರಿಸಿತು. ಮೋದಿಯವರ ಪ್ರಕಟಣೆಯ ಮೊದಲು ಐ.ಎ.ಎಫ್. ನಿಂದಾಗಲೀ, ರಕ್ಷಣಾ ಮಂತ್ರಾಲಯದಿಂದಾಗಲೀ 36 ರಫೇಲ್‌ಗಳ ಬಗ್ಗೆ ಅಧಿಕೃತ ಪತ್ರವೇನೂ ಇಲ್ಲ. **ಐ.ಎ.ಎಫ್. ಗೆ 36 ರಫೇಲ್ ಜೆಟ್‌ಗಳು ಬೇಕು ಎಂದು ಸರಕಾರ ಸ್ವೀಕರಿಸುವ ಮೊದಲೇ ಈ ಕುರಿತ ನಿರ್ಣಯವನ್ನು ಪ್ರಕಟಿಸಿದ್ದು ಹೇಗೆ?**

2. ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್. ಎಸ್.ಎ.) ಅಜಿತ್ ಡೋವಲ್ ಪ್ಯಾರಿಸ್ ನಲ್ಲಿ ಈ ವ್ಯವಹಾರದ ಬಗ್ಗೆ ಮಾತುಕತೆ ಏಕೆ ನಡೆಸುತ್ತಿದ್ದರು? ಫ್ರಾನ್ಸ್ ನಿಂದ ಒಂದು ಸಾರ್ವಭೌಮ ಅಥವ ಬ್ಯಾಂಕ್ ಗ್ಯಾರಂಟಿ ಇಲ್ಲವೆಂಬುದು ರಕ್ಷಣಾ ಮಂತ್ರಿ ಫರ್ರಿಕರ್ ಕೂಡ ದಾಖಲಿಸಿರುವ ಮಾಹಿತಿಗಳಲ್ಲಿ ಒಂದು. ಇಂತಹ ಮಾತುಕತೆಯ ಪ್ರಕ್ರಿಯೆ ಪರಮ ಸಂರಕ್ಷಿತವಾದಂತದ್ದು, ಮಾತುಕತೆಯ ಹೊರಗಿರುವವರು ಯಾರೂ ಅದರಲ್ಲಿ ಮಧ್ಯಪ್ರವೇಶ ಮಾಡಲು ಬಿಡುವುದಿಲ್ಲ. **ಇಂತಹ ಒಂದು ಮಹತ್ವದ ವ್ಯವಹಾರವನ್ನು ಉಲ್ಲಂಘಿಸಲು ಮತ್ತು ಹಾಳು ಮಾಡಲು ಎನ್. ಎಸ್. ಎ.ಗೆ ಅವಕಾಶ ನೀಡಿದವರು ಯಾರು?**

3. ಸಾರ್ವಭೌಮ ಅಥವ ಬ್ಯಾಂಕ್ ಗ್ಯಾರಂಟಿ ಇಲ್ಲದೆ ಸರಕಾರ ಒಂದು ವ್ಯವಹಾರಕ್ಕೆ ಸಹಿ ಹಾಕಿದ್ದೇಕೆ? ಫ್ರೆಂಚ್ ಅಧ್ಯಕ್ಷರಿಂದ 'ಸಮಾಧಾನ ಪತ್ರ(ಲೆಟರ್ ಆಫ್ ಕಂಫರ್ಟ್)'ಕ್ಕೆ ಯಾವುದೇ ನಿಜ ಮೌಲ್ಯವಿಲ್ಲ, ಮತ್ತು ಈ ಬಗ್ಗೆ 'ಸರಕಾರಗಳ ನಡುವಣ ಒಪ್ಪಂದ'(ಐ.ಜಿ.ಎ.)ದ ಮುಖ್ಯ ಪಠ್ಯದಲ್ಲಿ ಪ್ರಸ್ತಾಪವೂ ಇಲ್ಲ. ರಕ್ಷಣಾ ಮಂತ್ರಾಲಯ ಮತ್ತು ಕಾನೂನು ಮಂತ್ರಾಲಯ ಇವೆರಡಕ್ಕೂ ಒಂದು ಸಾರ್ವಭೌಮ ಗ್ಯಾರಂಟಿ ಬೇಕಾಗಿತ್ತು. ವಿವಾದ ಪಂಚಾಯ್ತಿಯ ಕಲಮು ಕೂಡ ರುವುದು ಭಾರತ ಸಹಿ ಹಾಕಿರದ ಒಂದು ಒಪ್ಪಂದದ ಅಡಿಯಲ್ಲಿ. ಮತ್ತು ಈ ಪಂಚಾಯ್ತಿಯಲ್ಲಿ ಗೆದ್ದರೂ ಕೂಡ ಭಾರತ ನಷ್ಟ ಪರಿಹಾರವನ್ನು ಖಾಸಗಿ ಕಂಪನಿಗಳಿಂದಲೇ ಪಡೆಯಬೇಕು, ಫ್ರೆಂಚ್ ಸರಕಾರದಿಂದ ಅಲ್ಲ. ಅದರರ್ಥ **ಇದೊಂದು ಸರಕಾರ-ಸರಕಾರ ಒಪ್ಪಂದವಲ್ಲ. ಹಾಗಿದ್ದರೆ ಇದಕ್ಕೆ ಸಹಿ ಮಾಡಿದ್ದಾದರೂ ಏಕೆ?**



ವ್ಯಂಗ್ಯಚಿತ್ರ: ಪಿ.ಮಹಮ್ಮದ್


4. ಭಾರತದಲ್ಲಿ ಎಲ್ಲ ರಕ್ಷಣಾ ಒಪ್ಪಂದಗಳಲ್ಲಿ ಒಂದು "ಫಾಲೋ-ಆನ್" ಕಲಮು ಇರುತ್ತದೆ. ಇದರ ಪ್ರಕಾರ ಕಾಂಟ್ರಾಕ್ಟ್ ಮಾಡಿಕೊಂಡ ಪ್ರಮಾಣದಲ್ಲಿ 50%ವನ್ನು ಭಾರತ ಅವೇ ಶರತ್ತುಗಳ ಅಡಿಯಲ್ಲಿ ಖರೀದಿಸಬಹುದು. 126 ರಫೇಲ್‌ಗಳ ಟೆಂಡರಿನಲ್ಲಿ ಇದು ಇತ್ತು, ಆದರೆ 36 ರಫೇಲ್‌ಗಳ ವ್ಯವಹಾರದಲ್ಲಿ ಕಾಣೆಯಾಗಿದೆ. ಭಾರತವು **ಇನ್ನಷ್ಟು ರಫೇಲ್‌ಗಳನ್ನು ಖರೀದಿಸುವ ಸಾಧ್ಯತೆ ಇರುವಾಗ, ಅಥವ ಹಾಗೆ ಖರೀದಿಸುವ ಆಯ್ಕೆಯಾದರೂ ಇರುವಾಗ ಇದಕ್ಕೆ ಒಪ್ಪಿರುವುದು ಏಕೆ?**

5. 'ರಕ್ಷಣಾ ಸಂಗ್ರಹಣೆ ವಿಧಾನ'(ಡಿಫೆನ್ಸ್ ಪ್ರೊಕ್ಯೂರ್ ಮೆಂಟ್ ಪ್ರೊಸಿಜರ್-ಡಿ.ಪಿ.ಪಿ.)ದ ಪ್ರಕಾರ ಮಾತುಕತೆ ನಡೆಸುವ ತಂಡವು ವ್ಯವಹಾರ ಕುದುರಿಸಲು ಒಂದು ಗರಿಷ್ಟ ಬೆಲೆಯ ವರೆಗೆ ಹೋಗಬಹುದು. ಇದನ್ನು ನಿಯೋಜಿತ ರಕ್ಷಣಾ ಇಲಾಖೆಯ ಧಿಕಾರಿಗಳು ನಿಗದಿ ಮಾಡುತ್ತಾರೆ. ಈ ವ್ಯವಹಾರದಲ್ಲಿ ಅದು 5.2 ಬಿಲಿಯನ್ ಯುರೋ ಆಗಿತ್ತು. ಈ ತಂಡದ ಮೂರು ಸದಸ್ಯರು ಈ ಗರಿಷ್ಟ ಮಟ್ಟಕ್ಕೆ ಒಪ್ಪಿಗೆ ನೀಡಿದ್ದರು. ಆದರೆ ಇತರ ನಾಲ್ಕು ಸದಸ್ಯರು 8.2 ಬಿಲಿಯನ್ ಯುರೋಗೆ ನಿಗದಿಗೊಳಿಸಲು ನಿರ್ಧರಿಸಿದರು. ಅವರ ಪ್ರಕಾರ ಇದನ್ನು ಕಂಡುಕೊಂಡದ್ದು 126 ರಫೇಲ್ ವಿಮಾನಗಳ ಹಳೆಯ ಹರಾಜಿನ ಆಧಾರದಲ್ಲಿ. ಡಿ.ಪಿ.ಪಿ. ಒಂದು ಕಾಂಟ್ರಾಕ್ಟನ್ನು ಸಹಿ ಮಾಡಿ ಜಾರಿಗೊಳಿಸಿದ್ದರೆ ಮಾತ್ರವೇ ಇದು ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿದೆ. 126 ರಫೇಲ್ ವಿಮಾನಗಳಿಗೆ ಜಾರಿಯಾದ ಕಾಟ್ರಾಕ್ಟ್ ಇರಲಿಲ್ಲವಾದ್ದರಿಂದ ಇಲ್ಲಿ ಬೆಲೆ ಕಂಡುಕೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೂ ಈ **ಹೆಚ್ಚಿಸಿದ 8.2 ಬಿಲಯನ್ ಯುರೋ ಬೆಲೆಯನ್ನು ಸ್ವತಃ ಪ್ರಧಾನ ಮಂತ್ರಿಗಳ ನೇತೃತ್ವದ ಸಿ.ಸಿ.ಎಸ್.(ಭದ್ರತೆ ಕುರಿತ ಸಂಪುಟ ಸಮಿತಿ) ಮಂಜೂರು ಮಾಡಿದ್ದೇಕೆ?**

6. ಡಿ.ಪಿ.ಪಿ.ಯನ್ನು ವ್ಯವಹಾರ ನಡೆಸಿದ ನಂತರ ಆಗಸ್ಟ್ 2015ರಲ್ಲಿ ಮಾರ್ಪಡಿಸಲಾಯಿತು. ಈ ಮಾರ್ಪಾಡಿನ ಪ್ರಕಾರ **ದಸಾಲ್ ಕಂಪನಿಯು ಈ ವ್ಯವಹಾರಕ್ಕೆ ಸಹಿ ಹಾಕುವಾಗ ಅನಿಲ್ ಅಂಬಾನಿಯ ರಿಲಯಂಸ್ ತನ್ನ ಆಫ್‌ಸೆಟ್ ಭಾಗೀದಾರ ಎನ್ನುವುದನ್ನು ಭಾರತೀಯ ಸರಕಾರಕ್ಕೆ ಹೇಳಬೇಕಾದ ಅಗತ್ಯ ಇಲ್ಲ. ಇಂತಹ ಅಗತ್ಯ ಇಲ್ಲದಂತೆ ಮಾಡಲಿಕ್ಕಾಗಿ ಈ ಮಾರ್ಪಾಡು ತರಲಾಯಿತೇ?**

7. 2011ರ ಎಂ.ಎಂ.ಆರ್.ಸಿ.ಎ. (ಮೀಡಿಯಂ ಮಲ್ಟಿ ರೋಲ್ ಕಾಂಬಟ್ ಏರ್ ಕ್ರಾಫ್ಟ್- ಮಧ್ಯಮ ಬಹುಪಾತ್ರ ಯುದ್ಧ ವಿಮಾನ)ದ ಪ್ರಾಯೋಗಿಕ ಪರೀಕ್ಷಣೆಗಳಲ್ಲಿ ಹರಾಜು ಬಿಡ್ ಸಲ್ಲಿಸಲು ರಫೇಲ್‌ನೊಂದಿಗೆ ಅರ್ಹವಾಗಿದ್ದ **ಯುರೋಫೈಟರ್ ಭಾರತಕ್ಕೆ ಬಿಡ್‌ನಲ್ಲಿ ನಮೂದಿಸಿದ ಬೆಲೆಯಲ್ಲಿ 20% ಡಿಸ್ಕೌಂಟ್ ಕೊಡುವುದಾಗಿ ಹೇಳಿತ್ತು. ಭಾರತವು ರಫೇಲ್‌ನಿಂದಲೂ ಇಂತಹ ಡಿಸ್ಕೌಂಟ್ ಕೇಳಲಿಲ್ಲವೇಕೆ? ಅಥವ ರಫೇಲ್ ಬದಲು ಯುರೋಫೈಟರ್ ನ ಆಯ್ಕೆಗೆ ಹೋಗಲಿಲ್ಲವೇಕೆ?**

8. ರಫೇಲ್ ವ್ಯವಹಾರದ ಬಗ್ಗೆ ಭಾರತೀಯ ಮಾತುಕತೆ ತಂಡದ ಮೂವರು ಸದಸ್ಯರಿಂದ ಹಲವು ಆಕ್ಷೇಪಗಳು ಬಂದಿದ್ದವು. ಅವನ್ನೆಲ್ಲ ಪ್ರಧಾನಿಗಳ ನೇತೃತ್ವದ ಸಿ.ಸಿ.ಎಸ್. ಅಂತಿಮವಾಗಿ ಬದಿಗೊತ್ತಿತು. ಈ ಆಕ್ಷೇಪಗಳಲ್ಲಿ ಪ್ರತಿಯೊಂದೂ ಈ ವ್ಯವಹಾರದ ಬೆಲೆ ಮತ್ತು ಸಮಗ್ರತೆಯ ಮೇಲೆ ಪರಿಣಾಮ ಬೀರುವಂತದ್ದಾಗಿತ್ತು. ನಿರ್ಧಾರ ಪ್ರಕ್ರಿಯೆಯ ಪಾರದರ್ಶಕತೆಯ ದೃಷ್ಟಿಯಿಂದ ಇವನ್ನು ಸಾರ್ವಜನಿಕಗೊಳಿಸಬೇಕಾಗಿತ್ತು. **ರಕ್ಷಣಾ ಮಂತ್ರಾಲಯದ ಉನ್ನತ ಅಧಿಕಾರಿಗಳ ಈ ಗಂಭೀರ ಲಿಖಿತ ಆಕ್ಷೇಪಗಳನ್ನು ಸರಕಾರ ಮರೆಮಾಚುತ್ತಿರುವುದೇಕೆ?**



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

9. 2015ರ 36 ರಫೇಲ್‌ಗಳ ವ್ಯವಹಾರ ಐ.ಎ.ಎಫ್.ನ 2007ರ 126 ವಿಮಾನಗಳ ಆವಶ್ಯಕತೆಗಳನ್ನು ಆಧರಿಸಿತ್ತು. ಇದನ್ನು""ವಿಮಾ ಸಿಬ್ಬಂದಿ ಗುಣಾತ್ಮಕ ಅಗತ್ಯಗಳು"(ಏರ್ ಸ್ಟಾಫ್ ಕ್ವಾಲಿಟೇಟಿವ್ ರಿಕ್ವಾಯರ್ಮೆಂಟ್ಸ್-ಎ.ಎಸ್.ಕ್ಯು.ಆರ್.) ಎಂದು ಕರೆಯಲಾಗುತ್ತಿದೆ. **ಒಂದು ಉತ್ತಮ ಮತ್ತು ಹೆಚ್ಚು ಆಧುನಿಕವಾದ ವಿಮಾನವನ್ನು ಖರೀದಿಸಲು ಹೊಸದೊಂದು ಎ.ಎಸ್.ಕ್ಯು.ಆರ್. ಪ್ರಕಟಿಸಲಿಲ್ಲವೇಕೆ?**

10. ಪ್ರಧಾನ ಮಂತ್ರಿ ಮೋದಿಯವರು ಎಪ್ರಿಲ್ 2015ರಲ್ಲಿ 36 ವಿಮಾನಗಳ ವ್ಯವಹಾರವನ್ನು ಪ್ರಕಟಿಸಿದಾಗ 2007ರ 126 ವಿಮಾನಗಳ ಪ್ರಸ್ತಾವ ಇನ್ನೂ ಜೀವಂತವಾಗಿತ್ತು. ಅದನ್ನಿನ್ನೂ ಹಿಂತೆಗೆದುಕೊಂಡಿರಲಿಲ್ಲ ಅಥವ ರದ್ದು ಮಾಡಿರಲಿಲ್ಲ(ಜೂನ್2015ರಲ್ಲಷ್ಟೇ ಕೊನೆಗೂ ಅದನ್ನು ರದ್ದುಮಾಡಲಾಯಿತು). **ಅದೇ ಕಂಪನಿಯೊಂದಿಗೆ ಇನ್ನೊಂದು ಪ್ರಸ್ತಾವಕ್ಕೆ ಒಪ್ಪುವುದು, 2013ರಿಂದ ಜಾರಿಯಲ್ಲಿದ್ದ ರಕ್ಷಣಾ ಮಂತ್ರಾಲಯದ್ದೇ ಡಿ.ಪಿ.ಪಿ.ಯ ಭಾವನೆಯನ್ನು ಶಿಥಿಲಗೊಳಿಸುವಂತದ್ದು. ಈ ಉಲ್ಲಂಘನೆಗೆ ಅವಕಾಶ ನೀಡಿದವರು ಯಾರು? ಯಾಕೆ ಅವಕಾಶ ನೀಡಿದರು?**

ಸುಪ್ರಿಂ ಕೋರ್ಟಿನ ತೀರ್ಪಿನ ನಂತರವೂ ಈ ಹತ್ತು ಜ್ವಲಂತ ಪ್ರಶ್ನೆಗಳು ಹಾಗೆಯೇ ಉಳಿದಿವೆ.

ತೀರ್ಪಾಗದೆ ವಿವಾದವಾದ ಸುಪ್ರಿಂ ಕೋರ್ಟ್ ತೀರ್ಪು



ವ್ಯಂಗ್ಯಚಿತ್ರ ಕೇಶವ್, ದಿ ಹಿಂದು

"ಸರಕಾರ ಈ ನ್ಯಾಯಾಲಯದ ತೀರ್ಪಿನ "ವ್ಯಾಕರಣವನ್ನು ಸರಿಪಡಿಸಲು" ಒಂದು ಅರ್ಜಿ ಸಲ್ಲಿಸಿದೆ. ಆದರೆ ಈಗ ಎದ್ದಿರುವ ಪ್ರಶ್ನೆ– ಸುಪ್ರಿಂ ಕೋರ್ಟ್ ಇದನ್ನು ಮರುವಿಮರ್ಶೆ ಅರ್ಜಿಯಾಗಿ ಪರಿಶೀಲಿಸುತ್ತದೆಯೇ, ಅಥವ ತನ್ನ ಮುಜುಗರವನ್ನು ಮುಚ್ಚಿಕೊಂಡು, ಇದು ಕೇವಲ ತನ್ನ ತಪ್ಪು ಇಂಗ್ಲಿಷ್ ವ್ಯಾಕರಣವನ್ನು ಸರಿಪಡಿಸುವ ಅರ್ಜಿಯಷ್ಟೇ ಎಂದು ಸಾರುತ್ತದೆಯೇ?

ಈಗ ಅದು ಸರಕಾರ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವಿಷಯಗಳನ್ನು ತಾನು ತಪ್ಪಾಗಿ ಅರ್ಥೈಸಿಕೊಂಡಿದ್ದೇನೆಯೇ ಎಂದು ಪರಿಶೀಲಿಸಬೇಕಾಗಿದೆ. ತನ್ನ ತೀರ್ಪನ್ನು 'ಸರಿಪಡಿಸಬೇಕು' ಎಂಬ ಸರಕಾರದ ಅರ್ಜಿಯನ್ನು ಮರುವಿಮರ್ಶೆ ಅರ್ಜಿ ಎಂದು ಪರಿಗಣಿಸಿ ಈ ವ್ಯವಹಾರವನ್ನು ಪ್ರಶ್ನಿಸಿರುವ ಅರ್ಜಿದಾರರು ಈ ಎಲ್ಲದರ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳಬೇಕಾಗಿದೆ. ಇಲ್ಲವಾದರೆ, ಈ ಹಿಂದೆ ಮಾಡಿದ ತಪ್ಪು ಇನ್ನಷ್ಟು ಗುರುತರವಾಗುತ್ತದೆ."

–ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ

ರಫೆಲ್ ವ್ಯವಹಾರ ಕುರಿತಂತೆ ಮುಖ್ಯ ನ್ಯಾಯಾಧೀಶರೂ ಇರುವ ಮೂವರು ನ್ಯಾಯಾಧೀಶರಿದ್ದ ಪೀಠದ ತೀರ್ಪು ಅದು ಹೊರ ಬರುತ್ತಿದ್ದಂತೆಯೇ ವಿವಾದಾಸ್ಪದವಾಗಿ ಬಿಟ್ಟಿದೆ. ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಹೇಳುವಂತೆ "ಮುಚ್ಚಿದ ಲಕೋಟೆಗಳಲ್ಲಿನ ಟಿಪ್ಪಣಿಗಳನ್ನು ಸ್ವೀಕರಿಸುವದು, ಸರಕಾರದ ತರ್ಕಗಳನ್ನು ಮೇಲ್ನೋಟಕ್ಕೇ ಒಪ್ಪಿಕೊಳ್ಳುವುದು ನ್ಯಾಯಾಲಯದ ಪ್ರತಿಷ್ಠೆಗೆ ಅಪಾಯ ತಂದೊಡ್ಡಿದೆ".

ನ್ಯಾಯಾಂಗ ಪರಾಮರ್ಶೆಗೆ ಒಳಗಾದ ಸಂಗತಿಯೆಂದರೆ

1. ರಫೆಲ್ ವ್ಯವಹಾರದಲ್ಲಿ ರಕ್ಷಣಾ ಖರೀದಿಗಳ ವಿಧಿ–ವಿಧಾನಗಳ ಉಲ್ಲಂಘನೆಯಾಗಿದೆಯೇ?
2. ಭಾರದ ಜನತೆಗೆ ರಕ್ಷಣಾ ವ್ಯವಹಾರಗಳನ್ನು ಕುರಿತಂತೆ ದೇಶದ ಖಜಾನೆಯಿಂದ ತೆತ್ತ ಬೆಲೆಯೇನು ಎಂದು ತಿಳಿಯುವ ಹಕ್ಕು ಇದೆಯೇ?

ಈ ಎರಡೂ ವಿಷಯಗಳಲ್ಲಿ ಪರಾಮರ್ಶೆ ನಡೆಸುವುದು ತಮ್ಮ ಕೆಲಸವಲ್ಲ, ರಫೆಲ್ ಬೆಲೆಯನ್ನು ಗುಪ್ತವಾಗಿಡುವ ಅವಕಾಶ ಸರಕಾರಕ್ಕಿದೆ ಎಂದು ತೀರ್ಪು ಹೇಳಿದೆ. ಆದ್ದರಿಂದ ಈ ವ್ಯವಹಾರವನ್ನು ಸುಪ್ರಿಂ ಕೋರ್ಟ್ ಎತ್ತಿ ಹಿಡಿದಿದೆ ಎಂದು ಈಗ ಸರಕಾರ ಹೇಳಿಕೊಳ್ಳಲಾರಂಣಿಸಿತು. ಆದರೆ ನಂತರದ ಬೆಳವಣಿಗೆಗಳು ಈ ತೀರ್ಪನ್ನೇ ಈಗ ವಿವಾದಾಸ್ಪದಗೊಳಿಸಿವೆ. ಸರಕಾರವೂ ಅದನ್ನು ಒಪ್ಪಿಕೊಳ್ಳಬೇಕಾಗಿ ಬಂದಿದೆ.

ತೀರ್ಪಿನಲ್ಲಿ ಈ ವ್ಯವಹಾರದ ಬೆಲೆ ನಿರ್ಧಾರದ ವಿವರಗಳನ್ನು ದೇಶದ 'ಮಹಾ ಲೆಕ್ಕ ಪರಿಶೋಧಕರಿಗೆ (ಸಿ.ಎ.ಜಿ.ಗೆ) ತಿಳಿಸಲಾಗಿದೆ, ಅದನ್ನು ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿ.ಎ.ಸಿ.) ಪರೀಕ್ಷಿಸಿದೆ ಎಂದು ಹೇಳಲಾಗಿದೆ.

ಆದರೆ ಇಂತಹ ಯಾವುದೇ ಸಿ.ಎ.ಜಿ. ವರದಿಯೇ ಇಲ್ಲ. ಮತ್ತು ತಾವು ಇಂತಹ ಯಾವುದೇ ವರದಿಯನ್ನು ಪಡೆದೇ ಇಲ್ಲ ಎಂದು ಪಿ.ಎ.ಸಿ. ಅಧ್ಯಕ್ಷರು ಹೇಳಿದ್ದಾರೆ.

ಈ ಸಿ.ಎ.ಜಿ. ವರದಿ ಎಂಬುದೇ ಇಲ್ಲ, ಮತ್ತು ಪಿ.ಎ.ಸಿ.ಗೆ ಏನನ್ನೂ ಕಳಿಸಿಯೇ ಇಲ್ಲ ಎಂಬುದನ್ನು ಸರಕಾರವೇ ಒಪ್ಪಿಕೊಳ್ಳಬೇಕಾಗಿ ಬಂದಿದೆ. ಆ ನಂತರವೂ ಸರಕಾರದ ಇನ್ನಷ್ಟು ಸುಳ್ಳುಗಳು ಬಯಲಿಗೆ ಬರುತ್ತಿವೆ. ಸಿ.ಎ.ಜಿ. ವರದಿಯ ಒಂದು ಪರಿಷ್ಕರಿಸಿದ ಆವೃತ್ತಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ ಎಂದೂ ತೀರ್ಪಿನಲ್ಲಿ ಹೇಳಲಾಗಿತ್ತು. ವರದಿಯೇ ಇಲ್ಲವಾದ್ದರಿಂದ ಅದರ ಯಾವುದೇ ಆವೃತ್ತಿಯನ್ನು ಮಂಡಿಸುವ ಪ್ರಶ್ನೆಯೇ ಇಲ್ಲ, ಮಾತ್ರವಲ್ಲ, ಕಾನೂನು ಮತ್ತು ಸಂವಿಧಾನದ ಪ್ರಕಾರ ಈ ರೀತಿ ಸಿ.ಎ.ಜಿ.ಯ ವರದಿಯನ್ನು ಪರಿಷ್ಕರಿಸಲು ಅವಕಾಶವೇ ಇಲ್ಲ ಎಂದು ಪರಿಣಿತರು ಹೇಳುತ್ತಿದ್ದಾರೆ.

ಇವೆಲ್ಲ ಆ ಮುಚ್ಚಿದ ಲಕೋಟೆಯಲ್ಲಿ ಇದ್ದುದರಿಂದ ಅದು ಅರ್ಜಿದಾರರ ಗಮನಕ್ಕೆ ಬಂದಿರಲಿಲ್ಲ. ಇಲ್ಲವಾದರೆ ವಿಚಾರಣೆಯ ವೇಳೆಯಲ್ಲಿಯೇ ಇವು ಬಯಲಿಗೆ ಬರುತ್ತಿದ್ದವು.

ಈ ಮುಚ್ಚಿದ ಲಕೋಟೆಯಲ್ಲಿರುವ ಸಂಗತಿ ಸಂದಿಗ್ಧವಾಗಿದೆ ಎಂದೀಗ ಹೇಳಲಾಗುತ್ತಿದೆ. ಆದ್ದರಿಂದ ಸರಕಾರದ ಮುಚ್ಚುಮರೆಯ ತಂತ್ರ ಈಗ ಅದಕ್ಕೇ ತಿರುಗುಬಾಣವಾಗಿದೆ ಎಂಬುದು ಸ್ಪಷ್ಟ. ಸಿಎಜಿ ಗೆ ರಫೆಲ್ ವ್ಯವಹಾರದ ಬೆಲೆಗಳ ವಿವರಗಳನ್ನು ತಿಳಿಸಲಾಗಿದೆ ಎಂದು ಹೇಳಿರುವುದು ಸರಿ. ಆದರೆ ತೀರ್ಪಿನಲ್ಲಿ ನಂತರ ಇರುವ ಅಂಶಗಳು ನಿಜಸಂಗತಿಯಲ್ಲ, ಅವು 'ವಿಧಾನದ ವಿವರವಷ್ಟೇ" ಎಂದು ಸರಕಾರ ಹೇಳುತ್ತಿದೆ. ನ್ಯಾಯಾಲಯ ಅದನ್ನು ಹಾಗೆ ಅರ್ಥಮಾಡಿಕೊಳ್ಳಲು ಅದರ 'ಇಂಗ್ಲಿಷ್ ವ್ಯಾಕರಣದ ಅಜ್ಞಾನ' ಎಂದು ಪರೋಕ್ಷವಾಗಿ ದೂರಿದಂತಾಗಿದೆ.

ಸರಕಾರ ಈ ನ್ಯಾಯಾಲಯದ ತೀರ್ಪಿನ "ವ್ಯಾಕರಣವನ್ನು ಸರಿಪಡಿಸಲು" ಒಂದು ಅರ್ಜಿ ಸಲ್ಲಿಸಿದೆ. ಆದರೆ ಈಗ ಎದ್ದಿರುವ ಪ್ರಶ್ನೆ– ಸುಪ್ರಿಂ ಕೋರ್ಟ್ ಇದನ್ನು ಮರುವಿಮರ್ಶೆ ಅರ್ಜಿಯಾಗಿ ಪರಿಶೀಲಿಸುತ್ತದೆಯೇ, ಅಥವ ತನ್ನ ಮುಜುಗರವನ್ನು ಮುಚ್ಚಿಕೊಂಡು, ಇದು ಕೇವಲ ತನ್ನ ತಪ್ಪು ಇಂಗ್ಲಿಷ್ ವ್ಯಾಕರಣವನ್ನು ಸರಿಪಡಿಸುವ ಅರ್ಜಿಯಷ್ಟೇ ಎಂದು ಸಾರುತ್ತದೆಯೇ?"– ಇದು ಮೇಲೆ ಹೇಳಿದ 'ಪೀಪಲ್ಸ್ ಡೆಮಾಕ್ರಸಿ' ಎತ್ತಿರುವ ಪ್ರಶ್ನೆ.

ಇನ್ನೊಂದು ಪ್ರಶ್ನೆಯೂ ಏಳುತ್ತದೆ ಎಂದಿದೆ ಈ ಸಂಪಾದಕೀಯ.

ಈ ಮುಚ್ಚಿದ ಲಕೋಟೆಯಲ್ಲಿ ಇನ್ನೂ ಏನೇನು ಇತ್ತು? ಈ ವಿಷಯದಲ್ಲಿ ತಾನು ಮಧ್ಯಪ್ರವೇಶಿಸಬಾರದೆಂಬ ನಿರ್ಣಯಕ್ಕೆ ಸುಪ್ರಿಂ ಕೋರ್ಟ್ ಬರುವಂತೆ ಮಾಡಿದ ಬೇರೆ ಸಂಗತಿಗಳೂ ಇದ್ದುವೆ? ಕೇವಲ ರಫೆಲ್ ವಿಮಾನದ ಬೆಲೆಗಳ ಬಗ್ಗೆ ಇದ್ದರೆ, ಸಿಎಜಿ, ಪಿ.ಎ.ಸಿ. ಸಂಸತ್ತಿನಲ್ಲಿ ಪರಿಷ್ಕರಿಸಿದ ವರದಿ ಇತ್ಯಾದಿಗಳ ಪ್ರಸ್ತಾಪ ಏಕೆ ಬಂದಿದೆ? ಅದು ಬೆಲೆಯ ಬಗ್ಗೆ ಅಲ್ಲವಾದರೆ, ಅರ್ಜಿದಾರರ ಗಮನಕ್ಕೆ ತರದ ಈ ಗುಪ್ತತೆ ಯಾಕೆ?

ಒಂದು ಸರಕಾರದ ನಿರ್ವಹಣೆಯಲ್ಲಿ, ವಿಧಿ–ವಿಧಾನಗಳನ್ನು ಉಲ್ಲಂಘಿಸುವುದರಿಂದ ಒಂದು ಕಂಪನಿಗೆ ಅಥವ ವ್ಯಕ್ತಿಗೆ ಸಿಗುವ ಪ್ರಯೋಜನ ದೇಶದ ಖಜಾನೆಗೆ ನಷ್ಟ ಉಂಟು ಮಾಡಿದರೆ, ಅದನ್ನು 'ಭ್ರಷ್ಟಾಚಾರ' ಎನ್ನಲಾಗುತ್ತದೆ. ಯುಪಿಎ ಕಾಲದ 2ಜಿ ಹಗರಣದಲ್ಲಾಗಲೀ, ಕಲ್ಲಿದ್ದಲು ಹಗರಣದಲ್ಲಾಗಲೀ ಆದದ್ದು ಇದೇ. ಆದ್ದರಿಂದ ಸುಪ್ರಿಂ ಕೋರ್ಟ್ ರಫೆಲ್ ವ್ಯವಹಾರದಲ್ಲೂ ಇದನ್ನು ಪರೀಕ್ಷಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಸರಕಾರದ ತರ್ಕಗಳನ್ನು ವಿಮರ್ಶಿಸದೆ ಹಾಗೆಯೇ ಸ್ವೀಕರಿಸಿದೆ, ತನ್ನ ತೀರ್ಪಿನಲ್ಲಿ ಸರಕಾರ ಹೇಳಿದ್ದನ್ನು ಯಥಾವತ್ ನಕಲು ಮಾಡಿದಂತೆ ಕಾಣುತ್ತದೆ ಎಂಬುದೇ ಈ ತೀರ್ಪಿನ ಬಗ್ಗೆ ಉಂಟಾಗಿರುವ ನಿರಾಸೆ.

ರಕ್ಷಣಾ ಖರೀದಿಗಳಲ್ಲಿ ಪಾರದರ್ಶಕತೆಯನ್ನು ತರಲೆಂದೇ ಡಿ.ಪಿ.ಪಿ. ಎಂಬುದನ್ನು ತರಲಾಯಿತು. ಐ.ಜಿ.ಎ. ಅಥವ ಸರಕಾರಗಳ ನಡುವಿನ ಒಪ್ಪಂದ ತುರ್ತಿನ ಸಂದರ್ಭಗಳಲ್ಲಿ ಮಾತ್ರ ಅನುಸರಿಸಬೇಕಾದ್ದು ಎಂಬ ತಿಳುವಳಿಕೆಗೂ ಬರಲಾಗಿತ್ತು. ಆದರೆ ಮೋದಿಯವರ ರಫೆಲ್ ವ್ಯವಹಾರ ವ್ಯವಹಾರ ಇವನ್ನೆಲ್ಲ ಬದಿಗೊತ್ತಿ "ಹಳೆಯ ದಿನ" ಗಳಿಗೆ ಮರಳಿದೆ. ಇದನ್ನು ನ್ಯಾಯಾಲಯ ಪರಿಶೀಲಿಸಬೇಕಾಗಿತ್ತು.

ಈಗ ಅದು ಸರಕಾರ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವಿಷಯಗಳನ್ನು ತಾನು ತಪ್ಪಾಗಿ ಅರ್ಥೈಸಿಕೊಂಡಿದ್ದೇನೆಯೇ ಎಂದು ಪರಿಶೀಲಿಸಬೇಕಾಗಿದೆ. ತನ್ನ ತೀರ್ಪನ್ನು 'ಸರಿಪಡಿಸಬೇಕು' ಎಂಬ ಸರಕಾರದ ಅರ್ಜಿಯನ್ನು ಮರುವಿಮರ್ಶೆ ಅರ್ಜಿ ಎಂದು ಪರಿಗಣಿಸಿ ಈ ವ್ಯವಹಾರವನ್ನು ಪ್ರಶ್ನಿಸಿರುವ ಅರ್ಜಿದಾರರು ಈ ಎಲ್ಲದರ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳಬೇಕಾಗಿದೆ. ಇಲ್ಲವಾದರೆ, ಈ ಹಿಂದೆ ಮಾಡಿದ ತಪ್ಪು ಇನ್ನಷ್ಟು ಗುರುತರವಾಗುತ್ತದೆ."

ಅದೇನೇ ಇರಲಿ, ಸರಕಾರದ ಧೋರಣೆಯ ಪ್ರಶ್ನೆಗಳಲ್ಲಿ ನ್ಯಾಯಾಂಗದ ಪಾತ್ರ ಸೀಮಿತವಾಗಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಇದು ಒಟ್ಟಾರೆಯಾಗಿ ಒಂದು ರಾಜಕೀಯ ಪ್ರಶ್ನೆಯಾದ್ದರಿಂದ ಸಿಪಿಐ(ಎಂ) ಈ ವ್ಯವಹಾರದಲ್ಲಿನ ನಿಜಸಂಗತಿಗಳನ್ನು ಅರಿಯಲು ರಾಜಕೀಯ ದಾರಿಯಲ್ಲೇ ಹೋಗಬಯಸುತ್ತದೆ ಎನ್ನುತ್ತಾರೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕರಾದ ಪ್ರಕಾಶ ಕಾರಟ್. ಸಿಪಿಐ(ಎಂ) ಮತ್ತು ಇತರ ಪಕ್ಷಗಳು ಈ ವ್ಯವಹಾರವನ್ನು ಪರೀಕ್ಷಿಸಲು ಒಂದು ಜಂಟಿ ಸಂಸದೀಯ ಸಮಿತಿಯನ್ನು ರಚಿಸಬೇಕು ಎಂದು ಆಗ್ರಹಿಸುತ್ತಿವೆ. ಸಿ.ಎ.ಜಿ. ಈ ವ್ಯವಹಾರವನ್ನು ಕುರಿತ ತನ್ನ ವರದಿಯನ್ನು ಸಂಸತ್ತಿಗೆ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ)ಗೆ ಕೊಡಬೇಕಾಗಿದೆ.

ಅಂತಿಮವಾಗಿ, ಬೊಫೋರ್ಸ್‌ನಂತೆ ಈ ಬಗ್ಗೆ ನಿರ್ಧಾರವಾಗಬೇಕಾದ್ದು ಸಾರ್ವಜನಿಕ ಅಭಿಪ್ರಾಯದ ಒರೆಗಲ್ಲಿನಲ್ಲೇ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್



ದಸೊಲ್ ರಿಲಯಂಸ್ ಏರೋಸ್ಪೇಸ್ ಲಿ (ಡಿಆರ್‌ಎಎಲ್). ರಫೆಲ್ ವಿಮಾನ ತಯಾರಿಸುವ ದಸೊಲರ ಮತ್ತು ಅನಿಲ್ ಅಂಬಾನಿಯವರ ಜಂಟಿ ಕಂಪನಿಯ ಆರಂಭೋತ್ಸವ ಸಮಾರಂಭದಲ್ಲಿ ದಸೊಲ್ ನ ಮುಖ್ಯಸ್ಥ ಎರಿಲ್ ಟ್ರೆಪಿಯರ್ ಮತ್ತು ಅನಿಲ್ ಅಂಬಾನಿ ಜೊತೆಗೆ ಕೇಂದ್ರ ಮಂತ್ರಿ ನಿತಿನ್ ದಡ್ಕರಿ

ವಿಧಾನ ಮಂಡಲದ ಕಲಾಪಗಳಲ್ಲಿ

ವಿಧಾನ ಮಂಡಲದ ಅಧಿವೇಶನದ ಕಲಾಪಗಳು ಈ ವಾರದ ರಾಜ್ಯದ ಪ್ರಮುಖ ವಿದ್ಯಮಾನವಾಗಿತ್ತು. ಕಲಾಪಗಳಲ್ಲಿ ಕಂಡು ಬಂದ ಮುಖ್ಯ ಅಂಶಗಳು ಇಂತಿವೆ :

ಬರದಿಂದ ಆರ್ಥಿಕ ಬೆಳವಣಿಗೆಗೆ ಗರ

ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾದ 'ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿ' ವರದಿಯಲ್ಲಿನ ಅಂಕಿ ಅಂಶಗಳ ಪ್ರಕಾರ 2017–18ರ ಆರ್ಥಿಕ ವರ್ಷದಲ್ಲಿನ ರಾಜ್ಯದ ಆರ್ಥಿಕ ಬೆಳವಣಿಗೆ ದರವು ಶೇ 8.5, ಈ ವರ್ಷ ಕುಸಿತವಾಗಬಹುದು. ರಾಜ್ಯವನ್ನು ಕಾಡುತ್ತಿರುವ ಬರಗಾಲವು ಕೃಷಿ ಮತ್ತು ಸಂಬಂಧಿತ ವಲಯಗಳೂ ಸೇರಿದಂತೆ ಒಟ್ಟಾರೆ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಬೀರಬಹುದು ಎಂದು 'ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿ' ಆತಂಕ ವ್ಯಕ್ತಪಡಿಸಿದೆ. ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳಿಗೆ 14ನೇ ಹಣ ಕಾಸು ಆಯೋಗದ ಅನುದಾನ ಬಿಡುಗಡೆಯಲ್ಲಿ ವಿಳಂಬವಾಗಿದೆ. ಈ ರಣದಿಂದಾಗಿ, ಇದರಡಿ ಅನುಷ್ಠಾನಗೊಳ್ಳಬೇಕಾದ ಯೋಜನೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ವರದಿ ಹೇಳಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್, ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಪ್ರಧಾನಮಂತ್ರಿ ಆವಾಸ್ ಯೋಜನೆ, ಗ್ರಾಮೀಣ ಸ್ವಚ್ಛ ಭಾರತ್ ಯೋಜನೆಗಳ ಅಂದಾಜು ಅನುದಾನದಡಿ

ಶೇ 30ರಷ್ಟು ಮೊತ್ತವೂ ಬಂದಿಲ್ಲ. ರಾಜ್ಯದ ಬಹುತೇಕ ಭಾಗಗಳಲ್ಲಿ, ಪ್ರಮುಖವಾಗಿ ಉತ್ತರ ಕರ್ನಾಟಕದಲ್ಲಿ ಬರ ಬಂದಿದೆ. ರಾಷ್ಟ್ರೀಯ ವಿಕೋಪ ಪರಿಹಾರ ನಿಧಿಯಿಂದ ನಿರೀಕ್ಷಿತ ಅನುದಾನ ಬಂದಿಲ್ಲ. 'ಜಿಎಸ್‌ಟಿ ಅಡಿ 2017–18ರಲ್ಲಿ ಕೇಂದ್ರದಿಂದ 7,500 ಕೋಟಿ ರೂ. ಬಂದಿತ್ತು. ಈ ವರ್ಷ ಆ ಮೊತ್ತ ಸ್ವಲ್ಪ ಕಡಿಮೆ ಆಗಲಿದೆ' ಎಂದೂ ವಿಧಾನಸಭೆಗೆ ತಿಳಿಸಲಾಯಿತು. ರಾಜ್ಯದ ಸ್ವಂತ ಸಂಪನ್ಮೂಲದ ಮೇಲೆ ಇದರಿಂದ ಹೊರೆ ಬಿದ್ದಿದೆ.

ಟಿಪ್ಪು ಜಯಂತಿ ತಗಾದೆ: ಕಲಾಪಕ್ಕೆ ಬಾಧೆ

ಟಿಪ್ಪು ಜಯಂತಿ ಕುರಿತ ಗಮನ ಸೆಳೆಯುವ ಸೂಚನೆಯನ್ನು ಕಲಾಪಪಟ್ಟಿಯಿಂದ ಕೈಬಿಟ್ಟಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಹಾಗೂ ಸರ್ಕಾರ ಈ ಕುರಿತು ತಕ್ಷಣವೇ ಉತ್ತರ ನೀಡಬೇಕೆಂದು ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರು ವಿಧಾನ ಪರಿಷತ್ತಿನಲ್ಲಿ ಒಂದು ಧರಣಿ ನಡೆಸಿದರು. ಸದನದಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಗಿದ್ದರಿಂದ ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ಮೂರು ಬಾರಿ ಕಲಾಪ ಮುಂದೂಡಬೇಕಾಯಿತು. ಧರಣಿಯಿಂದಾಗಿ ಸುಮಾರು ಮೂರು ಗಂಟೆಗಳ ಕಾಲ ಕಲಾಪಕ್ಕೆ ಅಡ್ಡಿ ಉಂಟಾಯಿತು.

'ಟಿಪ್ಪು ಜಯಂತಿಯಿಂದಾಗಿ ಕೊಡವರ ಮನಸ್ಸಿಗೆ ನೋವುಂಟಾಗಿದೆ. ಇದರಿಂದ ಕೋಮುಸೌಹಾರ್ದ ಹಾಳಾಗಿದೆ' ಎಂದು ಆರೋಪಿಸಿ ಬಿಜೆಪಿ ಸದಸ್ಯ ಎಂ.ಪಿ.ಸುನೀಲ್ ಸುಬ್ರಮಣಿ ಅವರು ಮುಖ್ಯಮಂತ್ರಿಯ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿದ್ದರು. ಇದಕ್ಕೆ ಮುಖ್ಯಮಂತ್ರಿಯಿಂದ ಮರುದಿನ ಉತ್ತರ ಕೊಡಿಸುವುದಾಗಿ ಸಭಾನಾಯಕಿ ಭರವಸೆ ನೀಡಿದ್ದರು. ಆದರೆ, ಮರುದಿನದ ಕಲಾಪಗಳ ಪಟ್ಟಿಯಲ್ಲಿ ಈ ವಿಷಯ ಇರಲಿಲ್ಲ. ಇದು ವಿರೋಧ ಪಕ್ಷದ ಆಕ್ರೋಶಕ್ಕೆ ಕಾರಣವಾಗಿತ್ತು. ಆಡಳಿತ ಪಕ್ಷದ ಕೆಲವು ಸದಸ್ಯರು 'ಶೇಮ್...ಶೇಮ್...' ಎಂದು ಅಪಹಾಸ್ಯ ಮಾಡಿದ್ದು ಮತ್ತೆ ಗದ್ದಲ ಶುರುವಾಗಿತ್ತು. "ಜನರ ಹೊಟ್ಟೆಪಾಡಿಗೆ ಸಂಬಂಧಿಸಿದ ವಿಚಾರಗಳು ಬಿಜೆಪಿಯವರಿಗೆ ಮುಖ್ಯವಲ್ಲ. ಜನರನ್ನು ಒಡೆಯುವ ವಿಚಾರದಲ್ಲೇ ಅವರಿಗೆ ನಂಬಿಕೆ" ಎಂದು ಕಾನೂನು ಸಚಿವ ಕೃಷ್ಣ ಬೈರೇಗೌಡ ಹೇಳಿದ್ದು ಬಿಜೆಪಿ ಸದಸ್ಯರನ್ನು ಕೆರಳಿಸಿದ್ದರೂ ಅದು ವಾಸ್ತವವಾಗಿತ್ತು, ಜನರನ್ನು ಬಾಧಿಸುವ ಪ್ರಶ್ನೆಗಳ? ಬರ, ಸಾಲ ಮನ್ನಾ, ಒತ್ತುವರಿ ತೆರವು, ಬಗರ್ ಹುಕುಂ – ಬಗ್ಗೆ ಕೆಲವು ಕಾಟಾಚಾರದ ಪ್ರಶ್ನೆಗಳನ್ನು ಬಿಟ್ಟರೆ ಬಿಜೆಪಿ ಹೆಚ್ಚು ಗದ್ದಲ ಮಾಡಲಿಲ್ಲ.

ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಕೇವಲ ಶೇ 6ರಷ್ಟು

ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಕೇವಲ ಶೇ 6ರಷ್ಟು ಇದೆ. ಪ್ರಕರಣಗಳ ಸಮರ್ಪಕ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಬೇಕು. ವಿಶೇಷ ಪೊಲೀಸ್ ಠಾಣೆಗಳನ್ನು ತೆರೆಯಬೇಕು ಎಂದು ವಿಧಾನಮಂಡಲದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಶಿಫಾರಸು ಮಾಡಿದೆ ಸಮಿತಿಯ ಮೊದಲ ವರದಿಯನ್ನು ಸಮಿತಿಯ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ವಿಧಾನಸಭೆಯಲ್ಲಿ ಮಂಡಿಸಿದರು.

2015ರಲ್ಲಿ ಶೇ 6ರಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. 2016ರಲ್ಲಿ 1,012 ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದ್ದು, ಶಿಕ್ಷೆ ಪ್ರಮಾಣ ಶೇ5ರಷ್ಟು. 2017ರಲ್ಲಿ 1032 ಪ್ರಕರಣಗಳು, 2018ರಲ್ಲಿ 456 ಪ್ರಕರಣಗಳು ಮುಕ್ತಾಯಗೊಂಡಿದ್ದು, ಶಿಕ್ಷೆ ಪ್ರಮಾಣ ಶೇ 5ರಷ್ಟಿದೆ. ಈ ವರ್ಷದ ಜುಲೈನಲ್ಲಿ 90 ಪ್ರಕರಣಗಳು ವಿಲೇವಾರಿಯಾಗಿದ್ದು, ಶಿಕ್ಷೆ ಪ್ರಮಾಣ ಶೇ 2ರಷ್ಟು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉತ್ತರ ಕರ್ನಾಟಕದ ಶಾಸಕರ ನಿಧಿಯಲ್ಲಿ 486 ಕೋಟಿ ರೂ. ಬಳಕೆಯಾಗಿಲ್ಲ

ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಈ ಭಾಗದ ಜನಪ್ರತಿನಿಧಿಗಳು ಏರು ಧ್ವನಿಯಲ್ಲಿ ಕೂಗೆಬ್ಬಿಸುತ್ತಿದ್ದಾರೆ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯಕ್ಕಾಗಿ ಆಗ್ರಹಿಸಿ, ಉತ್ತರ ಕರ್ನಾಟಕ ಹೋರಾಟ ಸಮಿತಿ ಸದಸ್ಯರು ಬೆಳಗಾವಿಯ ಸುವರ್ಣ ಸೌಧದ ಬಳಿ ಪ್ರತಿಭಟನೆ ನಡೆಸಿದರು ಕೂಡಾ. ಆದರೆ, ಈ ಭಾಗದ ಜಿಲ್ಲೆಗಳ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಅನುದಾನದಲ್ಲಿ 486 ಕೋಟಿ ರೂ. ಖರ್ಚೇ ಆಗಿಲ್ಲ.

ಅಭಿವೃದ್ಧಿಗೆ ನೀಡುತ್ತಿರುವ ಅನುದಾನ ಸಾಲದು ಎಂದು ಶಾಸಕರು ವಿಧಾನಮಂಡಲದ ಅಧಿವೇಶನಗಳಲ್ಲಿ ಪಕ್ಷಾತೀತವಾಗಿ ಆರೋಪಿಸುತ್ತಾರೆ. ಆದರೆ, ರಾಜ್ಯದಲ್ಲಿ ಶಾಸಕರ ನಿಧಿಯಡಿ ಬಿಡುಗಡೆಯಾಗಿರುವ ಭಾರಿ ಮೊತ್ತದ ಅನುದಾನ ಬಳಕೆಯೇ ಆಗಿಲ್ಲ. ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ವಿಧಾನಸಭೆಯಲ್ಲಿ ಇತ್ತೀಚೆಗೆ ನೀಡಿದ ಮಾಹಿತಿಯಿಂದ ಅಂಶ ಬೆಳಕಿಗೆ ಬಂದಿದೆ.

ಪ್ರತಿ ವಿಧಾನಸಭಾ ಸದಸ್ಯರಿಗೆ ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಪ್ರತಿವರ್ಷ ಕ್ಷೇತ್ರದ ಅಭಿವೃದ್ಧಿಗಾಗಿ ತಲಾ 2 ಕೋಟಿ ರೂ. ಅನುದಾನ ನೀಡಲಾಗುತ್ತಿದೆ. ಶಾಸಕರ ವಿವೇಚನೆ ಹಾಗೂ ಅವರು ನೀಡುವ ಕ್ರಿಯಾಯೋಜನೆ ಆಧರಿಸಿ ಮಾರ್ಗಸೂಚಿ ಅನ್ವಯ ಆಯಾ ಜಿಲ್ಲಾಧಿಕಾರಿ ಅನುದಾನ ಬಿಡುಗಡೆ ಮಾಡುತ್ತಾರೆ. ಈ ನಿಧಿಗೆ 2018–19ನೇ ಸಾಲಿನಲ್ಲಿ ಸರ್ಕಾರ ಇದುವರೆಗೆ 292.44 ಕೋಟಿ ರೂ. ಬಿಡುಗಡೆ ಮಾಡಿದೆ. ಆದರೆ, ವರ್ಷದಿಂದ ವರ್ಷಕ್ಕೆ ವೆಚ್ಚವಾಗದ ಮೊತ್ತ ಬೆಟ್ಟದಂತೆ ಬೆಳೆಯುತ್ತಲೇ ಇದೆ. ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ ಸರಾಸರಿ ಶೇ 51ರಷ್ಟು ಅನುದಾನ ಬಳಕೆ ಆಗದೇ ಉಳಿದಿದೆ.

ಕೇಳಿಸಿದ್ದು

ಸೈನ್ಸ್ ಕಾಂಗ್ರೆಸ್ ಬದಿಗಿಟ್ಟ ಚರ್ಚೆಗಳು

ಭವಿಷ್ಯದ ಬಗ್ಗೆ ಚರ್ಚೆ ಮಾಡುವಾಗ ವರ್ತಮಾನದಲ್ಲಿ ಏನಾಗುತ್ತಿದೆ ಎಂಬುದರ ಚರ್ಚೆ ಮುನ್ನೆಲೆಗೆ ಬರಬೇಕು. 'ಕೃಷಿಯಲ್ಲಿ ವಿಜ್ಞಾನ ತಂದಿರುವ ಹೊಸ ಬದಲಾವಣೆ'ಗಳನ್ನು ಕುರಿತು ಒಂದು ಗೋಷ್ಠಿ ಇದೆ. ಇಲ್ಲಿ, ಭಾರತದಲ್ಲಿ ನನೆಗುದಿಗೆ ಬಿದ್ದಿರುವ 900ಲಕ್ಷ ಹೆಕ್ಟೇರ್ ಬಂಜರು ಭೂಮಿಯ ಅಭಿವೃದ್ಧಿಯ ಬಗ್ಗೆ ಚರ್ಚೆಯೇ ಇಲ್ಲ. 'ಆರೋಗ್ಯ ಕ್ಷೇತ್ರದ ಬೆಳವಣಿಗೆಯಲ್ಲಿ ಸಮಕಾಲೀನ ಸಂಶೋಧನೆಯ ಪಾತ್ರ' ಎಂಬ ವಿಷಯವನ್ನು ವೈದ್ಯಕೀಯ ಗೋಷ್ಠಿಯಲ್ಲಿ ಸೇರಿಸಿದೆ. ವಿಷಾದವೆಂದರೆ ಈಗಲೂ ಜನಸಾಮಾನ್ಯರಿಗೆ ಬ್ರಾಂಡೆಡ್ ಔಷಧಿಗಳು ಮತ್ತು ಜೆನೆರಿಕ್ ಔಷಧಿಗಳ ಬಗ್ಗೆ ಪ್ರಾಥಮಿಕ ತಿಳಿವಳಿಕೆಯೂ ಇಲ್ಲ. 'ಮನುಷ್ಯನ ಆರೋಗ್ಯಕ್ಕೆ ಸಸ್ಯೋತ್ಪನ್ನಗಳು' ಎಂಬ ಗೋಷ್ಠಿಯನ್ನು ಇಂಡಿಯನ್ ಬಟಾನಿಕಲ್ ಸೊಸೈಟಿಯ ಮುಖ್ಯಸ್ಥರೇ ಅಧ್ಯಕ್ಷರಾಗಿ ನಡೆಸಿಕೊಡುತ್ತಾರೆ. ನಮ್ಮ ಔಷಧೀಯ ಸಸ್ಯಗಳನ್ನು ಉಳಿಸಿಕೊಳ್ಳುವ ಬಗೆ ಹೇಗೆ ಎಂಬ ಗಂಭೀರ ಸಮಸ್ಯೆಯ ಚರ್ಚೆಗೆ ಇದು ವೇದಿಕೆಯಾಗಬೇಕಾಗಿತ್ತು.

'ಉಜ್ವಲ ಭವಿಷ್ಯ ಭಾರತದಲ್ಲಿ ಮಾನವ ಶಾಸ್ತ್ರದ ಮರುವ್ಯಾಖ್ಯಾನ' ಎಂಬುದು ಇಲ್ಲಿ ಚರ್ಚೆಯಾಗಲಿರುವ ವಿಷಯಗಳಲ್ಲೊಂದು. ಗುಡ್ಡಗಾಡು ಜನರನ್ನು ಇರುವ ನೆಲೆಯಲ್ಲೇ ಬಿಡಬೇಕೇ ಅಥವಾ ಸಮಾಜದ ಮುಖ್ಯವಾಹಿನಿಗೆ ತರಬೇಕೇ ಎಂಬ ವಿಚಾರದಲ್ಲಿ ಗಟ್ಟಿ ದನಿಯಲ್ಲಿ ಸರ್ಕಾರವನ್ನು ಎಚ್ಚರಿಸುವ ಸಮಾಜ ವಿಜ್ಞಾನಿಗಳು ಎಲ್ಲಿ ಹೋಗಿದ್ದಾರೆ ಎಂದು ಕೇಳುವ ಪರಿಸ್ಥಿತಿ ನಮ್ಮದು. 'ಭವಿಷ್ಯದಲ್ಲಿ ರಾಸಾಯನಿಕ ವಿಜ್ಞಾನ ಶಿಕ್ಷಣ ಹೇಗಿರಬೇಕು' ಎಂಬ ಗೋಷ್ಠಿಯನ್ನು ಏರ್ಪಡಿಸುವ ಮೊದಲು ಗಬ್ಬೆದ್ದುಹೋಗಿರುವ ನಮ್ಮ ಸುಮಾರು 250 ನದಿಗಳ ಶುದ್ಧೀಕರಣದಲ್ಲಿ ಜನಸಮುದಾಯವನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರತ್ತ ಯೋಚಿಸುವುದು ಸದ್ಯದ ಅವಶ್ಯಕತೆ. ಜನಸಾಮಾನ್ಯರನ್ನು ಒಳಗೊಳ್ಳದಿದ್ದರೆ

ಇವೆಲ್ಲ ಲ್ಯಾಬಿನಲ್ಲೇ ಹುಟ್ಟಿ, ಲ್ಯಾಬಿನಲ್ಲೇ ಸಾಯುವ ಮಹಾ ಯೋಜನೆಗಳಾಗುತ್ತವೆ. ಭೂವಿಜ್ಞಾನದಲ್ಲೂ ಬದಲಾವಣೆಗಳು ಬೇಕಾಗುತ್ತವೆ. ನಗರಗಳಲ್ಲಿ ಉತ್ಪತ್ತಿಯಾಗುತ್ತಿರುವ ಸಹಸ್ರಾರು ಟನ್ ಗಟ್ಟಿ ಕಸವನ್ನು ಎಲ್ಲಿ ಹೂತರೆ ಅಂತರ್ಜಲ ಕಲುಷಿತವಾಗುವುದಿಲ್ಲ ಎಂದು ವಿವೇಚಿಸುವ ತಜ್ಞರು ಬೇಕು. ಸಮಾಜಕ್ಕೆ ಒದಗಿಬರದ ವಿಜ್ಞಾನ– ತಂತ್ರಜ್ಞಾನ ಇದ್ದರೇನು– ಇಲ್ಲದಿದ್ದರೇನು!

1914ರಲ್ಲಿ ಸ್ಥಾಪನೆಯಾಗಿ, ಬೆಳ್ಳಿಹಬ್ಬ, ಚಿನ್ನದಹಬ್ಬ, ವಜ್ರಮಹೋತ್ಸವ, ಪ್ಲಾಟಿನಂ ಮಹೋತ್ಸವ, ಶತಮಾನೋತ್ಸವ ಆಚರಿಸಿ ಪ್ರತಿವರ್ಷವೂ ಸಂಭ್ರಮಿಸುತ್ತಿರುವ ಇಂಡಿಯನ್ ಸೈನ್ಸ್ ಕಾಂಗ್ರೆಸ್, ಲಾಗಾಯ್ತಿನಿಂದ ಬಿಂಬಿಸಿರುವ ಚರ್ಚೆಯ ವಿಚಾರಗಳನ್ನು ನೋಡಿದರೆ, ವಿವಾದಾಸ್ಪದ ವಿಷಯಗಳ ಚರ್ಚೆಗೆ ಅದು ವೇದಿಕೆಯಾಗಿಯೇ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕುಲಾಂತರಿ ಬೆಳೆಗಳನ್ನು ಕುರಿತು ವಿಜ್ಞಾನಿಗಳಲ್ಲೇ ಒಮ್ಮತವಿಲ್ಲ. ಇಂಥ ಚರ್ಚೆಗಳು ಗೋಷ್ಠಿಗಳಲ್ಲಿ ತಪ್ಪಿಯೂ ನುಸುಳುವುದಿಲ್ಲ.

– ಟಿ.ಆರ್. ಅನಂತರಾಮು (ಪ್ರಜಾವಾಣಿ – ಡಿಸೆಂಬರ್ 15)

ಚರಿತ್ರೆ ತಿದ್ದಿದ್ದಾಯಿತು, ಈಗ ಜಿಡಿಪಿ ಅಂಕಿಅಂಖ್ಯೆಗಳ..... ಪುಟ 6 ರಿಂದ

ಐದನೆಯದಾಗಿ ಎನ್‌ಡಿಎ (ಶೇ.7.35) ಮತ್ತು ಯುಪಿಎ(ಶೇ.6.70) ಅವಧಿಗಳ ಜಿಡಿಪಿ ದರಗಳ ನಡುವಿನ ವ್ಯತ್ಯಾಸ ಕೇವಲ ಶೇ.0.65 ಅಂಶಗಳು. ಹಿಂದಿನ ಎನ್‌ಡಿಎ ಸರ್ಕಾರವು 2007–08ರಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಎದುರಿಸಿತ್ತು ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ಗಗನ ಸದೃಶವಾಗಿತ್ತು. ಆದರೆ ಪ್ರಸ್ತುತ ಎನ್‌ಡಿಎ ಅವಧಿಯಲ್ಲಿ ಆಂತರಿಕವಾಗಿ ಮತ್ತು ಅಂತಾರಾಷ್ಟ್ರೀಯವಾಗಿ ಅನೇಕ ಅನುಕೂಲಗಳು ಒದಗಿ ಬಂದಿದ್ದವು. ಪೆಟ್ರೋಲ್ ಬೆಲೆಯು ಹಿಂದಿನ ದರಕ್ಕಿಂತ ಅರ್ಧದಷ್ಟು ಕಡಿಮೆಯಾಗಿತ್ತು. ಈ ಹಿನ್ನೆಲೆಯಲ್ಲಿ ಅದರ ಸಾಧನೆಯು ಏನೆಲ್ಲ ಅಂಕಿಸಂಖ್ಯೆಗಳ ತಿರುಚುವಿಕೆಯು ಮಧ್ಯದಲ್ಲಿಯೂ ಉನ್ನತವಾಗೇನು ಕಾಣುವುದಿಲ್ಲ.

ಆರನೆಯದಾಗಿ ಈ ಸರ್ಕಾರದ ಆರ್ಥಿಕ ಸಲಹೆಗಾರರಾಗಿದ್ದ ವೃತ್ತಿಪರ ಅರ್ಥಶಾಸ್ತ್ರಜ್ಞರೆಲ್ಲ (ಅರವಿಂದ ಪಣಗಾರಿಯ, ಅರವಿಂದ ಸುಬ್ರಮಣಿಯಮ್, ರಘುರಾಮ್ ರಾಜನ್, ಉರ್ಜಿತ್ ಪಟೇಲ್, ಸುರ್ಜಿತ್ ಭಲ್ಲ ಮುಂತಾದವರು) ಒಬ್ಬೊಬ್ಬರಾಗಿ ರಾಜೀನಾಮೆ ನೀಡುತ್ತ ಹೊರ ನಡೆದಿದ್ದಾರೆ. ರೂಪಾಯಿಯ ಅಮಾನ್ಯೀಕರಣವನ್ನು ಅರವಿಂದ ಸುಬ್ರಮಣಿಯಮ್ 'ರಾಕ್ಷಸ ಸದೃಶ' ಕ್ರಮ (ಡ್ರೆಕೋನಿಯನ್) ಎಂದು ಟೀಕಿಸಿದ್ದಾರೆ. ಆರ್‌ಬಿಐನ ಬಂಡವಾಳ ನಿಧಿಯನ್ನು ಸರ್ಕಾರ ಬಳಸಿಕೊಳ್ಳುವುದು ಆರ್ಥಿಕವಾಗಿ ನೈತಿಕ ಕ್ರಮವಲ್ಲ ಎಂದು ರಘುರಾಮ್ ರಾಜನ್ ಟೀಕಿಸಿದ್ದಾರೆ. ಅಂಕಿಸಂಖ್ಯೆಗಳನ್ನು ತಿರುಚುವ ಮತ್ತು ಸರ್ಕಾರದ ಮೂಗಿನ ನೇರಕ್ಕೆ ವರದಿ ನೀಡಬೇಕಾದ ಒತ್ತಾಯಕ್ಕೆ ಬೇಸರಿಸಿ ಸರ್ಕಾರದಿಂದ ಇವರೆಲ್ಲ ಹೊರನಡೆದಿದ್ದಾರೆ. 'ನಮಗೆ ಬೇಕಾಗಿರುವುದು ಹಾರ್ಡ್‌ವರ್ಕಿಂಗ್ ತಜ್ಞರೇ ವಿನಾ ಹಾರ್ ವರ್ಡ್ ತಜ್ಞರಲ್ಲ' ಎಂಬ ಪ್ರಧಾನಮಂತ್ರಿಗಳ ಟೀಕೆಯು–ಅಣಕ ತಜ್ಞರುಗಳ ರಾಜೀನಾಮೆಗೆ ಒಂದು ಕಾರಣವಾಗಿರಲು ಸಾಕು. ಸರ್ಕಾರದ ಹುದ್ದೆಯಿಂದ ಹೊರ ಬಂದಿರುವ ಅರ್ಥಶಾಸ್ತ್ರಜ್ಞ ಸುರ್ಜಿತ್ ಭಲ್ಲ ಜಿಡಿಪಿ ತಿರುಚಿವಿಕೆಯಲ್ಲಿನ ನೀತಿ ಆಯೋಗದ ಪಾತ್ರವನ್ನು ಟೀಕಿಸಿದ್ದಾರೆ.

ಕೊನೆಯದಾಗಿ ಅಮರ್ತ್ಯಸೇನ್ ಹೇಳುವಂತೆ ಅಭಿವೃದ್ಧಿಯಲ್ಲಿ ಜಿಡಿಪಿಯೇ ಎಲ್ಲವೂ ಅಲ್ಲ. ಅದೊಂದು ವರಮಾನ ಪ್ರಣೀತ ಸೂಚಿ ಮತ್ತು ಅದು ಕೇವಲ ಅಭಿವೃದ್ಧಿಯ ಸಾಧನವೇ ವಿನಾ ಅದೇ ಸಾಧ್ಯವಲ್ಲ. ಸಾಕ್ಷರತೆ(ಮಹಿಳಾ), ಆರೋಗ್ಯ(ಸಂತಾನೋತ್ಪತ್ತಿ), ಸಮಾನತೆ, ಬಡತನ ಮತ್ತು ಹಸಿವಿನ ಸ್ವರೂಪ, ಪೌಷ್ಟಿಕತೆ, ಪ್ರತ್ಯೇಕತೆಗೆ ಒಳಗಾಗಿರುವ ವರ್ಗಗಳ ಸ್ಥಿತಿಗತಿ(ಪ.ಜಾ. ಮತ್ತು ಪ.ಪಂ), ಸಾಮಾಜಿಕ ನ್ಯಾಯ ಮುಂತಾದವು ಜನರ ಬದುಕನ್ನು ನಿರ್ಧರಿಸುವ ಸಂಗತಿಗಳಾಗಿವೆ. ಈ ವಿಷಯಗಳಲ್ಲಿ ಪ್ರಸ್ತುತ ಸರ್ಕಾರದ ಸಾಧನೆ ನಕಾರಾತ್ಮಕವಾಗಿದೆ. ಅಕರಾಳ–ವಿಕರಾಳ ರೀತಿಯಲ್ಲಿ ಹಬ್ಬಿರುವ ಅಸಹಿಷ್ಣುತೆಯು ಅಭಿವೃದ್ಧಿ ಪ್ರಕ್ರಿಯೆಯನ್ನು ಮೂರಾಬಟ್ಟೆ ಮಾಡಿದೆ. ಈ ಎಲ್ಲ ಸಂಗತಿಗಳ ನಿಜನೆಲೆಯಲ್ಲಿ ಸಾಂವಿಧಾನಾತ್ಮಕ ಸಂಸ್ಥೆಗಳ ಸ್ವಾಯತ್ತತೆಯ ನಾಶ ಮತ್ತು ಜಿಡಿಪಿ ಅಂಕಿಸಂಖ್ಯೆಗಳ ವಿಕೃತಿ ಸರ್ಕಾರದ ವ್ಯಕ್ತಿತ್ವವನ್ನು ಹಳ್ಳಹಿಡಿಸಿವೆಯೇ ವಿನಾ ಅದಕ್ಕೆ ಅವು ಘನತೆಯನ್ನು ತಂದುಕೊಡುವುದಿಲ್ಲ. ●

ಎರಡು ಗಂಭೀರ ಕೈಗಾರಿಕಾ ಅಫಘಾತಗಳು



ಈ ವಾರ ಎರಡು ಗಂಭೀರ ಕೈಗಾರಿಕಾ ಅಫಘಾತಗಳಾಗಿದ್ದು, ಕಾರ್ಮಿಕರ ಕೆಲಸ ಮಾಡುವ ಸ್ಥಳದ ಮತ್ತು ಒಟ್ಟು ಉದ್ಯಮದ ಸುರಕ್ಷಿತತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನೆಬ್ಬಿಸಿವೆ. ಒಂದು ಬಾಗಲಕೋಟೆಯ ಮುಧೋಳದನಿರಾಣಿ ಶುಗರ್ಸ್ ಕಾರ್ಖಾನೆಯಲ್ಲಿ ನಡೆದ ಸ್ಫೋಟ ಮತ್ತು ಇನ್ನೊಂದು ಬೆಂಗಳೂರಿನ ಗೋದಾಮಿನಲ್ಲಿ ರ್ಯಾಕುಗಳು ಮುರಿದು ಬಿದ್ದ ಅಫಘಾತ. ಎರಡರಲ್ಲೂ ಕಾರ್ಮಿಕರು ದಾರುಣ ರೀತಿಯಲ್ಲಿ ಸತ್ತಿದ್ದಲ್ಲದೆ ಕಾರ್ಖಾನೆಗೂ ಗಂಭೀರ ಭೌತಿಕ ಹಾನಿಯುಂಟಾಗಿದೆ. ಸುರಕ್ಷಿತತೆ ಬಗ್ಗೆ ಗಂಭೀರ ಲೋಪಗಳೂ ಎರಡೂ ಪ್ರಕರಣದಲ್ಲಿ ಕಂಡು ಬಂದಿವೆ.



ಕಾರ್ಮಿಕ ಮತ್ತು ಕಾರ್ಖಾನೆಗಳ ಸುರಕ್ಷಿತತೆ ಬಗ್ಗೆ ಇರುವ ಕಾನೂನುಗಳ ನಿಯಮಗಳ ಉಲ್ಲಂಘನೆ, ಸರಕಾರದ ಮೇಲುಸ್ತುವಾರಿ ಅಭಾವ ಹೊಡೆದು ಕಾಣುತ್ತಿದೆ.

ಮುಧೋಳದ ಡಿಸ್ಟಿಲರಿ ಘಟಕದಲ್ಲಿ ಸ್ಫೋಟ

ಮುಧೋಳದ ನಿರಾಣಿ ಶುಗರ್ಸ್ನ ಡಿಸ್ಟಿಲರಿ ಘಟಕದ ಎಫ್ಲ್ಯುಯೆಂಟ್ ಟ್ರೀಟ್ಮೆಂಟ್ ಪ್ಲಾಂಟ್ನ (ಇಟಿಪಿ) ಬಾಯ್ಲರ್ ಸ್ಫೋಟಗೊಂಡು ನಾಲ್ವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಫೋಟದ ರಭಸಕ್ಕೆ ಇಡೀ ಘಟಕ ನೆಲಕಚ್ಚಿದ್ದು, ಅವಶೇಷಗಳಡಿ ಇನ್ನಷ್ಟು ಮಂದಿ ಸಿಲುಕಿರುವ ಸಾಧ್ಯತೆ ಇದೆ. ಜಿಲ್ಲಾಡಳಿತದ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆದಿದೆ. ಮಧ್ಯಾಹ್ನ 12.15ಕ್ಕೆ ದಿನದ ಎರಡನೇ ಪಾಳಿ ಆರಂಭವಾದ ಕೆಲ ಹೊತ್ತಿನಲ್ಲಿಯೇ ಭಾರೀ ಸದ್ದಿನೊಂದಿಗೆ ಸ್ಫೋಟ ಸಂಭವಿಸಿದೆ. ಮುಧೋಳ ನಗರ ಸೇರಿದಂತೆ ಸುತ್ತಲಿನ ಐದು ಕಿ.ಮೀ ವ್ಯಾಪ್ತಿಯ ಮಾಲಾಪುರ, ಕುಳಲಿ, ಮುಗಳಖೋಡದಲ್ಲಿ ಮನೆಗಳು ಕಂಪಿಸಿವೆ.

ಸಮೀಪದ ಶಾಲಾ ಕಟ್ಟಡದ ಕಿಟಕಿಯ ಗಾಜುಗಳು ಒಡೆದಿವೆ. ಕಟ್ಟಡ ಸಿಡಿದ ಪರಿಣಾಮ ದೊಡ್ಡ ಕಲ್ಲೊಂದು ಹೈಮಾಸ್ಟ್ ದೀಪದ ತುದಿಯಲ್ಲಿ ಸಿಲುಕಿತ್ತು. ಕಟ್ಟಡದ ಪಿಲ್ಲರ್ ಮಾತ್ರ ಇದ್ದು, ಉಳಿದ ಭಾಗ ನೆಲಸಮವಾಗಿದ್ದು ಸ್ಫೋಟದ ತೀವ್ರತೆ ಸಾರುತ್ತಿತ್ತು. ಅವಘಡದ ನಂತರ ಇಡೀ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಡಿಸ್ಟಿಲರಿ ಘಟಕದ ಎಫ್ಲ್ಯುಯೆಂಟ್ ಟ್ರೀಟ್ಮೆಂಟ್ ಪ್ಲಾಂಟ್ನಲ್ಲಿ ಮಿಥೇನ್ ಅನಿಲದೊಂದಿಗೆ ಆಮ್ಲಜನಕ ಸಂಪರ್ಕಕ್ಕೆ ಬಂದ ಕಾರಣ ಸ್ಫೋಟ ಸಂಭವಿಸಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ತನಿಖೆ ಪೂರ್ಣಗೊಂಡ ನಂತರ ವಾಸ್ತವಾಂಶ ತಿಳಿಯಲಿದೆ' ಎಂದು ಕಾರ್ಖಾನೆ ಹಾಗೂ ಬಾಯ್ಲರ್ಗಳ ಇಲಾಖೆ ನಿರ್ದೇಶಕ ಜಿ.ಬಿ.ರಾಜಗೋಪಾಲ್ ತಿಳಿಸಿದರು. 'ಇಟಿಪಿಯಲ್ಲಿ ಹೊಸ ಬಾಯ್ಲರ್ ಅಳವಡಿಸಿ ಅದನ್ನು ಪ್ರಾಯೋಗಿಕವಾಗಿ ಚಾಲನೆ ಮಾಡಿದಾಗ ಘಟನೆ ಸಂಭವಿಸಿದೆ ಎಂದು ಕಾರ್ಖಾನೆಯವರು ಹೇಳಿದ್ದಾರೆ. ಹೊಸ ಬಾಯ್ಲರ್ ಅಳವಡಿಕೆಗೆ ಅನುಮತಿ ಪಡೆಯಲಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ.

ಸ್ಫೋಟದಿಂದ ಕುಸಿದುಬಿದ್ದಿದ್ದ ಘಟಕದ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯ ಮುಕ್ತಾಯಗೊಂಡಿದ್ದು, ಆದರೊಳಗೆ ಯಾರೊಬ್ಬರೂ ಪತ್ತೆಯಾಗಿಲ್ಲ. ಆದರೆ ಘಟಕದ ಆವರಣದೊಳಗಿನ ತ್ಯಾಜ್ಯದ ಹೊಂಡದಲ್ಲಿ ಚಪ್ಪಲಿಗಳು ತೇಲುತ್ತಿರುವುದು ಕಂಡು ಅಗ್ನಿಶಾಮಕ ದಳದ ಸಿಬ್ಬಂದಿ ಅದರೊಳಗಿನ ನೀರು ಖಾಲಿ ಮಾಡಿ ತಪಾಸಣೆ ಮಾಡಿದರು. ಅಲ್ಲಿಯೂ ಯಾರೂ ಪತ್ತೆಯಾಗಲಿಲ್ಲ. ಬಾಗಲಕೋಟೆಯ ಎರಡು ಆಸ್ಪತ್ರೆಗಳಲ್ಲಿ ಗಾಯಾಳುಗಳು ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನ ಗೋದಾಮಿನಲ್ಲಿ ರ್ಯಾಕ್ ಕುಸಿತದಲ್ಲಿ ಸಾವು

ಬೆಂಗಳೂರಿನ ಕಾಡುಗೋಡಿ ಸಮೀಪದ ಸೀಗೆಹಳ್ಳಿಯ ಆಶ್ರಮ ರಸ್ತೆಯಲ್ಲಿರುವ 'ಹೋಲಿಸೋಲ್' ಕಂಪನಿ ಗೋದಾಮಿನಲ್ಲಿದ್ದ ರ್ಯಾಕ್ಗಳು ಕಳಚಿ ಬಿದ್ದಿದ್ದರಿಂದ ಅಡಿಗೆ ಸಿಲುಕಿ ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ. ಐವರು ತೀವ್ರವಾಗಿ ಗಾಯಗೊಂಡಿದ್ದಾರೆ. ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ 20 ಮಂದಿ, ಟೀ ಕುಡಿಯುವುದಕ್ಕಾಗಿ ಹೊರಗೆ ಬಂದಿದ್ದರಿಂದ ಬಚಾವಾಗಿದ್ದಾರೆ. ರ್ಯಾಕ್ಗಳು ಕಳಚಿ ಬೀಳುವುದಕ್ಕೂ 15 ನಿಮಿಷ ಮುನ್ನ 28 ಕಾರ್ಮಿಕರು, ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದರು. ಅವರೆಲ್ಲ ಮಧ್ಯಾಹ್ನ 12.15ರ ಸುಮಾರಿಗೆ ಟೀ ಕುಡಿಯಲೆಂದು ಹೊರಗೆ ಬಂದಿದ್ದರು. ಆದರೆ, ಅವಘಡದಲ್ಲಿ ಮೃತಪಟ್ಟ ಮೂವರು ಹಾಗೂ ಗಾಯಗೊಂಡ ಐವರು ಮಾತ್ರ ಟೀ ಕುಡಿದು ವಾಪಸ್ ಗೋದಾಮಿಗೆ ಹೋಗಿದ್ದರು. ಯಾವುದೇ ಇತರ ಸಮಯದಲ್ಲಿ ಈ ಅವಘಡ ನಡೆದಿದ್ದರೆ ಇನ್ನಷ್ಟು ತೀವ್ರ ಸಾವು–ನೋವು ಸಂಭವಿಸುತ್ತಿತ್ತು.

ಕಾರ್ಖಾನೆಗಳಲ್ಲಿ ಸಿದ್ಧವಾಗುವ ಜನಬಳಕೆ ವಸ್ತುಗಳನ್ನು ಮಾಲ್ಗಳು ಹಾಗೂ ಡಿಸ್ಟ್ರಿಬ್ಯೂಟರ್ಗಳಿಗೆ ತಲುಪಿಸುವ ಕೆಲಸವನ್ನು 'ಹೋಲಿಸೋಲ್' ಲಾಜಿಸ್ಟಿಕ್ ಮಾಡುತ್ತಿದೆ. ಕಾರ್ಖಾನೆಯಿಂದ ತಂದ ವಸ್ತುಗಳನ್ನು ಮೊದಲಿಗೆ ಗೋದಾಮಿನಲ್ಲಿಟ್ಟುಕೊಂಡು, ನಂತರ ಪ್ರತ್ಯೇಕ ವಾಹನಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು. ವಸ್ತುಗಳ ಸಂಗ್ರಹಕ್ಕಾಗಿ ಬೃಹತ್ ಗಾತ್ರದ ಲೋಹದ ರ್ಯಾಕ್ಗಳನ್ನು ಗೋದಾಮಿನಲ್ಲಿ ಅಳವಡಿಸಲಾಗಿತ್ತು. ಅಂಥ 30ಕ್ಕೂ ಹೆಚ್ಚು ರ್ಯಾಕ್ಗಳು ಕಳಚಿ ಬಿದ್ದಿದ್ದರಿಂದಾಗಿ ಈ ಅವಘಡ ಸಂಭವಿಸಿದೆ.

ಕಾರ್ಖಾನೆಯ ವಸ್ತುಗಳನ್ನು ನೇರವಾಗಿ ಗೋದಾಮಿಗೆ ತಂದು ಸಂಗ್ರಹಿಸಿಡಲಾಗುತ್ತದೆ. ಇಲ್ಲಿಂದಲೇ ನಗರದ ಡೀಲರ್, ಡಿಸ್ಟ್ರಿಬ್ಯೂಟರ್, ಆನ್ಲೈನ್ ಸ್ಟೋರ್, ಮಲ್ಟಿ ಬ್ರ್ಯಾಂಡ್ ಮಳಿಗೆಗಳಿಗೆ ಆ ವಸ್ತುಗಳನ್ನು ಪೂರೈಕೆ ಮಾಡಲಾಗುತ್ತದೆ. ರ್ಯಾಕ್ಗಳ ಮೇಲೆ ಭಾರವಾದ ವಸ್ತುಗಳೇ ಹೆಚ್ಚಿದ್ದವು. ವಸ್ತುಗಳ ಜೋಡಿಸುವಿಕೆಯಲ್ಲಿ ವ್ಯತ್ಯಾಸ ಉಂಟಾಗಿ ಈ ಅವಘಡ ಸಂಭವಿಸಿರಬಹುದು ಎನ್ನಲಾಗಿದೆ.

'30 ಅಡಿ ಎತ್ತರದ ರ್ಯಾಕ್ಗಳು ಗೋದಾಮಿನಲ್ಲಿದ್ದವು. ಅವುಗಳ ಕೆಳಭಾಗದಲ್ಲಿ ದೊಡ್ಡ ನಟ್ಬೋಲ್ಟ್ ಬದಲು, ಸಣ್ಣ ನಟ್ಬೋಲ್ಟ್ಗಳನ್ನು ಅಳವಡಿಸಲಾಗಿತ್ತು. ಮೇಲ್ಭಾಗದಲ್ಲಿ ಬಾಕ್ಸ್ಗಳನ್ನು ಇಟ್ಟಾಗಲೆಲ್ಲ, ರ್ಯಾಕ್ಗಳ ಕೆಳಭಾಗ ವಾಲುತ್ತಿತ್ತು. ರ್ಯಾಕ್ಗಳ ಮೇಲಿಟ್ಟಿದ್ದ ವಸ್ತುಗಳು ಭಾರವಾಗಿ ಸಣ್ಣ ನಟ್ಬೋಲ್ಟ್ ಕಳಚಿದ್ದರಿಂದ ದುರಂತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ.. ..ಗೋದಾಮಿನ ಶೇ 30ರಷ್ಟು ಭಾಗದಲ್ಲಿ ರ್ಯಾಕ್ಗಳನ್ನು ನಿಲ್ಲಿಸಿ, ಉಳಿದ ಜಾಗದಲ್ಲಿ ವಸ್ತುಗಳ ಬಾಕ್ಸ್ಗಳನ್ನು ಇಡಲಾಗಿತ್ತು. ಬಾಕ್ಸ್ಗಳ ನಡುವೆ ಇಬ್ಬರು ಕಾರ್ಮಿಕರು ಓಡಾಡಲಷ್ಟೇ ಜಾಗ ಇರುತ್ತಿತ್ತು. ಹೊಸದಾಗಿ ಬಾಕ್ಸ್ಗಳು ಬಂದಾಗಲೆಲ್ಲ, ರ್ಯಾಕ್ಗಳ ಮೇಲಿಡಲಾಗುತ್ತಿತ್ತು. ಸಾಮರ್ಥ್ಯಕ್ಕಿಂತ ಹೆಚ್ಚು ಬಾಕ್ಸ್ಗಳನ್ನು ರ್ಯಾಕ್ ಮೇಲೆ ಇಟ್ಟಿದ್ದು ಸಹ ಅವಘಡಕ್ಕೆ ಕಾರಣ' ಎಂದು ಸ್ಥಳ ಪರಿಶೀಲನೆ ನಡೆಸಿದ ಅಗ್ನಿಶಾಮಕ ಅಧಿಕಾರಿಗಳು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

'ದುರಂತ ಸಂಬಂಧ ಈಗಾಗಲೇ ಕಾಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಗೋದಾಮಿನ ಮೇಲ್ವಿಚಾರಕ ಅಜಯ್ ಹಾಗೂ ಜಾಗದ ಮಾಲೀಕ ಅಮಾನುಲ್ಲಾ ಎಂಬುವರನ್ನು ಬಂಧಿಸಲಾಗಿದೆ' 'ಹೋಲಿಸೋಲ್' ಲಾಜಿಸ್ಟಿಕ್ಸ್ ಮುಖ್ಯ ಕಚೇರಿ ದೆಹಲಿಯಲ್ಲಿದೆ. ಅದರ ಮೂವರು ನಿರ್ದೇಶಕರನ್ನೂ ಆರೋಪಿಗಳನ್ನಾಗಿ ಮಾಡಲಾಗಿದ್ದು, ಅವರನ್ನು ವಶಕ್ಕೆ ಪಡೆಯಲು ಪೊಲೀಸರು ತಂಡವೊಂದನ್ನು ದೆಹಲಿಗೆ ಕಳುಹಿಸಲಾಗಿದೆ' ಎಂದು ಪೋಲಿಸ್ ಅಧಿಕಾರಿಗಳು ಹೇಳಿದ್ದಾರೆ.

ಬೆಳತೂರಿನ ಆಕ್ಸಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರ್ಮಿಕರ ಯೋಗಕ್ಷೇಮ ವಿಚಾರಿಸಲು ಯಾವೊಬ್ಬ ಅಧಿಕಾರಿಯೂ ಸುಳಿದಿಲ್ಲ. ಗಾಯಗೊಂಡವರು ಸ್ವಂತ ಖರ್ಚಿನಲ್ಲಿ ಚಿಕಿತ್ಸೆ ಪಡೆಯುವಂತಾಗಿದೆ. ಮೃತರ ಕುಟುಂಬಗಳಿಗೆ ಪರಿಹಾರ ನೀಡುವ ಸಂಬಂಧ ಲಾಜಿಸ್ಟಿಕ್ ಹಾಗೂ ಸಂಬಂಧಿಕರ ನಡುವೆ ಸಂಧಾನ ನಡೆಯುತ್ತಿದೆ. 'ಲಾಜಿಸ್ಟಿಕ್ಸ್‌ನವರ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದ್ದು, ಅವರೇ ಪರಿಹಾರ ಕೊಡಬೇಕಾಗುತ್ತದೆ. ಮೃತರ ಸಂಬಂಧಿಕರು, ನ್ಯಾಯಾಲಯರ ಹೊರಗೆಯೇ ಸಂಧಾನ ಮಾಡಿಕೊಳ್ಳುತ್ತಿದ್ದಾರೆಂಬ ಮಾಹಿತಿಯೂ ಇದೆ' ಎಂದು ಪೊಲೀಸರು ಹೇಳಿದ್ದಾರೆ. ಇವೆಲ್ಲಾ ತೀರಾ ಆತಂಕಕಾರಿ ಸಂಗತಿಗಳು.

ಕನ್ನಡ : ಮಾಧ್ಯಮ, ಶಾಲೆ ಮುಚ್ಚುವಿಕೆ ಮತ್ತು ನಾಗರಿಕ ಸೇವಾ ಪರೀಕ್ಷೆಗಳು

ಕನ್ನಡ ಈ ವಾರ ಬಹಳ ಸುದ್ದಿಯಲ್ಲಿತ್ತು, ಅದೂ ಮೂರು ಕಾರಣಗಳಿಗಾಗಿ. ನವೆಂಬರ್ ಅಲ್ಲದಿದ್ದರೂ ಕನ್ನಡ ಸುದ್ದಿಯಲ್ಲಿತ್ತು ಎನ್ನುವುದೇ ವಿಶೇಷ! ಕನ್ನಡ ಮಾಧ್ಯಮ, ಶಾಲೆ ಮುಚ್ಚುವಿಕೆ ಮತ್ತು ನಾಗರಿಕ ಸೇವಾ ಪರೀಕ್ಷೆಗಳ ಕುರಿತು ಇದ್ದ ಸುದ್ದಿಗಳು, ವಾಸ್ತವ ಮತ್ತು ಘೋಷಣೆಗಳ ನಡುವಿನ ಅಂತರವನ್ನು ಸಾರುವಂತಿತ್ತು. ಒಂದಕ್ಕೊಂದು ಸಂಬಂಧ ಇರುವ ಈ ಮೂರು ಪ್ರಕರಣಗಳು ಕಾರ್ಯ–ಕಾರಣ ಸಂಬಂಧ ಹೊಂದಿರುವಂಥವು ಕೂಡಾ.

ಸರಕಾರಿ ಕನ್ನಡ ಶಾಲೆ ಮುಚ್ಚುವಿಕೆ

ರಾಜ್ಯ ಶಿಕ್ಷಣ ಇಲಾಖೆಯು ನಡೆಸಿದ ಉಪಗ್ರಹ ಆಧಾರಿತ ಮ್ಯಾಪಿಂಗ್‌ನಿಂದ 5,272 ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದಿರುವುದು ಬೆಳಕಿಗೆ ಬಂದಿದೆ. ಈ ಎಲ್ಲ ಗ್ರಾಮಗಳ ಒಂದು ಕಿ.ಮೀ. ವ್ಯಾಪ್ತಿಯಲ್ಲಿಯೂ ಪ್ರಾಥಮಿಕ ಶಾಲೆಗಳು ಇಲ್ಲದಿರುವ ಕಾರಣ ಅಲ್ಲಿನ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಾಗಿದೆ, ಎಂಬುದು ಮೊದಲ ಸುದ್ದಿ.

ರಾಜ್ಯ ಶಿಕ್ಷಣ ಇಲಾಖೆಯು ನಡೆಸಿದ ಉಪಗ್ರಹ ಆಧಾರಿತ ಮ್ಯಾಪಿಂಗ್‌ನಿಂದ 5,272 ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದಿರುವುದು ಬೆಳಕಿಗೆ ಬಂದಿದೆ. ಈ ಎಲ್ಲ ಗ್ರಾಮಗಳ ಒಂದು ಕಿ.ಮೀ. ವ್ಯಾಪ್ತಿಯಲ್ಲಿಯೂ ಪ್ರಾಥಮಿಕ ಶಾಲೆಗಳು ಇಲ್ಲದಿರುವ ಕಾರಣ ಅಲ್ಲಿನ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತಾಗಿದೆ.

ಗ್ರಾಮಾಂತರ ಭಾಗದ ಜನ, ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಿಂತ ಕೃಷಿ ಚಟುವಟಿಕೆಯಲ್ಲಿ ತೊಡಗಿಸುವತ್ತಲೇ ಹೆಚ್ಚಿನ ಆದ್ಯತೆ ನೀಡುತ್ತಾರೆ. ಇಂತಹ ಸನ್ನಿವೇಶದಲ್ಲಿ ಇಷ್ಟೊಂದು ಗ್ರಾಮಗಳಲ್ಲಿ ಶಾಲೆಗಳೇ ಇಲ್ಲದಿರುವುದು ಅಲ್ಲಿನ ಮಕ್ಕಳ ಶಿಕ್ಷಣದ ಹಕ್ಕನ್ನೇ ಕಸಿದುಕೊಂಡಂತಾಗಿದೆ.

ಗೋವಿಂದ ಸಮಿತಿಯ ವರದಿ ಅನ್ವಯ 2011ರಲ್ಲಿ 3,000ಕ್ಕೂ ಹೆಚ್ಚು ಶಾಲೆಗಳನ್ನು ಹತ್ತಿರದ ಶಾಲೆಗಳಲ್ಲಿ ವಿಲೀನ ಮಾಡಲಾಯಿತು. ಹಾಗಾಗಿಯೇ ಇಂತಹ ಪರಿಸ್ಥಿತಿ ತಲೆದೋರಿದೆ. ಆ ಅವೈಜ್ಞಾನಿಕ ವಿಲೀನದಿಂದ ಗ್ರಾಮಾಂತರ ಪ್ರದೇಶದ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಆಗ ಸರ್ಕಾರ ಮುಂದಾಲೋಚನೆ ಇಲ್ಲದೆ ಶಾಲೆಗಳನ್ನು ವಿಲೀನ ಮಾಡಿತು. ಇದರಿಂದ ಖಾಸಗಿ ಶಾಲೆಗಳಿಗೆ ತುಂಬಾ ಅನುಕೂಲವಾಯಿತು, ಎಂದೆಲ್ಲಾ ಶಿಕ್ಷಣ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ನಾಗರಿಕ ಸೇವೆಗಳ ಪರೀಕ್ಷೆಗಳಲ್ಲಿ ಕನ್ನಡದ 'ಶೂನ್ಯ ಸಂಪಾದನೆ'

ಕೇಂದ್ರ ನಾಗರಿಕ ಸೇವೆಗಳ ಪರೀಕ್ಷೆಗಳಲ್ಲಿ 2011ರಿಂದ ಈಚೆಗೆ ಕನ್ನಡ ಮಾಧ್ಯಮದಲ್ಲಿ ಉತ್ತರ ಬರೆದಿರುವ ಒಬ್ಬ ಅಭ್ಯರ್ಥಿಯೂ ಉತ್ತೀರ್ಣರಾಗಿಲ್ಲ. ಇಂಗ್ಲಿಷ್ ಮಾಧ್ಯಮದಲ್ಲಿ ಬರೆದಿರುವವರೇ ಆಯ್ಕೆ ಆಗುತ್ತಿದ್ದಾರೆ, ಎಂಬುದು ಎರಡನೆಯ ಸುದ್ದಿ. ಈ ಕುರಿತು ಅಧ್ಯಯನ ನಡೆಸಿರುವ ಮನುಕುಮಾರ್ ರಾಜೇ ಅರಸ್. ಇವರು ನಾಗರಿಕ ಸೇವೆಗಳ ಪರೀಕ್ಷೆಗಳನ್ನು ಇಂಗ್ಲಿಷ್ ಬದಲಿಗೆ ಆಯಾ ರಾಜ್ಯಗಳ ಭಾಷೆಗಳಲ್ಲೇ ನಡೆಸಬೇಕು ಎಂದು ಹೋರಾಟ ನಡೆಸುತ್ತಿದ್ದಾರೆ.

ಅಧ್ಯಯನದ ಪ್ರಕಾರ, 1990ರಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಪರೀಕ್ಷೆ ಬರೆದವರು ಶೇ 45, ಹಿಂದಿಯಲ್ಲಿ ಬರೆದವರು ಶೇ 25 ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಬರೆದವರು ಶೇ 30ರಷ್ಟು ಉತ್ತೀರ್ಣರಾಗಿ ಆಯ್ಕೆ ಆಗುತ್ತಿದ್ದರು. ಈ ಪ್ರಮಾಣ 2015 ಈ ರೀತಿ ಇತ್ತು; ಇಂಗ್ಲಿಷ್ ಮಾಧ್ಯಮ ಶೇ 94, ಹಿಂದಿ ಮಾಧ್ಯಮ ಶೇ 0.4 ಮತ್ತು ಕನ್ನಡ ಅಥವಾ ಇತರ ಭಾರತೀಯ ಭಾಷೆಗಳ ಪ್ರಮಾಣ ಶೂನ್ಯ.

ಭಾಷೆ ಮಾತ್ರವಲ್ಲದೆ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ, ಗ್ರಾಮೀಣರು, ಹಿಂದುಳಿದವರು ಮತ್ತು ಶೋಷಿತರು ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಆಯ್ಕೆ ಆಗಲು ಸಾಧ್ಯವಾಗುತ್ತಿಲ್ಲ. ಹಣವಂತರು ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದವರು ಮಾತ್ರ ಆಯ್ಕೆಯಾಗುತ್ತಿದ್ದಾರೆ ಎಂದರು.

ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಆಯ್ಕೆಯಾಗುತ್ತಿರುವವರಲ್ಲೂ ತಾರತಮ್ಯವಿದೆ. ಶೇ 70ರಷ್ಟು ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಆದರೆ, ಅಲ್ಲಿಂದ ಐಎಎಸ್, ಐಪಿಎಸ್ ಮತ್ತಿತರ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರ ಸಂಖ್ಯೆ ಶೇ 30.

ನಾಗರಿಕ ಸೇವೆಗಳಿಗೆ ಆಯ್ಕೆ ಆಗುವ ಒಟ್ಟು ಅಭ್ಯರ್ಥಿಗಳಲ್ಲಿ ಶೇ 60ರಷ್ಟು ಜನ ಸರ್ಕಾರಿ ಅಧಿಕಾರಿಗಳ ಮಕ್ಕಳೇ ಆಗಿದ್ದಾರೆ. ಶೇ30 ವ್ಯಾಪಾರೋದ್ಯಮಿಗಳ ಮಕ್ಕಳು ಶೇ 10, ಉಳಿದ ವೃತ್ತಿಯಲ್ಲಿರುವವರ ಮಕ್ಕಳು ಶೇ 10. ಕೃಷಿಕರು ಮತ್ತು ಕಾರ್ಮಿಕರ ಮಕ್ಕಳು ಪ್ರಮಾಣ ನಗಣ್ಯ. ನಾಗರಿಕ ಸೇವೆಗಳ ಪರೀಕ್ಷೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿ ಸಾಕಷ್ಟು ಲೋಪಗಳಿವೆ. ಇಂಗ್ಲಿಷ್ ಮಾಧ್ಯಮದಲ್ಲಿ ಬರೆಯುವ ನಗರ ಪ್ರದೇಶಗಳ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ಪ್ರಶ್ನೆ ಪತ್ರಿಕೆ ರೂಪಿಸಲಾಗುತ್ತದೆ. ಅಭ್ಯರ್ಥಿಗಳಿಗೆ ಅದಕ್ಕೆ ತಕ್ಕಂತೆ ತರಬೇತಿ ನೀಡಲಾಗುತ್ತಿದೆ. ಇದರಿಂದಾಗಿ ನಗರ ಪ್ರದೇಶದ ಅಭ್ಯರ್ಥಿಗಳೊಂದಿಗೆ ಪೈಪೋಟಿ ಸಾಧ್ಯವಾಗುತ್ತಿಲ್ಲ ಎಂದು ಅವರ ಅಧ್ಯಯನ ಹೇಳುತ್ತದೆ.

ಕನ್ನಡ ಮಾಧ್ಯಂಮ

ರಾಜ್ಯದ ಒಂದು ಸಾವಿರ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮ ಶಿಕ್ಷಣವನ್ನು ಜಾರಿಗೊಳಿಸುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ನಾಡಿನ ಹಿರಿಯ ಸಾಹಿತಿಗಳು, ಶಿಕ್ಷಣತಜ್ಞರು ಹಾಗೂ ಕನ್ನಡಪರ ಹೋರಾಟಗಾರರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ತೀರ್ಮಾನದಿಂದ ಹಿಂದೆ ಸರಿಯದಿದ್ದರೆ ಗೋಕಾಕ್ ಚಳವಳಿ ಮಾದರಿ ಹೋರಾಟಕ್ಕೂ ಸಿದ್ಧ ಎಂದೂ ಘೋಷಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ನ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಪಾಲ್ಗೊಂಡ ಚಂದ್ರಶೇಖರ ಕಂಬಾರ, ಎಸ್.ಎಲ್.ಭೈರಪ್ಪ, ಚಂದ್ರಶೇಖರ ಪಾಟೀಲ, ಸಿದ್ದಲಿಂಗಯ್ಯ, ಪ್ರಧಾನ ಗುರುದತ್, ಕಾಳೇಗೌಡ ನಾಗವಾರ ಹಾಗೂ ಕಸಾಪ ಅಧ್ಯಕ್ಷ ಮನು ಬಳಿಗಾರ ಸೇರಿದಂತೆ 32 ಜನ ಪತ್ರಿಕಾಗೋಷ್ಠಿ ನಡೆಸಿ, ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಕುರಿತು ವಿವರಿಸಿದರು.

'ಕನ್ನಡದ ಭವಿಷ್ಯವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸರ್ಕಾರ ಈ ನಿರ್ಧಾರದಿಂದ ತಕ್ಷಣ ಹಿಂದೆ ಸರಿಯಬೇಕು', 'ಇಂಗ್ಲಿಷ್ ಮಾಧ್ಯಮಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ಧಾರಕ್ಕೆ ಕಾನೂನು ಸ್ವರೂಪ ಸಿಕ್ಕರೆ ಕನ್ನಡ ಸಂಕಷ್ಟಕ್ಕೆ ಸಿಲುಕಲಿದೆ' 'ವೈದ್ಯರು, ಮನಃಶಾಸ್ತ್ರಜ್ಞರು, ಶಿಕ್ಷಣ ತಜ್ಞರು ತಿಳಿಸುವ ಪ್ರಕಾರ ಎಳೆಯ ಮಕ್ಕಳು ಪರಭಾಷೆಯಲ್ಲಿ ಕಲಿತರೆ ಪ್ರತಿಭೆ ಅರಳುವುದಿಲ್ಲ. ಹೀಗಾಗಿ ಮಾತೃ ಭಾಷೆಯಲ್ಲೇ ಶಿಕ್ಷಣ ನೀಡಬೇಕು' ಎಂಬಿತ್ಯಾದಿ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದರು.

ಒಂದು ಅಸಂವಿಧಾನಿಕ ಆದೇಶ–ನಾಗರಿಕರ ಖಾಸಗಿತ್ವದ ಹಕ್ಕಿನ ಮೇಲೆ ಭಂಡ ದಾಳಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಗೃಹ ವ್ಯವಹಾರಗಳ ಮಂತ್ರಾಲಯ ಹತ್ತು ಕೇಂದ್ರೀಯ ಸಂಸ್ಥೆಗಳಿಗೆ "ಕಂಪ್ಯೂಟರಿನಲ್ಲಿ ಉಂಟು ಮಾಡಿದ, ಪ್ರಸರಿಸಿದ, ಪಡೆದ ಅಥವ ಇಟ್ಟಿರುವ ಯಾವುದೇ ಮಾಹಿತಿ"ಯನ್ನು ಮಧ್ಯದಲ್ಲಿ ತಡೆಯಲು, ಮಾನಿಟರ್ ಮಾಡಲು ಮತ್ತು ಗೂಢಲಿಪಿಯಿಂದ ಸಾಮಾನ್ಯ ಭಾಷೆಗಿಳಿಸಲು" ಅಧಿಕಾರ ನೀಡುವ ಒಂದು ಆದೇಶವನ್ನು ಹೊರಡಿಸಿದೆ.

ಇದು ನಮ್ಮ ಸಂವಿಧಾನ ಪ್ರತಿಯೊಂದು ನಾಗರಿಕನಿಗೆ ಕೊಟ್ಟಿರುವ ಖಾಸಗಿತ್ವದ ಮೂಲಭೂತ ಹಕ್ಕಿನ ಮೇಲೆ ಒಂದು ಭಂಡ ದಾಳಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇದು ದೂರವಾಣಿ ಕದ್ದಾಲಿಕೆ ಮಾರ್ಗನಿರ್ದೇಶಕ ಸೂತ್ರಗಳ ಮೇಲಿನ ಸುಪ್ರಿಂ ಕೋರ್ಟ್ ತೀರ್ಪುಗಳು, ಖಾಸಗಿತ್ವದ ಹಕ್ಕಿನ ತೀರ್ಪು ಮತ್ತು ಆಧಾರ್ ತೀರ್ಪಿನ ಭಾವಕ್ಕೆ ವಿರುದ್ಧವಾದ ಒಂದು ಆದೇಶ.

ಆರೆಸ್ಸೆಸ್/ಬಿಜೆಪಿ ಕಣ್ಣೋಟವನ್ನು ಒಪ್ಪದ ನಾಗರಿಕರಿಗೆ ಕಿರುಕುಳ ಕೊಡುವ, ಅವರ ಬೆನ್ನಟ್ಟುವ ಈ ಸರಕಾರದ ದಾಖಲೆ ಪ್ರತಿಯೊಬ್ಬರ ಕಣ್ಣ ಮುಂದಿದೆ. ಅವರ ಪ್ರತಿಷ್ಠೆಗೆ ಹಾನಿಕಾರಕ ಎಂದು ಅವರಿಗೆ ಅನಿಸುವ ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಗಾಗಿ ವ್ಯಕ್ತಿಗಳನ್ನು ಕರೆದೊಯ್ಯುವುದನ್ನು ಜನ ಕಾಣುತ್ತಿದ್ದಾರೆ.

ಆದ್ದರಿಂದ ಈ ಆದೇಶವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಜನಗಳ ಹಣದ ಇಮ್ಮಡಿ ಲೂಟಿ–ಚಮಚಾ ಬಂಡವಳಿಗರ ಸಾಲಗಳ ಪಟ್ಟಿಯನ್ನು ಸಾರ್ವಜನಿಕಗೊಳಿಸಿ: –ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮರುಬಂಡವಾಳ ಒದಗಿಸಲು 41,000 ಕೋಟಿ ರೂ.ಗಳಿಗೆ ಮಂಜೂರಾತಿ ಪಡೆಯಲು ಸರಕಾರ ಮತ್ತೊಮ್ಮೆ ಪ್ರಯತ್ನಿಸಿದೆ. ಇದು ಈ ವರ್ಷದ ಮರುಬಂಡವಾಳೀಕರಣದ ಮೊತ್ತವನ್ನು 1,06,000ರೂ. ಗಳಿಗೆ ಒಯ್ಯುತ್ತದೆ .

ಬ್ಯಾಂಕಿಂಗ್ ಬಿಕ್ಕಟ್ಟು ಮೋದಿ ಸರಕಾರ ತನ್ನ ಚಮಚಾಗಳಿಗೆ ಸಾಲ ಪಡೆಯಲು, ಅದರೊಂದಿಗೆ ದೇಶವನ್ನು ಬಿಟ್ಟು ಹೋಗಲು ನೀಡಿರುವ ಕೃಪಾಪೋಷಣೆಯಿಂದಾಗಿ ಉಂಟಾಗಿದೆ. ಈ ಸಾಲಗಳನ್ನು ವಸೂಲಿ ಮಾಡುವ ಬದಲು, ಈ ಸಾರ್ವಜನಿಕ ಹಣದ ಲೂಟಿಗೆ ಹಣಕಾಸು ಹೊಂದಿಸಲು ಸಾರ್ವಜನಿಕ ಹಣವನ್ನು ತುಂಬಿಸಲಾಗುತ್ತಿದೆ. ಇದು ಭಾರತೀಯ ಜನತೆ ಶ್ರಮಪಟ್ಟು ಮಾಡಿರುವ ಉಳಿತಾಯಗಳ ಇಮ್ಮಡಿ ಲೂಟಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಇದುವರೆಗೆ, ಮೋದಿ ಸರಕಾರ ಚಮಚಾ ಬಂಡವಾಳಿಗರ, ಅವರು ಪಡೆದ ಸಾಲಗಳ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ. ಈ ರೀತಿಯ ಪಾರದರ್ಶಕತೆಯ ಅಭಾವ ಮೋದಿ ಸರಕಾರ ಸಾರ್ವಜನಿಕ ಹಣದ ಇಂತಹ ಲೂಟಿಗೆ ಪೋಷಣೆ ಒದಗಿಸುತ್ತಿದೆ ಎಂಬ ಸಂದೇಹವನ್ನು ಆಳಗೊಳಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇಂತಹ ಚಮಚಾ ಬಂಡವಾಳಶಾಹಿಗಳ ಪಟ್ಟಿಯನ್ನು ಸಾರ್ವಜನಿಕಗೊಳಿಸಬೇಕು ಮತ್ತು ಈ ಮೊತ್ತಗಳನ್ನು ಅವರಿಂದ ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ದ್ವೇಷ, ವಿಭಜನೆಯ ರಾಜಕೀಯದ ವಿರುದ್ಧ ನಾಗರಿಕರು ಧರ್ಮಸಮರಕ್ಕೆ ಇಳಿಯಬೇಕು

ಉತ್ತರಪ್ರದೇಶದ ಮುಖ್ಯಮಂತ್ರಿ ರಾಜೀನಾಮೆ ಕೊಡುವಂತೆ ಮಾಡಬೇಕು – ಹಿರಿಯ ನಿವೃತ್ತ ಅಧಿಕಾರಿಗಳ ಕರೆ

"ದೇಶದಲ್ಲಿ ಸಂವಿಧಾನಿಕ ಮೌಲ್ಯಗಳು ತ್ವರಿತವಾಗಿ ಸವಕಲಾಗುತ್ತಿವೆ. ಈ ಬಗ್ಗೆ ಕಳೆದ 18ತಿಂಗಳಲ್ಲಿ ಒಂಭತ್ತು ಬಾರಿ ನಾವು ಮಾತನಾಡಬೇಕಾಗಿ ಬಂದಿದೆ. ಈ ಸವೆತದ ವೇಗ ಭಯ ಹುಟ್ಟಿಸುತ್ತಿದೆ. ಪ್ರತಿಯೊಂದು ಬಾರಿ ಜಾರಿದಾಗಲೂ ಕಾನೂನುಬಾಹಿರತೆಯ ಕೆಸರಿನಲ್ಲಿ ಹೆಚ್ಚೆಚ್ಚು ಹೂತು ಹೋಗುತ್ತಿದ್ದೇವೆ"– ಇದು ಅಖಿಲ ಭಾರತ ಸೇವೆಗಳಲ್ಲಿ ದುಡಿದು ನಿವೃತ್ತರಾಗಿರುವ ಹಲವು ಹಿರಿಯರ ಮನದಾಳದ ನೋವಿನ ಮಾತುಗಳು. ದೇಶದಲ್ಲಿ ಹರಡುತ್ತಿರುವ ದ್ವೇಷದ, ಅದರಿಂದಾಗಿ ಕಾನೂನುಬಾಹಿರತೆಯ ವಾತಾವರಣದ ಹಿನ್ನೆಲೆಯಲ್ಲಿ ಈ ನಿವೃತ್ತ ಹಿರಿಯರ ಗುಂಪು ತನ್ನ ನೋವನ್ನು ಆಗಾಗ ವ್ಯಕ್ತಪಡಿಸುತ್ತ ಬಂದಿದೆ.

ಆದರೆ ಈ ಬಾರಿ ಉತ್ತರಪ್ರದೇಶದ ಬುಲಂದ್‌ಶಹರಿನಲ್ಲಿ ಗೋಹತ್ಯೆಯ ನೆಪದಲ್ಲಿ ಒಬ್ಬ ಪೋಲಿಸ್ ಅಧಿಕಾರಿಯನ್ನು ಬಹಿರಂಗವಾಗಿಯೇ ಹೊಡೆದು ಸಾಯಿಸಿರುವುದು ಮಾತ್ರವಲ್ಲ, ಆ ರಾಜ್ಯದ ಮುಖ್ಯಮಂತ್ರಿಗೆ ಈ ಅಧಿಕಾರಿಯನ್ನು ಹೀಗೆ ಬಡಿದು ಸಾಯಿಸಿದ್ದಕ್ಕಿಂತ ಇನ್ನೂ ಸಂದೇಹಾಸ್ಪದವೇ ಆಗಿರುವ ಗೋಹತ್ಯೆಯ ತನಿಖೆಯ ಬಗ್ಗೆಯೇ ಹೆಚ್ಚು ಕಾಳಜಿ ತೋರುತ್ತಿರುವುದು ಈ ಅನುಭವೀ ಅಧಿಕಾರಿಗಳ ತಾಳ್ಮೆಯ ಕಟ್ಟೆಯನ್ನೂ ಒಡೆದಿರುವಂತೆ ಕಾಣುತ್ತದೆ.

"ಇದೊಂದು ನಿರ್ಣಾಯಕ ಕ್ಷಣ. ಇನ್ನು ಸುಮ್ಮನಿರಲು ಸಾಧ್ಯವಿಲ್ಲ. ದ್ವೇಷ ಮತ್ತು ವಿಭಜನೆಯ ರಾಜಕೀಯದ ವಿರುದ್ಧ ಒಂದು ಧರ್ಮಯುದ್ಧಕ್ಕೆ ಎಲ್ಲ ನಾಗರಿಕರು ಒಂದಾಗಬೇಕಾಗಿದೆ. ಇದು ನಮ್ಮ ಗಣತಂತ್ರದ ಬುನಾದಿಯಾದ ಮೂಲಭೂತ ಸೂತ್ರಗಳನ್ನು ಧ್ವಂಸ ಮಾಡುವ ರಾಜಕೀಯ. ನಾಗರಿಕರಾಗಿ ನಮ್ಮ ಸಾರ್ವಭೌಮತೆಯನ್ನು ಮತ್ತೆ ಎತ್ತಿ ಹಿಡಿಯುವಲ್ಲಿ ಸಂವಿಧಾನಿಕ ಮೌಲ್ಯಗಳಿಗೆ ಗೌರವ ನಿಡುವ ಎಲ್ಲ ನಾಗರಿಕರು ಕೈ ಜೋಡಿಸಬೇಕು ಎಂದು ಮನವಿ ಮಡುತ್ತೇವೆ" ಎನ್ನುತ್ತ ಉತ್ತರಪ್ರದೇಶದ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಆಗ್ರಹಿಸಿದ್ದಾರೆ. ಈ ವ್ಯಕ್ತಿ ತಾನು ಯಾವುದರ ಅಡಿಯಲ್ಲಿ ಪ್ರತಿಜ್ಞೆ ಕೈಗೊಂಡಿದ್ದಾರೋ ಅದಕ್ಕೆ ವಿಧೇಯರಾಗಿರುವಲ್ಲಿ ವಿಫಲರಾಗಿದ್ದಾರೆ. ಒಂದು ಸಾರ್ವಜನಿಕ ಅಭಿಪ್ರಾಯವನ್ನು ಕಟ್ಟಿ ಬೆಳೆಸಿದರೆ ಈತನನ್ನು ತನ್ನ ವರ್ತನೆಗೆ ಹೊಣೆಗಾರನಾಗಿಸಲು ಮತ್ತು ರಾಜೀನಾಮೆ ಕೊಡುವಂತೆ ಮಾಡಲು ಸಾಧ್ಯವಿದೆ ಎಂದು ಇವರು ಹೇಳಿದ್ದಾರೆ. ರಾಜ್ಯದ ಮುಖ್ಯ ಕಾರ್ಯದರ್ಶಿ, ಪೋಲೀಸ್ ಮಹಾನಿರ್ದೇಶಕರು, ಗೃಹ ಕಾರ್ಯದರ್ಶಿ ಮತ್ತು ಸಂಬಂಧಪಟ್ಟ ನಾಗರಿಕ ಸೇವೆಗಳ ಎಲ್ಲ ಹಿರಿಯ ಅಧಿಕಾರಿಗಳಿಗೆ ಕಾನೂನಿನ ಆಳ್ವಿಕೆಯನ್ನು ನಿರ್ಭಯವಾಗಿ ಜಾರಿಗೊಳಿಸಬೇಕಾದ ಅವರ ಸಂವಿಧಾನಿಕ ಕರ್ತವ್ಯವನ್ನು ನೆನಪಿಸಬೇಕು, ಅಲಹಾಬಾದ್ ಹೈಕೋರ್ಟ್ ಈ ಘಟನೆಯನ್ನು ಸ್ವಯಂಪ್ರೇರಣೆಯಿಂದ ಗಮನಕ್ಕೆ ತಗೊಂಡು ಸತ್ಯಸಂಗತಿಗಳನ್ನು ಅನಾವರಣಗೊಳಿಸಲು ಒಂದು ನ್ಯಾಯಾಂಗ ತನಿಖೆಗೆ ಆದೇಶ ನೀಡಬೇಕು, ರಾಜಕೀಯ ಶಾಮೀಲನ್ನು ಬಯಲಿಗೆಳೆಯಬೇಕು, ಹೊಣೆಗಾರಿಕೆ ನಿರ್ಧರಿಸಬೇಕು ಮತ್ತು ಕ್ರಮಕ್ಕೆ ಶಿಫಾರಸು ಮಾಡಬೇಕು ಎಂದು ವಿನಂತಿಸಿಕೊಳ್ಳಬೇಕು ಎಂದು ಹೇಳಿದ್ದಾರೆ.

ಈ ಹಿರಿಯರು, ಇನ್ಸ್‌ಪೆಕ್ಟರ್ ಸುಬೋಧ್ ಸಿಂಗ್ ರಾಜಕೀಯ ಒತ್ತಡಕ್ಕೆ ಮಣಿಯದೆ, ತನ್ನ ಜೀವದ ಪರಿವೆಯಿಲ್ಲದೆ ಸಂವಿಧಾನಿಕ ಮೌಲ್ಯಗಳ ಪರವಾಗಿ ನಿಂತವರು ಎಂದು ನಮನ ಸಲ್ಲಿಸಿದ್ದಾರೆ, ಅಲ್ಲದೆ ಅವರ ಕುಟುಂಬ ಈ ಬಿಕ್ಕಟ್ಟನ್ನು ಶಾಂತವಾಗಿ, ಘನತೆಯಿಂದ ಎದುರಿಸಿದ್ದಾರೆ, ಸುಬೋಧ್ ಕುಮಾರ್ ಸಿಂಗ್ ಯಾವ ನೀತಿಗಳಿಗಾಗಿ ಬಲಿದಾನ ನೀಡಿದರೋ ಅವನ್ನು ಎತ್ತಿ ಹಿಡಿಯಲು ಸದ್ದಿಲ್ಲದೆ ದೃಢ ನಿರ್ಧಾರ ಮಾಡಿದ್ದಾರೆ ಎನ್ನುತ್ತ ಸುಬೋಧ್ ಕುಮಾರ್ ಸಿಂಗ್ ಬಲಿದಾನ ವ್ಯರ್ಥವಾಗುವುದಿಲ್ಲ ಎಂದಿದ್ದಾರೆ.

ಸರಕಾರ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ತೆರೆಯುವುದಕ್ಕೆ ಸಿಪಿಐ(ಎಂ)ನ ತೀವ್ರ ವಿರೋಧ

ಕರ್ನಾಟಕ ಸರಕಾರ ರಾಜ್ಯದಲ್ಲಿ ಒಂದು ಸಾವಿರ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ತೆರೆಯುವ ಕನ್ನಡ ವಿರೋಧಿ ಪ್ರಯತ್ನವನ್ನು ಕೂಡಲೇ ಕೈಬಿಡಬೇಕು ಎಂದು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್ ವಾದಿ) ರಾಜ್ಯ ಸಮಿತಿಯು ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸಿದೆ.

ಸರಕಾರದ ಈ ನಿಲುಮೆ ಖಂಡಿತಾ ಕನ್ನಡದ ಮೇಲಿನ ದೊಡ್ಡ ಧಾಳಿಯಾಗಿ ಪರಿಣಮಿಸಲಿದೆಯೆಂದು ಸಿಪಿಐಎಂ ಎಚ್ಚರಿಸಿದೆ.

ಅದೇ ಸಂದರ್ಭದಲ್ಲಿ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಒಂದು ಭಾಷೆಯಾಗಿ ಇಂಗ್ಲೀಷ್ ಕಲಿಸಲು ಅಗತ್ಯ ಕ್ರಮ ವಹಿಸುವುದನ್ನು ಸಿಪಿಐ(ಎಂ) ಪಕ್ಷ ಬೆಂಬಲಿಸುತ್ತದೆ ಎಂದು ಪುನಃ ಒತ್ತಿ ಹೇಳುತ್ತ ತಕ್ಷಣವೇ ಈ ಕುರಿತು ರಾಜ್ಯ ಸರಕಾರ ಅಗತ್ಯ ಕ್ರಮವಹಿಸುವಂತೆ ಒತ್ತಾಯಿಸಿದೆ.

ಇಂಗ್ಲೀಷ್ ಮಾಧ್ಯಮದ ಖಾಸಗೀ ಶಾಲೆಗಳು ಯಾವುದೇ ಅಗತ್ಯ ಮೂಲ ಸೌಕರ್ಯಗಳಿಲ್ಲದೇ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವುದನ್ನು ಹಾಗೂ ಅವುಗಳ ವ್ಯಾಪಕ ಲೂಟಿಗಳನ್ನು ತಡೆಯುವಲ್ಲಿ ಸರಕಾರ ಘೋರವಾಗಿ ವಿಫಲವಾಗಿದೆ ಎಂದು ಸಿಪಿಐ(ಎಂ) ಕಟುವಾಗಿ ಟೀಕಿಸಿದೆ.

ಅಲ್ಲದೆ ಅವುಗಳ ಬೆಳವಣಿಗೆಯನ್ನು ತೋರಿಸಿ ತಾನು ಕನ್ನಡ ಶಾಲೆಗಳನ್ನು ಮುಚ್ಚಿ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ತೆರೆಯಲು ಮುಂದಾಗುತ್ತಿರುವುದು ಕನ್ನಡ ವಿರೋಧಿಯಾಗಿದೆ ಎಂದು ಅದು ಹೇಳಿದೆ.

ಕೂಡಲೇ ಲೂಟಿಕೋರ ಖಾಸಗಿ ವ್ಯಾಪಾರಿ ಸಂಸ್ಥೆಗಳಿಗೆ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ತೆರೆಯಲು ಹಿಂಬಾಗಿಲಿಂದ ಪರೋಕ್ಷ ಬೆಂಬಲ ಮತ್ತು ಪ್ರೋತ್ಸಾಹ ನೀಡುವುದನ್ನು ನಿಲ್ಲಿಸಬೇಕು ಹಾಗೂ ಅವುಗಳ ಬೆಳವಣಿಗೆಯನ್ನು ನಿಲ್ಲಿಸಲು ಅಗತ್ಯ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಕೇವಲ ಇಂಗ್ಲೀಷ್ ಒಂದು ಭಾಷೆಯಾಗಿ ಕಲಿಸುವ ಶಾಲೆಗಳನ್ನು ಪ್ರೋತ್ಸಾಹಿಸಲು ಆದ್ಯತೆ ನೀಡುವಂತೆ ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.



ದೇಶದ ರೈತ ಆಂದೋಲನದ ಮುಖಂಡರು ಮತ್ತು ಸಿಪಿಐ(ಎಂ) ಸಂಸತ್ ಸದಸ್ಯರ ನಿಯೋಗವೊಂದು ಬುಲಂದ್‌ಶಹರಿನಲ್ಲಿ ಕರ್ತವ್ಯ ನಿರ್ವಹಿಸುತ್ತಲೇ ಕೋಮುವಾದಿಗಳ ಗುಂಡಿಗೆ ಬಲಿಯಾದ ಇನ್ಸ್‌ಪೆಕ್ಟರ್ ಸುಬೋಧ್ ಕುಮಾರ್ ಸಿಂಗ್‌ರವರ ಕುಟುಂಬದ ಸದಸ್ಯರನ್ನು ಡಿಸೆಂಬರ್ 19ರಂದು ಭೇಟಿಯಾಗಿದೆ. ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಜಂಟಿ ಕಾರ್ಯದರ್ಶಿಗಳಾದ ಜಿತೇಂದ್ರ ಚೌಧರಿ, ಕೆ.ಕೆ. ರಾಗೇಶ್, ಕೃಷ್ಣ ಪ್ರಸಾದ್ ಮತ್ತು ಎನ್.ಕೆ. ಶುಕ್ಲ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡ ವಿಕ್ರಮ್ ಸಿಂಗ್ ಮತ್ತಿತರರು ಈ ನಿಯೋಗದಲ್ಲಿದ್ದರು. ಈ ಕುಟುಂಬಕ್ಕೆ ನ್ಯಾಯ ದೊರಕುವಂತೆ ಮಾಡಲು ಹೋರಾಟವನ್ನು ಎಲ್ಲ ಮಟ್ಟಗಳಲ್ಲಿ, ಸಂಸತ್ತಿನ ಎರಡೂ ಸದನಗಳಲ್ಲಿಯೂ ತೀವ್ರಗೊಳಿಸುವ ಭರವಸೆಯನ್ನು ನಿಯೋಗ ನೀಡಿತು.

ಫ್ರಾನ್ಸ್‌ನ ಹಳದಿ ನಡುವಂಗಿ ಚಳುವಳಿ..... ದಾರಿ ಕಾಣದಾಗಿರುವ ನವ-ಉದಾರವಾದ



"ಯೆಲ್ಲೋ ವೆಸ್ಟ್"-ಹಳದಿ ನಡುವಂಗಿ ಅಂದರೆ, ಸೊಂಟದ ಮೇಲ್ಭಾಗದಲ್ಲಿ ಧರಿಸುವ ತೆಳು ಹಳದಿ ಬಣ್ಣದ ತೋಳಿಲ್ಲದ ಕವಚದಂತಹ ಉಡುಪು. ಅದರ ಮೇಲೆ ಬಿದ್ದ ಕಡಿಮೆ ಬೆಳಕಿನಲ್ಲಿಯೂ ಈ ಬಣ್ಣ ಎದ್ದು ಕಾಣುತ್ತದೆ. ಆದ್ದರಿಂದ ತೆರೆದ ಸ್ಥಳಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಇದನ್ನು ಧರಿಸುವುದು ಯುರೋಪಿನಲ್ಲಿ ಕಡ್ಡಾಯವಾಗಿದೆ. ಇದನ್ನು ತೊಟ್ಟ ಕಾರ್ಮಿಕರು ನವೆಂಬರ್ 17ರ ಶನಿವಾರದಿಂದ ಆರಂಭಗೊಂಡು, ಪ್ರತಿ ಶನಿವಾರವೂ ಪ್ಯಾರಿಸ್ ನಗರದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಡೀಸೆಲ್ ಬೆಲೆ ಏರಿಕೆಯ ವಿರುದ್ಧವಾಗಿ ಆರಂಭವಾದ ಈ ಚಳುವಳಿಯ ಸ್ವರೂಪ ಈಗ ಬದಲಾಗುತ್ತಿದ್ದು ಹೆಚ್ಚು ಹೆಚ್ಚು ಜನ ಬೆಂಬಲವನ್ನೂ ಗಳಿಸುತ್ತಿದೆ.

ಭಾರತದ ರೈತರ ಪಾರ್ಲಿಮೆಂಟ್ ಚಲೋದಿಂದ ಹಿಡಿದು ಪ್ಯಾರಿಸ್ಸಿನ ಹಳದಿ ನಡುವಂಗಿ ಚಳುವಳಿಯ ವರೆಗೆ, ಜನತೆಯ ಕೋಪದ ಕಟ್ಟೆಯೊಡೆದ ಚಳುವಳಿಗಳು ಇಡೀ ವಿಶ್ವದ ಉದ್ದಗಲಕ್ಕೂ ವ್ಯಾಪಿಸಿವೆ. ಇದು, ನವ-ಉದಾರಿ ಬಂಡವಾಳಶಾಹಿಗೆ ಮುಂದಿನ ದಾರಿ ಕಾಣದಂತಾಗಿದೆ ಎಂಬುದನ್ನು ಎತ್ತಿ ತೋರುತ್ತಿದೆ ಎನ್ನುತ್ತಾರೆ ಹಿರಿಯ ಆರ್ಥಿಕ ತಜ್ಞ

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ನವ-ಉದಾರಿ ಬಂಡವಾಳಶಾಹಿಯು ಎದುರಿಸುತ್ತಿರುವ ಬಿಕ್ಕಟ್ಟನ್ನು, ಫ್ರಾನ್ಸ್‌ನಲ್ಲಿ "ಯೆಲ್ಲೋ ವೆಸ್ಟ್"(ಹಳದಿ ನಡುವಂಗಿ) ಗುರುತಿನಡಿಯಲ್ಲಿ ನಡೆಯುತ್ತಿರುವ ಜನ ಸಾಮಾನ್ಯರ ಬಂಡಾಯವು, ಇದಕ್ಕಿಂತಲೂ ಹೆಚ್ಚಿನ ಸ್ಪಷ್ಟತೆ ಅವಶ್ಯವಿಲ್ಲ ಎನ್ನುವಷ್ಟು ಸ್ಪಷ್ಟವಾಗಿ ತೆರೆದಿಟ್ಟಿದೆ. "ಮಿತವ್ಯಯ"ದ ಹೆಸರಿನಲ್ಲಿ ತಮ್ಮ ಮೇಲೆ ಸಹಿಸಲಾರದಷ್ಟು ತೆರಿಗೆ ಏರಿಸಿರುವುದರ ವಿರುದ್ಧವಾಗಿ ಮತ್ತು ಅದೇ ತೆರಿಗೆಯನ್ನು ಶ್ರೀಮಂತರಿಂದ ವಸೂಲು ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿ ಸಾವಿರ ಸಾವಿರ ಜನ, ನವೆಂಬರ್ 17ರ ಶನಿವಾರದಿಂದ ಆರಂಭಗೊಂಡು, ಪ್ರತಿ ಶನಿವಾರವೂ ಪ್ಯಾರಿಸ್ ನಗರದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಡೀಸೆಲ್ ಬೆಲೆ ಏರಿಕೆಯ ವಿರುದ್ಧವಾಗಿ ಆರಂಭವಾದ ಈ ಚಳುವಳಿಯು ಸ್ವರೂಪ ಈಗ ಬದಲಾಗುತ್ತಿದ್ದು ಹೆಚ್ಚು ಹೆಚ್ಚು ಜನ ಬೆಂಬಲವನ್ನೂ ಗಳಿಸುತ್ತಿದೆ.

ಉಗ್ರ ಎಡಪಂಥೀಯರು ಮತ್ತು ಉಗ್ರ ಬಲಪಂಥೀಯರು ಜೊತೆಗೂಡಿ ಈ ಚಳುವಳಿಯನ್ನು ಪ್ರೋತ್ಸಾಹಿಸುತ್ತಿದ್ದಾರೆ ಮತ್ತು ಈ ಚಳುವಳಿಯಿಂದ ಅಂತಿಮವಾಗಿ ಫ್ಯಾಸಿಸ್ಟ್ ಶಕ್ತಿಗಳಿಗೆ ಲಾಭವಾಗುತ್ತದೆ ಎಂಬುದಾಗಿ ಉದಾರವಾದಿ ವಲಯಗಳು ಬಿಂಬಿಸಲು ಪ್ರಯತ್ನಿಸುತ್ತಿವೆ. ಫ್ಯಾಸಿಸ್ಟ್ ಗುಮ್ಮದ ಬೆದರಿಕೆಯಂತಹ ಚತುರೋಪಾಯಗಳ ಮೂಲಕ ಜನ ಸಾಮಾನ್ಯರ ಕುಂದು-ಕೊರತೆ, ಆಕ್ರೋಶಗಳು ಇಂತಹ ಚಳುವಳಿಗಳ ಮೂಲಕ ವ್ಯಕ್ತಗೊಳ್ಳುವುದನ್ನು ತಪ್ಪಿಸಿ, ಆ ಮೂಲಕ ಸಮರ್ಥನೆ ಗಿಟ್ಟಿಸಿಕೊಳ್ಳುವುದು ಉದಾರವಾದಿಗಳ ಕರಾಮತ್ತು.

ಫ್ರಾನ್ಸ್‌ನಲ್ಲಿ ಒಂದು ಬಲವಾದ ಫ್ಯಾಸಿಸ್ಟ್ ಚಳುವಳಿ ಇರುವುದು ನಿಜ. ಆದರೆ, ಆ ಚಳುವಳಿಗೂ ಮತ್ತು ಹಳದಿ ನಡುವಂಗಿ ಚಳುವಳಿಗೂ ಸಂಬಂಧವಿಲ್ಲ. ಈ ಹಳದಿ ನಡುವಂಗಿ ಚಳುವಳಿಯಿಂದ ಯಾರಿಗೆ ಲಾಭವಾಗುತ್ತದೆ ಎಂಬುದು ಫ್ರಾನ್ಸ್‌ನ ಬೇರೆ ಬೇರೆ ರಾಜಕೀಯ ಬಣಗಳು ಕೈಗೊಳ್ಳುವ ನಿರ್ಧಾರದ ಮೇಲೆ ನಿಲ್ಲುತ್ತದೆ. ಆ ಬಗ್ಗೆ, ಬಾಯಿಗೆ ಬಂದ ಹಾಗೆ ಭವಿಷ್ಯ ನುಡಿಯಲಾಗದು. ಈ ಚಳುವಳಿಗೆ ರಾಜಕೀಯ ಬೆಂಬಲಿಗರು ಇಲ್ಲ ಎಂಬುದೇ ವಾಸ್ತವಾಂಶ ಎಂದು ಹೇಳಬಹುದು. ಜನಸಾಮಾನ್ಯರಿಗೆ ತೆರಿಗೆ ಹೊರೆಯಿಂದ ಪರಿಹಾರ ಒದಗಿಸುವ ಮತ್ತು ಅದೇ ತೆರಿಗೆಯನ್ನು ಶ್ರೀಮಂತರಿಂದ ವಸೂಲು ಮಾಡುವ ಅಂಶಗಳು ಬಲಪಂಥಕ್ಕೆ ಒಗ್ಗುವುದೇ ಇಲ್ಲ. ಆದರೆ, ಈ ಬೇಡಿಕೆಗಳು, ಬಲಪಂಥಕ್ಕೆ ತದ್ವಿರುದ್ಧ ಎನ್ನುವಂತೆ, ದುಡಿಯುವ ಜನತೆಯನ್ನು ಇಕ್ಕಟ್ಟಿಗೆ ತಳ್ಳಿದ ನವ-ಉದಾರವಾದದ ಅಡ್ಡ ಪರಿಣಾಮಗಳಿಂದ ಉದ್ಭವಿಸಿದ ಪ್ರಗತಿಪರ ಬೇಡಿಕೆಗಳು.

ಜನತೆ ಅನುಭವಿಸುತ್ತಿರುವ ಸಂಕಷ್ಟಗಳ ಮೂಲವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಒಂದು ಬಿಕ್ಕಟ್ಟಿನ ಕಾಲದಲ್ಲಿ, ಉತ್ಪತ್ತಿ ಮತ್ತು ಉದ್ಯೋಗಗಳು ನಿಧಾನಗೊಳ್ಳುವುದರಿಂದ, ಸರ್ಕಾರದ ಆದಾಯವೂ ಇಳಿಯುತ್ತದೆ. ಆಗ, ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು ನಿಯಂತ್ರಿಸಬೇಕು ಎಂದಾದರೆ, (ಈ ಕೊರತೆಯು ಜಿಡಿಪಿಯ ಶೇ.3ನ್ನು ಮೀರಬಾರದು ಎಂಬುದು ಯೂರೋಪಿಯನ್ ಒಕ್ಕೂಟದ ನಿಯಮ) ಆಗ, ಸರ್ಕಾರವು ತನ್ನ ಖರ್ಚುಗಳನ್ನು ಕಡಿತಗೊಳಿಸಬೇಕಾಗುತ್ತದೆ. ಇದು ಎರಡು ಪರಿಣಾಮಗಳನ್ನು ಉಂಟುಮಾಡುತ್ತದೆ: ಮೊದಲನೆಯದು, ಒಟ್ಟಾರೆ ಬೇಡಿಕೆ ಮತ್ತಷ್ಟು ಇಳಿಯುವುದರಿಂದ ಬಿಕ್ಕಟ್ಟು ತೀವ್ರಗೊಳ್ಳುತ್ತದೆ. ಎರಡನೆಯದು, ಖರ್ಚುಗಳ-ಕಡಿತವು ಜನ ಕಲ್ಯಾಣ ಕಾರ್ಯಗಳು ಕುಂಠಿತಗೊಳ್ಳುವಲ್ಲಿ ಪರಿಣಮಿಸಿ ಜನರನ್ನು ಮತ್ತಷ್ಟು ತೊಂದರೆ ಮತ್ತು ನಷ್ಟಕ್ಕೆ ಈಡು ಮಾಡುತ್ತದೆ.

ಆದ್ದರಿಂದ, ಬಡ ದುಡಿಮೆಗಾರರು ಬೇರೆ ಬೇರೆಯಾದ ಮೂರು ರೀತಿಯ ಆಘಾತಕ್ಕೊಳಗಾಗುತ್ತಾರೆ: ಮೂಲ ಬಿಕ್ಕಟ್ಟಿನಿಂದ ತೊಂದರೆಗೊಳಗಾಗುವುದು ಮೊದಲನೆಯದು, ಸರ್ಕಾರದ ಆದಾಯ ಇಳಿದು ಬಿಕ್ಕಟ್ಟು ಉಲ್ಬಣಗೊಂಡದ್ದರಿಂದಾದ ಪರಿಣಾಮಗಳು ಎರಡನೆಯದು, ಜನ ಕಲ್ಯಾಣ ಕಾರ್ಯಗಳನ್ನು ಕಡಿತಗೊಳಿಸಿದ್ದರಿಂದಾಗಿ ಜೀವನ ಮಟ್ಟದ ಕುಸಿತದ ಪರಿಣಾಮಗಳು ಮೂರನೆಯದು. ಇಂತಹ ಪರಿಸ್ಥಿತಿಯಲ್ಲಿ ಜನತೆಯ ಪ್ರತಿಭಟನೆ ವ್ಯಾಪಕವಾಗಿರುತ್ತದೆ. ಇಂತಹ ಪ್ರತಿಭಟನೆಗಳು ಈಗ ಪ್ಯಾರಿಸ್ಸಿನಲ್ಲಿ ನಡೆಯುತ್ತಿವೆ. ಇದರಲ್ಲಿ ಆಶ್ಚರ್ಯವೇನಿಲ್ಲ.

ಒಂದು ವೇಳೆ, ಸರ್ಕಾರವು ತನ್ನ ಖರ್ಚುಗಳನ್ನು ಕಡಿತಗೊಳಿಸದೇ ಇದ್ದರೆ, ಪರಿಣಾಮ ಏನಾಗುತ್ತಿತ್ತು? ಎಂದು ಕೇಳಬಹುದು. ವಿತ್ತೀಯ ಕೊರತೆಯ ಗಾತ್ರ ಇನ್ನೂ ಹೆಚ್ಚಿಗೆ ಇರುತ್ತಿತ್ತು ಎಂಬುದು ಸ್ಪಷ್ಟ. ಆದರೆ, ಅದು ಯೂರೋಪಿಯನ್ ಒಕ್ಕೂಟದ ನಿಯಮದ ಉಲ್ಲಂಘನೆಯಾಗುತ್ತಿತ್ತು ಮತ್ತು ಹಣಕಾಸು ಬಂಡವಾಳವು ಕೆಂಡಾಮಂಡಲವಾಗುತ್ತಿತ್ತು. ಫ್ರೆಂಚ್ ಸರ್ಕಾರವು ಅವರ ಇಂತಹ ಪ್ರತಿಕ್ರಿಯೆಯನ್ನು ತಲೆಗೆ ಹಚ್ಚಿಕೊಳ್ಳದಿದ್ದರೂ ಸಹ, ವಿತ್ತೀಯ ಕೊರತೆಯ ಹೆಚ್ಚಳದಿಂದಾಗಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತಿತ್ತು.

ಫ್ರೆಂಚ್ ಸರ್ಕಾರವು, ತನ್ನ ವಿತ್ತೀಯ ಕೊರತೆಯು ಜಿಡಿಪಿಯ ಶೇ.3ನ್ನು ಮೀರದಂತೆ ಕಟ್ಟುನಿಟ್ಟಾಗಿ ನೋಡಿಕೊಂಡ ಒಂದು ಪರಿಸ್ಥಿತಿ ಮತ್ತು ಆದಾಯ ಇಳಿದರೂ ಜನ ಕಲ್ಯಾಣ ಕಾರ್ಯಗಳ ಖರ್ಚುಗಳನ್ನು ಕಡಿತಗೊಳಿಸದ ಕಾರಣದಿಂದ ತನ್ನ ವಿತ್ತೀಯ ಕೊರತೆಯು ಶೇ.3ರ ಮಿತಿಯನ್ನು ಮೀರಿದ ಇನ್ನೊಂದು ಪರಿಸ್ಥಿತಿ, ಈ ಎರಡು ಪರಿಸ್ಥಿತಿಗಳನ್ನು ಹೋಲಿಸಿ ನೋಡಿದಾಗ, ಎರಡನೆಯ ಅಂದರೆ ವಿತ್ತೀಯ ಕೊರತೆ ಶೇ.3ರ ಮಿತಿಯನ್ನು ಮೀರಿದ ಪರಿಸ್ಥಿತಿಯಲ್ಲಿ, ಅದರ ಚಾಲ್ತಿ ಖಾತೆಯ ಕೊರತೆಯು (ಪಾವತಿ ಶೇಷ) ಮೊದಲನೆಯ ಪರಿಸ್ಥಿತಿಯಲ್ಲಿ ಇರುವುದಕ್ಕಿಂತಲೂ ಹೆಚ್ಚಿಗೆ ಇರುತ್ತಿತ್ತು. ಏಕೆಂದರೆ, ಎರಡನೆಯ ಪರಿಸ್ಥಿತಿಯಲ್ಲಿ, ಒಟ್ಟಾರೆ ಬೇಡಿಕೆಯ ಒಂದು ಭಾಗವು ಹೆಚ್ಚಿನ ಚಾಲ್ತಿ ಕೊರತೆಯ ರೂಪದಲ್ಲಿ ವಿದೇಶಕ್ಕೆ "ಸೋರಿಕೆ"ಯಾಗುತ್ತದೆ. ಆದ್ದರಿಂದ, ಹೆಚ್ಚಿದ ಚಾಲ್ತಿ ಕೊರತೆಯನ್ನು ಸರಿದೂಗಿಸಿಕೊಳ್ಳಲು ಹೊರಗಿನಿಂದ ಸಾಲ ಪಡೆಯಬೇಕಾಗುತ್ತದೆ. ಆದರೆ, ವಿತ್ತೀಯ ಕೊರತೆ ಹೆಚ್ಚಿದ ಕಾರಣದಿಂದ, ದೊಡ್ಡ ಮೊತ್ತದ ಚಾಲ್ತಿ ಖಾತೆಯ ಕೊರತೆಯನ್ನು ನಿಭಾಯಿಸಿಕೊಳ್ಳುವ ಉದ್ದೇಶಕ್ಕೆ ಸಾಲ ಕೊಡಲು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಮುಂದಾಗುವುದಿಲ್ಲ.

ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಚಾಲ್ತಿ ಖಾತೆಯ ಕೊರತೆ ಹೆಚ್ಚಾಗದಂತಹ ಪರಿಸ್ಥಿತಿ ಇದ್ದಾಗ, ವಿತ್ತೀಯ ಕೊರತೆ ದೊಡ್ಡ ಪ್ರಮಾಣದಲ್ಲಿದ್ದರೂ ನಿಭಾಯಿಸಿಕೊಳ್ಳಬಹುದು. ಚಾಲ್ತಿ ಖಾತೆಯ ಕೊರತೆಯ ಪ್ರಮಾಣ ಹೆಚ್ಚಾದ ಪರಿಸ್ಥಿತಿಯಲ್ಲಿ ದೇಶದ ಸಮಸ್ಯೆ ಗಂಭೀರವಾಗುತ್ತದೆ. ಹಾಗಾಗಿ, ವಿತ್ತೀಯ ಕೊರತೆಯಯನ್ನು ವಿಸ್ತರಿಸಿಕೊಳ್ಳಲು ಆರ್ಥಿಕ ರಚನೆಯಲ್ಲೇ ಒಂದು ನಿರ್ಬಂಧವಿದೆ, ಅದು ತಪ್ಪು ಗ್ರಹಿಕೆಯಿಂದ ಉದ್ಭವಿಸುವ ನಿರ್ಬಂಧವಲ್ಲ.

ನವ-ಉದಾರವಾದದ ರಚನೆಯಲ್ಲೇ ಸಂಯೋಜನೆಗೊಂಡಿರುವ ಈ ನಿರ್ಬಂಧದ ಸ್ವರೂಪವನ್ನು ಗಮನಿಸಲು ಒಂದು ಬದಲಿ ದೃಶ್ಯವನ್ನು ಕಲ್ಪಿಸಿಕೊಳ್ಳೋಣ. ಈ ಕಲ್ಪನೆಯಲ್ಲಿ, ವಿತ್ತೀಯ ಕೊರತೆ ದೊಡ್ಡ ಪ್ರಮಾಣದಲ್ಲಿದ್ದ ಪರಿಣಾಮವಾಗಿ ಚಾಲ್ತಿ ಖಾತೆಯ ಕೊರತೆ ಹೆಚ್ಚಾಗದಂತೆ ಖಾತ್ರಿಪಡಿಸಿಕೊಳ್ಳುವ ಉದ್ದೇಶದಿಂದ, ಫ್ರಾನ್ಸ್ ಆಮದುಗಳನ್ನು ನಿಯಂತ್ರಿಸುತ್ತದೆ. ಅಂದರೆ, ವಿತ್ತೀಯ ಕೊರತೆ ಶೇ.3ರ ಮಿತಿಯೊಳಗಿರುವ ಪರಿಸ್ಥಿತಿಗೆ ಹೋಲಿಸಿದರೆ, ಈ ಹೊಸ ಪರಿಸ್ಥಿತಿಯಲ್ಲಿ ಸೃಷ್ಠಿಯಾಗುವ ಹೆಚ್ಚಿನ ಪ್ರಮಾಣದ ಒಟ್ಟಾರೆ ಬೇಡಿಕೆಯು ದೇಶದ ಆಂತರಿಕ ಉತ್ಪತ್ತಿ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ ಮತ್ತು ಆಮದುಗಳನ್ನೂ ಇಳಿಸುತ್ತದೆ. ಹಾಗಾಗಿ, ಇಂತಹ ಪರಿಸ್ಥಿತಿಯಲ್ಲಿ, ವಿತ್ತೀಯ ಕೊರತೆ ಶೇ.3ರ ಮಿತಿಯನ್ನು ಮೀರಿದರೂ ಹೊರಗಿನಿಂದ ಸಾಲ ಪಡೆಯುವ ಅವಶ್ಯಕತೆ ಬೀಳುವುದಿಲ್ಲ.

ಆದ್ದರಿಂದ, ವಿತ್ತೀಯ ಕೊರತೆಯ ವಿಸ್ತರಣೆಯ ಮೇಲಿರುವ ಆರ್ಥಿಕ ರಚನೆಯ ನಿರ್ಬಂಧವು, ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯ ಮೂಲಕ ಸೃಷ್ಠಿಯಾದ ಒಟ್ಟಾರೆ ಬೇಡಿಕೆಯಲ್ಲಿ ಒಂದು ಭಾಗ ಹೊರಗೆ "ಸೋರಿಕೆ"ಯಾಗುವ ಅಂಶದಿಂದ ಉದ್ಭವಿಸುತ್ತದೆ. ಅಂದರೆ, ನವ-ಉದಾರವಾದದಲ್ಲಿ ದೇಶಗಳು ಆಮದುಗಳನ್ನು ನಿರ್ಬಂಧಿಸುವಂತಿಲ್ಲ. ಆಮದು ನಿರ್ಬಂಧ ಈ ವರೆಗೆ ಸಾಧ್ಯವಾಗಿರುವುದು ಕೇವಲ ಅಮೇರಿಕಾ ದೇಶಕ್ಕೆ ಮಾತ್ರ. ಯಾವ ಯೂರೋಪಿಯನ್ ದೇಶಕ್ಕೂ ಈ ವರೆಗೆ ಆಮದು ನಿರ್ಬಂಧಿಸಲು ಸಾಧ್ಯವಾಗಿಲ್ಲ. ಯೂರೋಪಿಯನ್ ಒಕ್ಕೂಟದಿಂದ ಹೊರಬರದ ಹೊರತು ಅದು ಸಾಧ್ಯವೂ ಇಲ್ಲ. ಏಕೆಂದರೆ, ಅದರ ನಿಯಮಗಳ ಪ್ರಕಾರ, ಸದಸ್ಯ ದೇಶಗಳಿಗೆ ಆಮದು ನಿರ್ಬಂಧಿಸುವ ಸ್ವಾತಂತ್ರ್ಯವಿಲ್ಲ.

ಫ್ರಾನ್ಸ್ ಇಂದು ಒಂದು ರೀತಿಯ ಉಭಯ ಸಂಕಟಕ್ಕೆ ಒಳಗಾಗಿದೆ. ಫ್ರೆಂಚ್ ಅಧ್ಯಕ್ಷ ಇಮ್ಯಾನ್ಯುಅಲ್ ಮ್ಯಕ್ರಾನ್, ರಾಷ್ಟ್ರವನ್ನುದ್ದೇಶಿಸಿ ಮಾತನಾಡುತ್ತಾ, ಹಳದಿ ನಡುವಂಗಿಯವರ ಕೆಲವು ಬೇಡಿಕೆಗಳನ್ನು ಈಡೇರಿಸುವುದಾಗಿ ಒಪ್ಪಿಕೊಂಡರು. ಕನಿಷ್ಠ ಕೂಲಿ ಹೆಚ್ಚಿಸುವುದಾಗಿಯೂ, ಡೀಸೆಲ್ ಬೆಲೆ ಏರಿಕೆ ಪ್ರಸ್ತಾಪವನ್ನು ಮುಂದೂಡುವುದಾಗಿಯೂ ಒಪ್ಪಿದ್ದಾರೆ. ಆದರೆ, ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸುವುದನ್ನು ಮುಚ್ಚುಮರೆಯಿಲ್ಲದೆ ತಳ್ಳಿಹಾಕಿದ್ದಾರೆ. ಮ್ಯಕ್ರಾನ್ ಅವರ ಈ ಘೋಷಣೆಯಿಂದಾಗಿ, ಸರ್ಕಾರದ ವಿತ್ತೀಯ ಕೊರತೆಯು ಯೂರೋಪಿಯನ್ ಒಕ್ಕೂಟವು ಅನುಮತಿಸಿರುವ ಮಟ್ಟವನ್ನು ಮೀರುತ್ತದೆ. ಒಂದು ವೇಳೆ, ಒಕ್ಕೂಟವು ಫ್ರಾನ್ಸ್‌ನ ಈ ಉಲ್ಲಂಘನೆಯನ್ನು ಮೃದುವಾಗಿ ಸ್ವೀಕರಿಸುತ್ತದೆ ಎಂದು ಊಹಿಸಿಕೊಂಡರೂ ಸಹ, ಹೊರಗಿನಿಂದ ಸಾಲ ಮಾಡಬೇಕಾಗುವ ಪರಿಸ್ಥಿತಿಯಲ್ಲಿ, ಫ್ರಾನ್ಸ್, ಅಂತಾರಾಷ್ಟ್ರೀಯ ಬಂಡವಾಳವನ್ನು ತೃಪ್ತಿಪಡಿಸಬೇಕಾಗುತ್ತದೆ. ಅದನ್ನು ಮಾಡುವಾಗ ಒಂದಲ್ಲಾ ಒಂದು ರೀತಿಯಲ್ಲಿ ಜನರನ್ನು ಹಿಂಡಬೇಕಾಗುತ್ತದೆ.

ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಮ್ಯಕ್ರಾನ್ ಅವರು ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸಿ ವಿತ್ತೀಯ ಕೊರತೆಯು ಒಕ್ಕೂಟ ಅನುಮತಿಸಿರುವ ಮಟ್ಟ ಮೀರದಂತೆ ನೋಡಿಕೊಳ್ಳಬಹುದಿತ್ತು. ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸುವುದನ್ನು ಮ್ಯಕ್ರಾನ್ ತಳ್ಳಿಹಾಕಿದರು, ಏಕೆಂದರೆ, ಅಂತಾರಾಷ್ಟ್ರೀಯ ಬಂಡವಾಳವು ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸುವುದನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ಕಾರಣದಿಂದಾಗಿ. ಅವರು, ವಿತ್ತೀಯ ಕೊರತೆ ಹೆಚ್ಚಿಸಿಕೊಳ್ಳುವಾಗಲೇ ಆಮದು ನಿಯಂತ್ರಣವನ್ನೂ ಹೇರಬಹುದಿತ್ತು. ಅಂತಹ ಸಂದರ್ಭದಲ್ಲಿ ಏರಿಕೆಯಾದ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿನ ಉದ್ಯೋಗ ಮತ್ತು ಆಂತರಿಕ ಉತ್ಪತ್ತಿಯ ಮೂಲಕ ಪೂರೈಸಬಹುದಿತ್ತು ಮತ್ತು ಜೊತೆಯಲ್ಲಿ ಚಾಲ್ತಿ ಖಾತೆಯ ಕೊರತೆಯೂ

ಪುಟ 14 ಕ್ಕೆ



ಪ್ಯಾರಿಸ್ಸಿನಲ್ಲಿ ಯೆಲ್ಲೋ ವೆಸ್ಟ್ ಚಳುವಳಿ – ದಿಲ್ಲಿಯಲ್ಲಿ ಕಿಸಾನ್ ಮುಕ್ತಿ ಮಾರ್ಚ್

ಈಗ ತ್ರಿಪುರಾ ಬಿಜೆಪಿ ಸರಕಾರದ ಉದ್ಯೋಗ ಸೃಷ್ಟಿ ಜುಮ್ಲಾ–ಯುವಜನರ ಆಕ್ರೋಶ



ತ್ರಿಪುರಾದಲ್ಲಿ ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ನೇರವಾಗಿ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಬಿಜೆಪಿ ಎಲ್ಲ ಕುಟುಂಬಗಳ ಯುವಜನರಿಗೆ ಉದ್ಯೋಗ ಕಲ್ಪಿಸಲು ಪ್ರತಿವರ್ಷ 50000 ಸರಕಾರೀ ಉದ್ಯೋಗಗಳನ್ನು ಸೃಷ್ಟಿಸಲಾಗುವುದು ಎಂದು ಆಶ್ವಾಸನೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದು ಒಂದು ವರ್ಷ ಮುಗಿಯುವ ವೇಳೆಗೆ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ಎಂದು ಲೆಕ್ಕ ಕೊಡುವ ಬದಲು ಈ ಸರಕಾರದ ಮುಖ್ಯ ಕಾರ್ಯದರ್ಶಿ ಸರಕಾರದಲ್ಲಿ ಹೊಸ ಉದ್ಯೋಗಗಳ ಸೃಷ್ಟಿಯ ಮೇಲೆ ನಿರ್ಬಂಧಗಳನ್ನು ಹಾಕಿರುವ ಸುತ್ತೋಲೆ ಹೊರಡಿಸಿದ್ದಾರೆ. ಇದು ಬಿಜೆಪಿಯ ಇನ್ನೊಂದು ಚುನಾವಣಾ ವಂಚನೆ ಎಂದು ಬಯಲಿಗೆ ಬಂದಿದೆ. ಇದರಿಂದಾಗಿ ಮೊದಲ ವರ್ಷದಲ್ಲಂತೂ 50000 ಉದ್ಯೋಗಗಳ ನಿರ್ಮಾಣದ ಮಾತು ಒತ್ತಟ್ಟಿಗಿರಲಿ, ಹಿಂದಿನ ಎಡರಂಗ ಸರಕಾರ 8000 ಖಾಲಿ ಹುದ್ದೆಗಳಿಗೆ ಆರಂಭಿಸಿದ್ದ ನೇಮಕಾತಿ ಪ್ರಕ್ರಿಯೆಯೂ ರದ್ದಾಗಿದೆ.

ಸರಕಾರೀ ಉದ್ಯೋಗಾವಕಾಶದ ವಿಷಯದಲ್ಲಿ ತ್ರಿಪುರಾ ಈಗಾಗಲೇ ದೇಶದಲ್ಲೇ ಅತಿ ಹೆಚ್ಚಿನ ಮಟ್ಟ ಹೊಂದಿರುವುದರಿಂದಾಗಿ ಹೊಸ ನೇಮಕಾತಿಗಳು ಆ ವರ್ಷದಲ್ಲಿ ಆಗುವ ನಿವೃತ್ತಿಗಳಿಗೆ ಸೀಮಿತವಾಗಿರಬೇಕು. ಉದ್ಯೋಗ ನಿರ್ಮಾಣ ಸಂಬಂಧಪಟ್ಟ ಇಲಾಖೆಯ ಬಜೆಟ್ ಸಂಪನ್ಮೂಲಗಳನ್ನು ಅವಲಂಬಿಸಿರಬೇಕು, ಯಾವುದೇ ಹೊಸ ಹುದ್ದೆಯ ನಿರ್ಮಾಣದ ಪ್ರಸ್ತಾಪದಲ್ಲಿ ಅದರ ಹಣಕಾಸು ಹೊರೆಗೆ ಸಮನಾದ ಹಳೆಯ ಹುದ್ದೆಗಳ ರದ್ದತಿಯ ಯೋಜನೆಯೂ ಇರಬೇಕು ಎಂದು ಈ ಸುತ್ತೋಲೆ ಹೇಳುತ್ತದೆ. ಇದು ಸರಕಾರೀ ಉದ್ಯೋಗ ಸೃಷ್ಟಿಯ ಮೇಲೆ ನಿಷೇಧವಲ್ಲದೆ ಬೇರೇನೂ ಅಲ್ಲ ಎಂದು ರಾಜ್ಯದ ಯುವಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ, ಡಿಸೆಂಬರ್ 19 ರಂದು ಅಗರ್ತಲಾದಲ್ಲಿ ಪ್ರತಿಭಟನಾ ಮತಪ್ರದರ್ಶನ ನಡೆದಿದೆ, ಈ ಸುತೋಲೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಲಾಗುತ್ತಿದೆ.

ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಬೆಂಬಲ–ಸಿಪಿಐ(ಎಂ) ಕೇಂದ್ರ ಸಮಿತಿ

ಪುಟ 2 ರಿಂದ

ಹೇಳಿದೆ. ಚುನಾವಣಾ ಬಾಂಡುಗಳು ಹೊಸ ತೆರಿಗೆ ವಂಚನಾಧಾಮಗಳಾಗಿವೆ. ಚುನಾವಣಾ ಆಯೋಗಕ್ಕೆ ಬಿಜೆಪಿ ಸಲ್ಲಿಸಿದ ಆಡಿಟ್ ಮತ್ತು ಆದಾಯ ತೆರಿಗೆ ವರದಿ ಚುನಾವಣಾ ಬಾಂಡುಗಳಿಂದ 2017–18ರಲ್ಲಿ 210 ರೂ.ಗಳ ಸ್ವಯಂಪ್ರೇರಿತ ವಂತಿಗೆಗಳು ಬಂದಿವೆ ಎಂದು ತೋರಿಸಿದೆ. ಈ ವರ್ಷದ ಮಾರ್ಚ್‌ವರೆಗಿನ ಅವಧಿಯಲ್ಲಿ ನೀಡಿರುವ ಚುನಾವಣಾ ಬಾಂಡುಗಳ ಒಟ್ಟು ಮೌಲ್ಯ 222 ಕೋಟಿ ರೂ. ಹೀಗೆ ಬಿಜೆಪಿ ಈ ಒಟ್ಟು ಚುನಾವಣಾ ಬಾಂಡುಗಳ 94.5%ವನ್ನು ಪಡೆದಿದೆ. 2017–18ರಲ್ಲಿ ಬಿಜೆಪಿ ಒಟ್ಟು 1027 ಕೋಟಿ ರೂ.ಗಳ ಭಾರೀ ಮೊತ್ತದ ಹಣವನ್ನು ಪಡೆದಿದೆ. .

ಬಿಜೆಪಿ ಮತ್ತು ಮೋದಿ ಸರಕಾರ ಇಂತಹ ಚಮಚಾ ಬಂಡವಾಳಶಾಹಿಯ ಮೂಲಕ ತನ್ನ ಚುನಾವಣಾ ಪ್ರಯೋಜನಕ್ಕೆ ಕಾರ್ಪೊರೇಟ್ ನಿಧಿ ನೀಡಿಕೆಗೆ ಸೌಕರ್ಯ ಒದಗಿಸಿ ಕೊಟ್ಟಿದೆ ಎಂಬುದು ಸ್ಪಷ್ಟ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಕೋಮುಧ್ರುವೀಕರಣವನ್ನು ಆಳಗೊಳಿಸುವ ಪ್ರಯತ್ನ

ಸಾರ್ವತ್ರಿಕ ಚುನಾವಣೆಗಳ ವೇಳೆಗೆ ಕೋಮುವಾದಿ ಉನ್ಮಾದವನ್ನು ಬೆಳೆಸುವ ಪ್ರಯತ್ನಗಳಲ್ಲಿ ಹಲವು ಹಿಂದುತ್ವ ಪಡೆಗಳು ತೊಡಗಿವೆ ಎಂದು ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ. ತಮ್ಮ ಚುನಾವಣಾ ಜನಪ್ರಿಯತೆ ಮಾಯವಾಗುತ್ತಿರುವುದರಿಂದ ಆರೆಸ್ಸೆಸ್–ಬಿಜೆಪಿಗೆ ಹಿಂದುತ್ವ ಕೋಮುವಾದಿ ವೋಟ್ ಬ್ಯಾಂಕ್‌ನ್ನು ಕ್ರೋಡೀಕರಿಸಲು ಕೋಮುವಾದಿ ಧ್ರುವೀಕರಣವೇ ಏಕೈಕ ದಾರಿಯಾಗಿ ಕಾಣಿಸುತ್ತಿದೆ. ಇದು ಭಾರತದಲ್ಲಿ ವೋಟ್ ಬ್ಯಾಂಕಿನ ಅತ್ಯಂತ ಕೆಟ್ಟ ಅಭಿವ್ಯಕ್ತಿಯಾಗಿದೆ.

ಆರೆಸ್ಸೆಸ್–ಬಿಜೆಪಿ ಮುಖಂಡರು ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ಒಂದು ಶಾಸನ/ಸುಗ್ರೀವಾಜ್ಞೆ ತರಬೇಕು ಎಂದು ಕರೆ ನೀಡುತ್ತಿರುವುದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ವಿವಿಧ ರ‍್ಯಾಲಿಗಳನ್ನು ನಡೆಸಿರುವುದು ಈ ದುಷ್ಟ ಕುತಂತ್ರವನ್ನು ಸ್ಪಷ್ಟವಾಗಿಯೇ ತೋರಿಸುತ್ತಿದೆ.

ಗೋರಕ್ಷಣೆ, ನೈತಿಕ ಪೋಲೀಸ್‌ಗಿರಿ ಮುಂತಾದವುಗಳ ಹೆಸರಲ್ಲಿ ಖಾಸಗಿ ಸೇನೆಗಳಿಗೆ ನೀಡುತ್ತಿರುವ ಪೋಷಣೆಯ ಫಲಿತಾಂಶವಾಗಿ ಕಾವಲುಕೋರತನ ಜನಜಂಗುಳಿಗಳು ಬಡಿದು ಸಾಯಿಸುವ ಘಟನೆಗಳು ನಡೆಯುವ ವರೆಗೆ ಬೆಳೆದಿದೆ. ಜನಜಂಗುಳಿಯ ಹಿಂಸಾಚಾರ ಮತ್ತು ಬಡಿದು ಸಾಯಿಸುವ ಘಟನೆಗಳ ಮೇಲೆ ತೀವ್ರ ಕ್ರಮ ಕೈಗೊಳ್ಳಬೇಕೆಂಬ ಸುಪ್ರಿಂ ಕೋರ್ಟಿನ ನಿರ್ದೇಶನಗಳನ್ನು ಉಲ್ಲಂಘಿಸಲಾಗುತ್ತಿದೆ. ಇದರ ಬದಲು ಈ ನಿರ್ದೇಶನದ ನಂತರ ಉತ್ತರಪ್ರದೇಶದ ಮೇರಠ್ ವ್ಯಾಪ್ತಿಯೊಂದರಲ್ಲೇ 54 ಮಂದಿಯನ್ನು ದನಗಳ ಕಳ್ಳಸಾಗಾಣಿಕೆಯ ಆರೋಪದಲ್ಲಿ ಬಂಧಿಸಲಾಗಿದೆ. ಈ ಜಿಲ್ಲೆಯಲ್ಲಿ ಸಂದೇಹಾಸ್ಪದ ಸಂದರ್ಭಗಳಲ್ಲಿ ಕಳೇಬರಗಳನ್ನು ಕಂಡು ಗೋಹತ್ಯೆ ನಡೆದಿದೆ ಎಂಬ ನೆಪದಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಗಳ ಸಮಯದಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್‌ರವರ ಕ್ರೂರ ಹತ್ಯೆ ನಡೆದಿದೆ. ಈ ನಿರ್ದಿಷ್ಟ ಘಟನೆಯಲ್ಲೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಮೊದಲಿಗೆ ಗೋಹತ್ಯೆಯ ಆರೋಪಗಳ ತನಿಖೆಗೆ ಆದೇಶ ನೀಡಿದರು, ನಂತರವೇ ಪೋಲಿಸ್ ಇನ್ಸ್‌ಪೆಕ್ಟರ್ ಹತ್ಯೆಯ ತನಿಖೆ ನಡೆಸಲಾಗುವುದು ಎಂದರು.

ಕೇರಳದಲ್ಲಿ, ಶಬರಿಮಲೆ ದೇವಸ್ಥಾನದ ತೀರ್ಪಿನ ವಿಷಯದಲ್ಲಿ ಆಸ್ತಿಕರ ಭಾವನೆಗಳ ದುರುಪಯೋಗ ಪಡೆಯುವ ಮತ್ತು ಕೋಮುವಾದಿ ಉದ್ವೇಗವನ್ನು ಸೃಷ್ಟಿಸುವ ಆರೆಸ್ಸೆಸ್–ಬಿಜೆಪಿ ಪ್ರಯತ್ನಗಳನ್ನು ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಸರಕಾರ ದೃಢವಾಗಿ ಎದುರಿಸಿವೆ. ಕಾಂಗ್ರೆಸ್ ಪಕ್ಷ ಬಿಜೆಪಿಯ ಮಾರ್ಗವನ್ನು ಅನುಸರಿಸುತ್ತಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ.

ಈ ಎರಡೂ ಪಕ್ಷಗಳು ಆರಂಭದಲ್ಲಿ ತೀರ್ಪನ್ನು ಸ್ವಾಗತಿಸಿದರೂ, ಆಸ್ತಿಕರಲ್ಲಿನ ಸಂದೇಹಗಳನ್ನು ದುರುಪಯೋಗ ಪಡಿಸಿಕೊಂಡು ಅವರನ್ನು ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಸರಕಾರದ ವಿರುದ್ಧ ಬಳಸಲು ಪ್ರಯತ್ನಿಸಿದರು. ಬಿಜೆಪಿ ಮತ್ತು ಕಾಂಗ್ರೆಸ್ ನಡೆಸಿರುವ ಸುಳ್ಳು ಪ್ರಚಾರವನ್ನು ಬಯಲಿಗೆಳೆಯಲು ಪಕ್ಷ ಮತ್ತು ಎಲ್‌ಡಿಎಫ್ ನಡೆಸಿರುವ ಪ್ರಚಾರಾಂದೋಲನದಲ್ಲಿ ಭಾಗವಹಿಸಬೇಕು ಎಂದು ಕೇರಳದ ಜನತೆಗೆ ಕೇಂದ್ರ ಸಮಿತಿ ಮನವಿ ಮಾಡಿಕೊಂಡಿದೆ.

ಜಮ್ಮು ಮತ್ತು ಕಾಶ್ಮೀರ

ಕಾಶ್ಮೀರ ಕಣಿವೆಯಲ್ಲಿ ಪರಿಸ್ಥಿತಿಗಳು ಹದಗೆಡುತ್ತಿರುವ ಬಗ್ಗೆ ಕೇಂದ್ರ ಸಮಿತಿ ತನ್ನ ಗಂಭೀರ ಆತಂಕವನ್ನು ವ್ಯಕ್ತಪಡಿಸಿತು. ಭದ್ರತಾ ಪಡೆಗಳು ನಿಶ್ಶಸ್ತ್ರ ಪ್ರತಿಭಟನಾಕಾರರ ಮೇಲೆ ನಡೆಸಿದ ಗೋಲೀಬಾರಿನಲ್ಲಿ ಏಳು ನಾಗರಿಕರು ಕೊಲ್ಲಲ್ಪಟ್ಟಿರುವುದು ದುರದೃಷ್ಟಕರ. ಇದನ್ನು ಒಪ್ಪಲು ಸಾಧ್ಯವಿಲ್ಲ. ಮೋದಿ ಸರಕಾರ ನಾಲ್ಕು ವರ್ಷಗಳ ಹಿಂದೆ ಒಂದು ರಾಜಕೀಯ ಸಂವಾದವನ್ನು ಆರಂಭಿಸುವುದಾಗಿ ಆಶ್ವಾಸನೆ ನೀಡಿತ್ತು. ಈ ಸಂವಾದ ನಡೆಸಲು ಅದಕ್ಕೆ ಆಸಕ್ತಿಯೇ ಇಲ್ಲ ಎಂದು ಕೇಂದ್ರ ಸಮಿತಿ ಖೇದ ವ್ಯಕ್ತಪಡಿಸಿದೆ.

ಕಳೆದ ಮೂರು ವರ್ಷಗಳಲ್ಲಿ ಮುನ್ನೂರಕ್ಕೂ ಹೆಚ್ಚು ನಾಗರಿಕರು ಸತ್ತಿದ್ದಾರೆ. ದುರದೃಷ್ಟವಶಾತ್, ಈ ಸಾವುಗಳ ಬಗ್ಗೆ ಯಾವುದೇ ತನಿಖೆಯನ್ನು ನಡೆಸಿಲ್ಲ, ಇದಕ್ಕೆ ಯಾರೊಬ್ಬರನ್ನೂ ಹೊಣೆಯಾಗಿಸಿಲ್ಲ. ಈ ಸನ್ನಿವೇಶ ಜನಗಳಲ್ಲಿ ಇನ್ನಷ್ಟು ಪರಕೀಯ ಭಾವ ಬೆಳೆಯುವಂತೆ ಮಾಡುತ್ತದಷ್ಟೇ ಎಂದು ಕೇಂದ್ರ ಸಮಿತಿ ಎಚ್ಚರಿಸಿದೆ.

ಬಿಜೆಪಿಗೆ ಇಂತಹ ಸನ್ನಿವೇಶ ಮುಂದುವರಿಯಬೇಕೆಂದೇ ಆಸಕ್ತಿ. ಮುಂಬರುವ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ ಕೋಮುವಾದಿ ಧ್ರುವೀಕರಣದ ಅದರ ಇನ್ನೂ ದೊಡ್ಡದಾದ ಅಜೆಂಡಾಕ್ಕಾಗಿ ಅದು ಹೀಗೆ ಮಾಡುತ್ತಿದೆ; ಯಾವ ರಾಜಕೀಯ ಹೊಣೆಗಾರಿಕೆಯೂ ಇಲ್ಲ, ಅದು ಉಂಟುಮಾಡಿರುವ ಅವ್ಯವಸ್ಥೆಯ ಬಗ್ಗೆ ಹೊಣೆಗಾರಿಕೆ ಇಲ್ಲ. ಈ ಪ್ರಶ್ನೆಗಳನ್ನು ಸಂಪೂರ್ಣವಾಗಿ ತಪ್ಪಾಗಿ ಅದು ನಿರ್ವಹಿಸಿರುವುದು ಭಾರತವನ್ನು ಘಾಸಿಗೊಳಿಸಿದೆ ಎಂದು ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ಮೋದಿ ಸರಕಾರ ತಕ್ಷಣವೇ, ಈ ಹಿಂದೆ ನೀಡಿದ್ದ ತನ್ನ ಆಶ್ವಾಸನೆಯಂತೆ, ಸಂಬಂಧಪಟ್ಟ ಎಲ್ಲರೊಂದಿಗೂ ಸಂವಾದದ ಪ್ರಕ್ರಿಯೆಯನ್ನು ಆರಂಭಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಹೆಚ್ಚುತ್ತಿರುವ ಜನ ಹೋರಾಟಗಳು

ಇತ್ತೀಚಿನ ಅವಧಿಯಲ್ಲಿ ಜನತೆಯ ಹೋರಾಟಗಳು ಬೆಳೆಯುತ್ತಿವೆ ಎಂದು ಗಮನಿಸಿದ ಕೇಂದ್ರ ಸಮಿತಿ ಮೋದಿ ಸರಕಾರ ಹೇರುತ್ತಿರುವ ಹೆಚ್ಚೆಚ್ಚು ಸಂಕಷ್ಟಗಳ ವಿರುದ್ಧ ಜನಗಳ ಹೋರಾಟಗಳನ್ನು ಮತ್ತಷ್ಟು ಬಲಪಡಿಸುವುದನ್ನು ಸಿಪಿಐ(ಎಂ) ಮತ್ತು ಎಡಪಂಥೀಯರು ಮುಂದುವರೆಸುತ್ತಾರೆ ಎಂದು ಹೇಳಿದೆ.

ಫ್ರಾನ್ಸ್‌ನ ಹಳದಿ ನಡುವಂಗಿ ಚಳುವಳಿ...

ಪುಟ 13 ರಿಂದ

ಏರುತ್ತಿರಲಿಲ್ಲ. ಆದರೆ, ಒಕ್ಕೂಟದ ನಿಯಮಗಳ ಪ್ರಕಾರ ಅವರು ಆಮದು ನಿಯಂತ್ರಣ ಮಾಡುವಂತಿರಲಿಲ್ಲ. ಅದು, ಅಂತಾರಾಷ್ಟ್ರೀಯ ಬಂಡವಾಳಕ್ಕೂ ಒಪ್ಪಿಗೆಯಾಗುತ್ತಿರಲಿಲ್ಲ. ಹಾಗಾಗಿ, ಮ್ಯಕ್ರಾನ್ ಅವರ ಕ್ರಮಗಳು ವಿತ್ತೀಯ ಕೊರತೆಯನ್ನು ಮತ್ತು ಚಾಲ್ತಿ ಖಾತೆಯ ಕೊರತೆಯನ್ನೂ ಹೆಚ್ಚಿಸುತ್ತವೆ. ಈ ಕೊರತೆಗಳನ್ನು ಬಂಡವಾಳದ ಒಳಹರಿವಿನ ಮೂಲಕ ನೀಗಿಸಿಕೊಳ್ಳುವಾಗ, ಹಣ ಒದಗಿಸುವವರು ತಮ್ಮ ತಾಳಕ್ಕೆ ಸಾಲ ಪಡೆಯುವವರು ಕುಣಿಯುವಂತೆ ಮಾಡುತ್ತಾರೆ. ಅಂದರೆ, “ಮಿತವ್ಯಯ ನೀತಿ”(ಅಂದರೆ ಜನಸಾಮಾನ್ಯರ ಸೌಕರ್ಯಗಳಿಗೆ ಕತ್ತರಿ ಹಾಕುವ ನೀತಿ–ಅನು) ಪಾಲಿಸಬೇಕಾಗುತ್ತದೆ, ಈಗಲೇ ಅಲ್ಲದಿದ್ದರೂ ಸ್ವಲ್ಪ ಸಮಯದ ನಂತರ ಅದು ತಪ್ಪಿದ್ದಲ್ಲ.

ಆದ್ದರಿಂದ, ಮ್ಯಕ್ರಾನ್ ಘೋಷಿಸಿರುವ ಕ್ರಮಗಳು ಸಧ್ಯಕ್ಕೆ ಪ್ರತಿಭಟನೆ ಮುಂದುವರಿಯುವುದನ್ನು ತಡೆಯಬಹುದು. ಆದರೆ, ಈ ಕ್ರಮಗಳು ಜನತೆಯ ಕಣ್ಣಿಗೆ ಮಣ್ಣೆರೆಚಿವೆ. ಬೀಸುವ ದೊಣ್ಣೆಯಿಂದ ಮ್ಯಕ್ರಾನ್ ತಪ್ಪಿಸಿಕೊಂಡಿದ್ದಾರೆ. ಆದರೆ, ಸ್ವಲ್ಪ ತಡವಾಗಿ ಅವರು ಜನ ಸಾಮಾನ್ಯರ ಮೇಲೆ ದೊಣ್ಣೆ ತಿರುಗಿಸುತ್ತಾರೆ.

ವಾಸ್ತವಿಕವಾಗಿ, ದುಡಿಯುವ ಜನತೆಗೆ ಒಂದಿಷ್ಟು ಪರಿಹಾರ ಒದಗಿಸಬೇಕೆಂದಿದ್ದರೆ, ಈ ಪರಿಹಾರ ದೇಶದ ಒಳಗೆ ಮಿಗುತಾಯ ಮೌಲ್ಯ ಕಬಳಿಸುವವರಿಂದ ಬರಬಹುದು, ಅಥವಾ ಒಟ್ಟಾರೆ ಬೇಡಿಕೆ ವೃದ್ಧಿಯ ಮೂಲಕ ಆಂತರಿಕವಾಗಿ ಏರಿಕೆಯಾಗುವ ಉತ್ಪತ್ತಿಯಿಂದ ಬರನಹುದು, ಅಥವಾ ಹೊರಗಿನ ಸಾಲದಂತಹ ಮೂಲಗಳಿಂದ ಹಣ ಒದಗಿಸಿಕೊಳ್ಳಬೇಕಾಗುತ್ತದೆ. ಶ್ರೀಮಂತರನ್ನು ಮುಟ್ಟುವಂತೆಯೇ ಇಲ್ಲ. ಹಾಗಾಗಿ, ಮೊದಲನೆಯ ಆಯ್ಕೆಯನ್ನು (ಮಿಗುತಾಯ ಗಳಿಸುವವರು) ಕೈಬಿಡಬೇಕಾಗುತ್ತದೆ. ಪರಿಹಾರ ಒದಗಿಸಿದ ಕಾರಣದಿಂದಾಗಿ ಆಂತರಿಕ ಉತ್ಪತ್ತಿ ಏರಿದರೂ ಸಹ, ಹೊರಗಿಂದ ಸ್ವಲ್ಪ ಮಟ್ಟಿಗೆ ಸಾಲ ಪಡೆಯಬೇಕಾಗುತ್ತದೆ. ಅಂದರೆ. ಈ ಮೂಲಗಳಲ್ಲಿ ಎರಡನೆಯ ಮತ್ತು ಮೂರನೆಯ ಆಯ್ಕೆಗಳ ಸಮ್ಮಿಲನದಿಂದ, ಜನತೆಗೆ ಪರಿಹಾರ ಒದಗಿಸುವ ಹಣವನ್ನು, ಹೊಂದಿಸಿಕೊಳ್ಳಬೇಕಾಗುತ್ತದೆ.

ಆದರೆ, ಹೊರಗಿನಿಂದ ಸಾಲ ಪಡೆದಾಗ “ಮಿತವ್ಯಯ ನೀತಿ” ಬೆನ್ನಟ್ಟುವ ಬೇತಾಳನಂತೆ ಹಿಂಬಾಲಿಸುತ್ತದೆ. ಹಾಗಾಗಿ, ಪರಿಹಾರದ ಹೊರೆಯನ್ನು ದುಡಿಯುವ ಜನತೆಯ ಮತ್ತೊಂದು ವಿಭಾಗವೇ ಹೊರಬೇಕಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮ್ಯಕ್ರಾನ್‌ರವರ ಪರಿಹಾರ ಕ್ರಮಗಳು ಬೇಕೆಂದೇ ಕಾಲವಿಳಂಬ ಮಾಡುವ, ಜನತೆಯ ಕಣ್ಣಿಗೆ ಮಣ್ಣೆರೆಚುವ ತಂತ್ರಗಾರಿಕೆಯಿಂದ ಕೂಡಿವೆ. ಅಷ್ಟೇ ಅಲ್ಲ, ಈ ಕ್ರಮಗಳು ಒಟ್ಟಿನಲ್ಲಿ, ದುಡಿಯುವ ಜನತೆಯ ಕೆಲವು ವಿಭಾಗಗಳು ಪಡೆಯುವ ಪರಿಹಾರದ ಹೊರೆಯನ್ನು ದುಡಿಯುವ ಜನತೆಯ ಮತ್ತೊಂದು ವಿಭಾಗವೇ ಹೊರುವ ಪರಿಣಾಮ ಹೊಂದಿವೆ. ಆದರೆ, ಮನಸ್ಸಿಲ್ಲದ ಮನಸ್ಸಿನಿಂದ ಅಥವಾ ಒತ್ತಾಯಕ್ಕೊಳಗಾದ ಮ್ಯಕ್ರಾನ್ ಈ ಪರಿಹಾರ ಕ್ರಮಗಳನ್ನು ಘೋಷಿಸಿರುವುದು, ಜನತೆಯ ಕೋಪ ಅದೆಷ್ಟು ತೀವ್ರವಾಗಿತ್ತು ಎಂಬುದನ್ನು ರುಜುವಾತುಪಡಿಸುತ್ತದೆ ಮತ್ತು ಈ ಅಂಶವನ್ನು ನವ–ಉದಾರಿ ಬಂಡವಾಳದ ಪಾಲಕರೂ ಕಡೆಗಣಿಸುವಂತಿಲ್ಲ. ಭಾರತದ ರೈತರ ಪಾರ್ಲಿಮೆಂಟ್ ಚಲೋದಿಂದ ಹಿಡಿದು ಪ್ಯಾರಿಸ್ಸಿನ ಹಳದಿ ನಡುವಂಗಿ ಚಳುವಳಿಯ ವರೆಗೆ, ಜನತೆಯ ಕೋಪದ ಕಟ್ಟೆಯೊಡೆದ ಚಳುವಳಿಗಳು ಇಡೀ ವಿಶ್ವದ ಉದ್ದಗಲಕ್ಕೂ ವ್ಯಾಪಿಸಿವೆ. ಇದು, ನವ–ಉದಾರಿ ಬಂಡವಾಳಶಾಹಿಗೆ ಮುಂದಿನ ದಾರಿ ಕಾಣದಂತಾಗಿದೆ ಎಂಬುದನ್ನು ಒತ್ತಿ ಹೇಳುತ್ತದೆ.

'ಸೈಪ್ರಸ್': 'ಮೆಡಿಟೇರಿಯನ್ ದ್ವೀಪ' ದ ವಿಭಿನ್ನತೆಯ ದರ್ಶನ

ಕೆ. ಮಹಾಂತೇಶ್

ಇತ್ತೀಚೆಗೆ ಡಬ್ಲ್ಯೂ.ಎಫ್.ಟಿಯು. ಸಭೆಯ ಪ್ರಯುಕ್ತ ಸೈಪ್ರಸ್ ಗೆ ಭೇಟಿ ನೀಡಿದ್ದ ಲೇಖಕರು ಆ ದೇಶದ ಬಗ್ಗೆ ಸಂಗ್ರಹಿಸಿದ ಮಾಹಿತಿ

ಭೌಗೋಳಿಕವಾಗಿ 'ಸೈಪ್ರಸ್'

ಸೈಪ್ರಸ್ ಎನ್ನುವ ಈ ಚಿಕ್ಕದಾದ ಈ ದೇಶ ಒಟ್ಟಾರೆ 250 ಕೀಮಿ ಯಷ್ಟು ಉದ್ದವಿದೆ. ಒಂದು ತುದಿಯಿಂದ ಇನ್ನೊಂದು ತುದಿಯನ್ನು ಸುಮಾರು 5 ಗಂಟೆಯೊಳಗೆ ತಲುಪಬಹುದು. ಇಲ್ಲಿನ ಒಟ್ಟಾರೆ ಜನಸಂಖ್ಯೆ 1.1 ಮಿಲಿಯನ್ ಮಾತ್ರ ಅದರಲ್ಲಿ ಶೇ 21 ರಷ್ಟು ವಿದೇಶಿಯರಿದ್ದಾರೆ. ಹಿಂದೆ ಇಲ್ಲಿ ಸ್ಥಳೀಯ ಕರೆನ್ಸಿ ಇದ್ದರೂ ಈಗ ಯೂರೋಪಿಯನ್ ಯೂನಿಯನ್ ಸೇರಿದ ಮೇಲೆ "ಯೂರೋ" ಚಲಾವಣೆಯಲ್ಲಿದೆ. ಇದೊಂದು ಆಧುನಿಕವಾದ ಆದರೆ ಅತ್ಯಂತ ಶ್ರೀಮಂತ ಪಾರಂಪರಿಕತೆಯನ್ನು ಹೊಂದಿರುವ ವೈವಿಧ್ಯಮ ಸಂಸ್ಕೃತಿಗಳನ್ನು ಹೊಂದಿದ ದೇಶ. ತನ್ನ ಸುತ್ತಲು "ಮೆಡಿಟರೇನಿಯನ್" ಕಡಲ ಕಿನಾರೆಗಳನ್ನು ಹೊಂದಿರುವ ಮತ್ತು ಸ್ನಾನಕ್ಕೆ ಇಡೀ ಯುರೋಪನಲ್ಲೇ ಅತ್ಯಂತ ಶುದ್ಧ ಮತ್ತು ಶುಭ್ರವಾದ ನೀರಿನಿಂದ ಆವೃತವಾಗಿರುವ" ದ್ವೀಪ" ರಾಷ್ಟ್ರ ಎಂಬ ಖ್ಯಾತಿ ಗಳಿಸಿದೆ. ಇಲ್ಲಿನ ಆರ್ಥಿಕತೆಯಲ್ಲಿ ಕೃಷಿ ರಂಗದ್ದು ಶೇ 24 ರಷ್ಟಿದ್ದರೆ, ಕೈಗಾರಿಕಾ ಕ್ಷೇತ್ರ ಪಾಲು ಶೇ 15.9 ರಷ್ಟಿದೆ. ಉಳಿದಂತೆ ಸೇವಾರಂಗ ಸಿಂಹಪಾಲು ಅಂದರೆ ಶೇ 77ರಷ್ಟು ಹೊಂದಿದೆ. ಇಲ್ಲಿನ ಅಧಿಕೃತ ಭಾಷೆಗಳೆಂದರೆ ಗ್ರೀಕ್ ಮತ್ತು ಇಂಗ್ಲೀಷ್. ಇಲ್ಲಿನ ಸರಾಸರಿ ಹವಾಗುಣ ಶೀತಗಾಲದಲ್ಲಿ 13 ಡಿಗ್ರಿ ಬೇಸಿಗೆಯಲ್ಲಿ 34 ಡಿಗ್ರಿಗಳಷ್ಟು ಇರುತ್ತದೆ.

ಸೈಪ್ರಸ್_ನಾಗರೀಕತೆ_ಇತಿಹಾಸ

ಸೈಪ್ರಸ್ ಎನ್ನುವ ಈ ಸಣ್ಣ ದೇಶದ ಜನನವೇ ಒಂದು ಕೂತೂಹಲಕಾರಿ. ಹಾಗೆ ನೋಡಿದರೆ ಕೋಟ್ಯಾಂತರ ವರ್ಷಗಳಿಂದ ಮಾನವ ಜೀವಿ ವಾಸಿಸುವ ಈ ಭೂಮಿಯ ಉಗಮವೇ ಒಂದು ಸೋಜಿಗದ ಸಂಗತಿ. ಸುಮಾರು 90 ದಶಲಕ್ಷದಷ್ಟು ವರ್ಷ ಗಳ ಹಿಂದೆ ಆಫ್ರಿಕಾ ಎನ್ನುವ ಆ ಭೂ ತಟ್ಟೆಯಲ್ಲಿ ನಡೆದ ಭೂ ಉತ್ಕರ್ಷ, ಭೂ ಗರ್ಭದೊಳಗೆ ಉಂಟಾದ ಮಹಾ ಸಂಘರ್ಷದ ಫಲವೇ ಅಂದು ಭೂ ಗರ್ಭದೊಳಗೆ ಮತ್ತು ಮಹಾ ಸಾಗರದೊಳಗೆ ನಡೆದ ಸಂಘರ್ಷದ ಪರಿಣಾವಾಗಿಯೇ ಆಫ್ರಿಕಾದಿಂದ ಬೇರ್ಪಟ್ಟ ಸಣ್ಣ ಭೂಮಿಯ ತುಂಡೊಂದು ಸಮುದ್ರದ ನಡುವೆ ಪರ್ವತಗಳಿಂದ ಕೂಡಿದ ನಡುಗಡ್ಡೆಯಾಗಿ, ಲಕ್ಷಾಂತರ ವರ್ಷಗಳ ಜ್ವಾಲಮುಖಿಯಾಗಿ ಉರಿದು ಉಂಟಾಗಿದ್ದು ನಂತರ ತಣ್ಣಗಾಗಿ ಸೈಪ್ರಸ್ ಎನ್ನುವ ನಡುಗಡ್ಡೆಯಾಗಿದೆ.

ಭಾರತವೆಂದು ಕರೆಯಲಾಗುವ ಇಂದಿನ ನಮ್ಮ ದೇಶವೂ ಕೂಡ ಆಫ್ರಿಕಾದಿಂದ ಬೇರ್ಪಟ್ಟು ನೀರಿನಲ್ಲಿ ತೇಲುತ್ತಾ ಏಷ್ಯಾದ ಕಡೆ ಬಂದು ಸೇರ್ಪಡೆಗೊಂಡಿದ್ದರ ಇತಿಹಾಸ ನಮಗೆ ತಿಳಿದಿದೆ. ಅದಕ್ಕೆ ಸಾಕ್ಷಿಯೆಂಬಂತೆ ಆಫ್ರಿಕಾದ ನಿಗ್ರೋ ಇಂಡಿಯನ್ನರಿಗೂ ಮತ್ತು ನಮಗೂ, ಅಲ್ಲಿನ ಅರಣ್ಯ ಪ್ರದೇಶಕ್ಕೂ ನಮ್ಮ ಅರಣ್ಯ ಪ್ರದೇಶಕ್ಕೂ, ಅಲ್ಲಿ ಸಿಗುವ ಉತ್ಕೃಷ್ಟ ಚಿನ್ನ,ತಾಮ್ರ, ಕಬ್ಬಿಣ ಸಿಗುವಂತೆ ನಮ್ಮಲ್ಲೂ ಸಿಗುತ್ತಿರುವ ಅಂಶವನ್ನು ಗಮನಿಸಿ. ಮಾತ್ರವಲ್ಲ, ಆಫ್ರಿಕಾದಲ್ಲಿರುವಂತೆ ಹುಲಿ, ಸಿಂಹ ಹಾಗೂ ಆನೆಗಳು ನಮ್ಮ ದಕ್ಷಿಣ ಭಾರತದಲ್ಲೂ ಇರುವ ಪ್ರಾಣಿಗಳಿಗೂ ಸಂಪೂರ್ಣ ಸಾಮ್ಯತೆಗಳಿವೆ. ಇದರಿಂದಾಗಿಯೇ ನಾವು ಮೂಲ ಆಫ್ರಿಕಾನ್ನರೇ ಎನ್ನವುದರಲ್ಲಿ ಯಾವ ಸಂಶಯವೂ ಇಲ್ಲ.

ಜಗತ್ತಿನ ಮೊಟ್ಟಮೊದಲ ಮಾನವ ಅವಶೇಷಗಳು ಮಾತ್ರವಲ್ಲ ಆನೆಯ ಅವಶೇಷಗಳು ಈ ನೆಲದಲ್ಲಿ ದೊರಕಿ ಮಾನವ ಇತಿಹಾಸದಲ್ಲಿ ಅತೀ ಪುರಾತನ ನಾಗರೀಕತೆ ಎನ್ನುವ ಖ್ಯಾತಿಯನ್ನು ಈ ಮೆಡಿಟೇರಿಯನ್ ದ್ವೀಪ ಹೊಂದಿದೆ. ಅದಕ್ಕೆ ಪೂರಕವಾದ ಹಲವು ಕುರುಹುಗಳನ್ನು ಇಲ್ಲಿ ಕಾಣಬಹುದು. ಇಲ್ಲಿ ವಾಸಿಸುತ್ತಿದ್ದ ಮಾನವರು ಸಾಮೂಹಿಕ ಕೃಷಿಯನ್ನು ನಡೆಸುತ್ತಿದ್ದ ಬಗ್ಗೆಯೂ ಮತ್ತು ಸೈಪ್ರಸ್ ನ ಇಂದಿನ ನಗರೀಕರಣಕ್ಕೆ ಕ್ರಿ.ಪೂ 9000 ಮುಂಚೆಯ ಆದಿ ಮಾನವ ನಿರ್ಮಿಸಿದ ಮನೆ ನಿರ್ಮಾಣ ನಾಗರೀಕತೆಯೇ ಈಗಲೂ ಪ್ರೇರಣೆಯಾಗಿತ್ತು ಎನ್ನುವುದನ್ನು ಈ ಕುರಿತು ನಡೆಸಿದ ಅಧ್ಯಯನ ಬೆಳಕು ಚೆಲ್ಲಿದೆ.



ಯುರೋಪು, ಏಷ್ಯಾ ಹಾಗೂ ಆಫ್ರಿಕಾ ಹೀಗೆ ಮೂರು ಖಂಡಗಳ ನಡುವಿನ ಮೆಡಿಟರೇನಿಯನ್ ಸಮುದ್ರದ ಆಯಕಟ್ಟಿನ ನಡುಗಡ್ಡೆಯಾಗಿರುವ ಸೈಪ್ರಸ್ ಎನ್ನುವ ಸುಂದರ 'ದ್ವೀಪ'ವನ್ನು ತಮ್ಮದಾಗಿಸಲು ಇತಿಹಾಸದುದ್ದಕ್ಕೂ ಮತ್ತು ಇತ್ತೀಚಿನವರೆಗೂ ಬ್ರಿಟಿಷರು, ಟರ್ಕರು, ಗ್ರೀಕರ ನಡುವೆ ಮಹಾಸಂಘರ್ಷಗಳೇ ನಡೆದಿವೆ.....

ನಡುಗಡ್ಡೆಗಾಗಿ ನಡೆದ ಸಂಘರ್ಷ

"ಸೈಪ್ರಸ್" ಎನ್ನುವ ಚೆಂದದ ಈ ಹೆಸರು ಬಂದಿದ್ದು ಹೇಗೆ ಗೊತ್ತಾ? ಈ ದ್ವೀಪ ರಾಷ್ಟ್ರ ವನ್ನು ಆಳಲು ಹಲವು ವಿದೇಶಿಗರು ಹಾತೊರೆದು ವ್ಯಾಪಾರದ ಹೆಸರಲ್ಲಿ ಇದರ ಮೇಲೆ ದಾಳಿ ಮಾಡಿದರು. ಹಾಗೆ ಬಂದ ಸಾಗರೋತ್ತರ ವ್ಯಾಪಾರಿಗಳ ಕನಸಿನ ಕೂಸೆ ಈ ಸೈಪ್ರಸ್. ಇದು ಲ್ಯಾಟಿನ್ ಹೆಸರು ಲ್ಯಾಟಿನ್ ಭಾಷೆಯಲ್ಲಿ ತಾಮ್ರಕ್ಕೆ ಫರಾಸೆ ಆಯಿಸ್ ಸೈಪ್ರಲಾ ಎನ್ನುತ್ತಾರೆ (metal of Cyprsa) ಹೀಗೆ ಕರೆಸಿಕೊಂಡ ಈ ದೇಶ ನಂತರ ಅದನ್ನೇ ಉನ್ನತವಾಗಿಸಿಕೊಂಡು ಸೈಪ್ರಸ್ ಎಂದಾಗಿದೆ. ಈಗ ಅಲ್ಲಿನ ಜನರನ್ನು Cypriot ಎಂದು ಮತ್ತು ಅಲ್ಲಿನ ಸಂಸ್ಕೃತಿಯನ್ನು Cyprus ಎಂದು ಕರೆಯಲಾಗುತ್ತಿದೆ.

ಬ್ರಿಟನ್ ಗ್ರೀಕ್ ಟರ್ಕಿಗಳ ವಸಾಹತು

ಹೀಗೆ ಸೈಪ್ರಸ್ ಎನ್ನುವ ಹೆಸರಿನೊಂದಿಗೆ ಉದಯಿಸಿದ ಈ ದ್ವೀಪಕ್ಕೆ ಜಗತ್ತಿನ ಶ್ರೇಷ್ಠ ನಾಗರೀಕತೆ ಇತಿಹಾಸ ಇರುವ ಬಗ್ಗೆ ಈಗಾಗಲೇ ಹೇಳಲಾಗಿದೆ. ಇಂತಹ ದೇಶದ ಆಧುನಿಕ ಇತಿಹಾಸವನ್ನು ವಿವರಿಸುವುದಾದರೆ ಈ ದೇಶ 1914 ಮೊದಲ ಮಹಾಯುದ್ಧದ ಆರಂಭದವರೆಗೂ ಬ್ರಿಟಿಷ್ ವಸಹಾತುವಾಗಿತ್ತು. 1925 ರಲ್ಲಿ ಅದು ಒಟ್ಟೋಮನ್ ಟರ್ಕರಿಂದ ಬೇರ್ಪಟ್ಟ ನಂತರ ಅದು ರಾಜಾಡಳಿತದ ವಸಹಾತುವಾಗಿ ಬದಲಾಯಿತು. ತದ ನಂತರ ಗ್ರೀಕ್ ನೇತೃತ್ವದಲ್ಲಿ ಯೂನಿಯನ್ಸ್ ಆಫ ಐಲ್ಯಾಂಡ ಎನ್ನುವ ಒಕ್ಕೂಟದ ಭಾಗವಾಗಿ ಸೇರ್ಪಡೆಯಾಯಿತು. ಅಲ್ಲಿಂದ ಹೀಗೆ ಒಬ್ಬರ ತೆಕ್ಕೆಯಿಂದ ಇನ್ನೊಬ್ಬರ ತೆಕ್ಕೆಗೆ ಬದಲಾಗುತ್ತಲೇ ಬಂದ ಸೈಪ್ರಸ್ ಈಗ ಭೌಗೋಳಿಕ ವಾಗಿ ಎರಡಾಗಿ ಉತ್ತರ ಭಾಗದ ಅಧಿಪತ್ಯ ವನ್ನು 1974 ರಿಂದ ಟರ್ಕಿಗಳ ವಶವಾಗಿದೆ. ದಕ್ಷಿಣ ಭಾಗವೂ ಈಗ 'ರಿಪಬ್ಲಿಕ್ ಆಫ್ ಸೈಪ್ರಸ್ 'ಎಂದು ಕರೆಯಲಾಗುತ್ತದೆ.

ಸೈಪ್ರಸ್_ಧಾರ್ಮಿಕತೆ

ಜನಾಂಗೀಯವಾಗಿ ಸೈಪ್ರಸ್ ನ ಶೇ. 73 ರಷ್ಟು ಜನ ಕ್ರಿಶ್ಚಿಯನ್ ಆಗಿದ್ದಾರೆ. ಉಳಿದಂತೆ ಉತ್ತರ ಭಾಗದಲ್ಲಿರುವ ಶೇ 25 ಕ್ಕಿಂತ ಹೆಚ್ಚಿನ ಜನ ಟರ್ಕಿ ಮೂಲದ ಸುನ್ನಿ ಮುಸ್ಲಿಮರಾಗಿದ್ದಾರೆ. ಹೀಗಾಗಿ ಬಹುತೇಕ ಇಲ್ಲಿನ ದಕ್ಷಿಣ ಭಾಗವೂ ಗ್ರೀಕ್ ನ ಸಂಸ್ಕೃತಿ ಪ್ರಭಾವಕ್ಕೂ ಹಾಗೂ ಉತ್ತರ ಭಾಗವೂ ಟರ್ಕಿಯ ಪ್ರಭಾವಗಳಿಂದ ಬೆರತು ಹೋಗಿವೆ. ಇಂತಹ ಸೈಪ್ರಸ್ ವಿಶೇಷವಾಗಿ ಎರಡು ಕಾರಣಗಳಿಗಾಗಿ ಪ್ರಸಿದ್ಧಿ ಪಡೆದಿದೆ. ಒಂದು ಇದು ಗ್ರೀಕ್ ನ ಅಧಿದೇವತೆ "ಅಫ್ರೋಡಿಟೇ" ಜನ್ಮ ಸ್ಥಳ ಎನ್ನುವ ಕಾರಣಕ್ಕೆ. ಮತ್ತೊಂದು ಇಲ್ಲಿ ಕುರಿ ಇಲ್ಲವೇ ಮೇಕೆಯ ಹಾಲಿನಿಂದ ಉತ್ಪಾದಿಸುವ ಉತ್ಕೃಷ್ಟ 'ಬೆಣ್ಣೆ' ಯಿಂದ.

ಸೈಪ್ರಸ್_ಪ್ರಸಕ್ತ_ರಾಜಕೀಯ_ಸ್ಥಿತಿ

ಈಗಾಗಲೇ ಹಿಂದೆ ಪ್ರಸ್ತಾಪಿಸಿದಂತೆ ಸೈಪ್ರಸ್ ನಲ್ಲಿರುವ ಎರಡು ಪ್ರಮುಖ ಜನಾಂಗಗಳಾದ ಗ್ರೀಕ್ ಕ್ರಿಶ್ಚಿಯನ್ ಹಾಗೂ ಟರ್ಕಿ ಪ್ರಭಾವದ ಸುನ್ನಿ ಮುಸ್ಲಿಂಮರ ನಡುವಿನ ಜನಾಂಗೀಯ ಕಲಹ ಈಗಲೂ ಮುಂದುವರೆದಿದೆ. ಅದರ ಪರಿಣಾಮವಾಗಿ ಸೈಪ್ರಸ್ ಎನ್ನುವ ಈ ದ್ವೀಪ ಇಬ್ಭಾಗವಾಗಿದೆ. ಉತ್ತರ ಭಾಗದಲ್ಲಿರುವ ಹಲವು ಪ್ರದೇಶಗಳು ಟರ್ಕರ ವಶದಲ್ಲಿವೆ. ಆ ಪ್ರದೇಶದ ಜನರು ಇಲ್ಲಿಗೆ ಬಂದು ಕೆಲಸ ಮಾಡಲು ಅವಕಾಶವಿದೆ. ಆದರೆ ಸೈಪ್ರಸ್ ಗೆ ಸೇರಿದ ನಾಗರೀಕರು ಕೇವಲ ಪ್ರವಾಸಿಗರಾಗಿ ಹೋಗಿ ಅಲ್ಲಿರುವ ತಂದೆ ತಾಯಿಗಳನ್ನು ಬಂಧುಗಳನ್ನು ನೋಡಿಕೊಂಡು ಬರುವ ನೋವಿನ ಪರಿಸ್ಥಿತಿಯನ್ನು ನಮ್ಮ ಜೊತೆ ಇರುವ ಹಲವು ಸಂಗಾತಿಗಳು ತೋಡಿಕೊಂಡರು. ಇತ್ತ ಸೈಪ್ರಸ್ ಜನರು 2013 ರಿಂದ ಬಲಪಂಥಿಯ ಪಕ್ಷದ ಆಡಳಿತಕ್ಕೆ ಮಣೆ ಹಾಕಿದ್ದಾರೆ. ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಮತ್ತೆ ಅದೇ ಬಲಪಂಥಿಯ ಪಕ್ಷಗಳೇ ಮೇಲುಗ್ಯೆ ಸಾಧಿಸಿ ಮತ್ತೆ ಐದು ವರ್ಷಗಳ ಆಡಳಿತ ವಶಪಡಿಸಿಕೊಂಡಿವೆ. ಇದರ ಪರಿಣಾಮ ಜನಾಂಗೀಯ ಬಿಕ್ಕಟ್ಟು ತೀವ್ರಗೊಂಡಿದೆ. ಸೈಪ್ರಸ್ ನಲ್ಲಿ (ಆಕೇಲ್) ಕಮ್ಯೂನಿಸ್ಟ್ ಪಾರ್ಟಿ ಇಲ್ಲಿ ಬಲಿಷ್ಟವಾಗಿದೆ 2013 ಪೂರ್ವದಲ್ಲಿ ಕಮ್ಯೂನಿಸ್ಟ್ ಪಕ್ಷವೇ ಇಲ್ಲಿ ಅಧಿಕಾರದಲ್ಲಿದ್ದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅದೇ ರೀತಿ ನಮ್ಮ ಸಭೆಯನ್ನು ವ್ಯವಸ್ಥೆ ಗೊಳಿಸಿರುವ ಕಇಔ ಸೈಪ್ರಸ್ ಕಾರ್ಮಿಕರನ್ನು ಸಂಘಟಿಸುತ್ತಿರುವ ಸುಸಜ್ಜಿತವಾದ ಕಾರ್ಮಿಕ ಸಂಘ ಇದೆ. ಇದು ಡಬ್ಲ್ಯು.ಎಫ್.ಟಿ.ಯು. ಸಂಯೋಜಿತವಾದ ಸಂಘಟನೆಯಾಗಿದೆ. ಕಮ್ಯೂನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಬಲಪಂಥೀಯ ಸರಕಾರದ ಈ ದಾಳಿಗಳು ಮತ್ತು ನೀತಿಗಳ ವಿರುದ್ದ ತೀವ್ರ ಹೋರಾಟ ನಡೆಸುತ್ತಿವೆ. ಅದರ ಪರಿಣಾಮವಾಗಿ ಜನರಿಗೆ ಇದ್ದುದ್ದರಲ್ಲೇ ಹಲವು ಪರಿಹಾರಗಳನ್ನು ಕೊಡಿಸಲು ಸಾಧ್ಯವಾಗುತ್ತಿದೆ. ಆದರೆ ಸರಕಾರ ದಾಳಿಗಳನ್ನು ಹರಿಯ ಬಿಡುತ್ತಿದೆ ಮತ್ತು ಜನಾಂಗೀಯ ಸಂಘರ್ಷಗಳು ಜೀವಂತವಿರುವಂತೆ ಮಾಡಿ ಜನರು ಸದಾ ಅನ್ಯೆಕ್ಯವಾಗಿರುವಂತೆ ಪ್ರಯತ್ನಿಸುತ್ತಿದೆ. ಜನತೆಯ ಐಕ್ಯತೆಯನ್ನು ಸಾಧಿಸದ ಹೊರತು ಜನತೆಯ ಹಕ್ಕುಗಳನ್ನು ಸಾಧಿಸಲಾಗದು ಎನ್ನುವುದು ಇಲ್ಲಿನ ಪ್ರಗತಿಪರರ ಮುಂದಿರುವ ಸವಾಲಾಗಿದೆ. ಸೈಪ್ರಸ್ ನ ಎರಡು ಪ್ರಮುಖ ಸಮುದಾಯಗಳು ಮಾತುಕತೆ ಮೂಲಕ ಎದುರಾಗಿರುವ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಬೇಕು. ಇದರಲ್ಲಿ ಮೂರನೇ ಮಧ್ಯ ಪ್ರವೇಶ ಇರಬಾರದು ಎಂಬುದು ಇಲ್ಲಿನ ಪ್ರಗತಿಪರರ, ಟ್ರೇಡ್ ಯೂನಿಯನ್ ಗಳ ಆಗ್ರಹವಾಗಿದೆ. ಆದರೆ ಈ ವಿಷಯದಲ್ಲಿ ವಿಶ್ವಸಂಸ್ಥೆಯ ನೇತೃತ್ವದಲ್ಲಿ ಹಲವು ಸುತ್ತಿನ ಮಾತುಕತೆಗಳು ನಡೆದರೂ ಅವು ಸಫಲವಾಗಿಲ್ಲ. ಮುಖ್ಯವಾಗಿ ಟರ್ಕಿಯ ಹಿಂದೆ ಅಮೇರಿಕಾ ನಿಂತು ಆಟವಾಡುತ್ತಾ ಸೈಪ್ರಸ್ ಒಂದಾಗದಂತೆ ಮಾಡುತ್ತಿದೆ ಎನ್ನುವುದು ಇಲ್ಲಿನವರ ನೇರ ಆರೋಪ. ಇದನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವುದರ ಮೇಲೆ ಸೈಪ್ರಸ್ ಭವಿಷ್ಯ ನಿಂತಿದೆ....

ವೈವಿಧ್ಯಮಯ ಆಹಾರ ಹಾಗೂ ಕೃಷಿ

ಸೈಪ್ರಸ್ ನಲ್ಲಿ ಯಾವುದೇ ಆಹಾರ ಪದಾರ್ಥಗಳನ್ನು ಅಂದರೆ ಅಕ್ಕಿ, ಗೋಧಿ, ಸೋಯ ಮೊದಲಾವುಗಳನ್ನು ಹೆಚ್ಚಾಗಿ ಬೆಳೆಯುವುದಿಲ್ಲ. ಇವುಗಳನ್ನೆಲ್ಲಾ ಅಮೇರಿಕಾ, ಚೀನಾ, ಭಾರತ ಮೊದಲಾದ ದೇಶಗಳಿಂದ ಕಡಿಮೆ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲಾಗುತ್ತದೆ. ಪೆಟ್ರೋಲಿಯಂ ಪದಾರ್ಥಗಳಿಗೆ ಅರಬ್ ದೇಶಗಳನ್ನು ಅವಲಂಬಿಸಿದೆ. ಉಳಿದಂತೆ ಕಿತ್ತಳೆ, ಸೇಬು, ಬಾಳೆಹಣ್ಣು, ದ್ರಾಕ್ಷಿ, ಮೊಸಂಬಿ, ದಾಳಿಂಬೆ, ಸ್ಟ್ರಾಬೇರಿ, ಆಲಿವ್ ಮೊದಲಾದ ಹಣ್ಣುಗಳನ್ನು ಅತ್ಯಧಿಕವಾಗಿ ಬೆಳೆಯಲಾಗುತ್ತದೆ. ಹಾಗೆಯೇ ಎಲ್ಲಾ ವಿಧದ ತರಕಾರಿಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮತ್ತು ಮಾಂಸಕ್ಕಾಗಿ ಹಂದಿ, ಆಕಳು ಟರ್ಕಿಕೋಳಿ, ಮೇಕೆ ಮತ್ತು ಕುರಿಗಳನ್ನು ಸಾಕಲಾಗುತ್ತದೆ. ಮತ್ತು ಮೇಕೆ ಮತ್ತು ಕುರಿಯ ಹಾಲಿನಿಂದಲೇ ಉತ್ಕೃಷ್ಟ ವಾದ ಮೊಸರು, ಬೆಣ್ಣೆ ಹಾಗೂ ತುಪ್ಪವನ್ನು ತಯಾರಿಸಲಾಗುತ್ತದೆ. ಮತ್ತು ಅದರಿಂದ ಬಗೆ ಬಗೆಯ ಸಿಹಿಗಳನ್ನು, ಪದಾರ್ಥಗಳನ್ನು ತಯಾರಿಸುತ್ತಾರೆ.

ಆದರೆ ನಾವು ಇದ್ದ ಲಾರನೇಕಾದಲ್ಲಿ ಸ್ಟ್ರಾಬೇರಿ, ಆಲುಗಡ್ಡೆ ಬಿಟ್ಟರೆ ಬೇರೆನೂ ಸಿಗುವುದಿಲ್ಲ. ಹಲವು ದಶಕಗಳ ಹಿಂದೆ ಈ ಲಾರನೇಕಾ ಸುತ್ತಮುತ್ತಲಿನ ಪ್ರದೇಶವೆಲ್ಲಾ ಕಿತ್ತಳೆ ಹಣ್ಣಿನ ತೋಟಗಳಿಂದ ಕಂಗೊಳಿಸುತ್ತಿತ್ತಂತೆ. ಹಿಂದೆ ಇಲ್ಲೇಲ್ಲಾ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಕೃಷಿ ಕಾರ್ಮಿಕರು ತುಂಬಾ ಸಂಘಟಿತರಾಗಿ ಹೋರಾಟ ನಡೆಸಿದ್ದ ಇತಿಹಾಸವನ್ನು ವಿಮಾನ ನಿಲ್ದಾಣ ದಿಂದ ನಮ್ಮನ್ನು ಸ್ವತಃ ಕರೆದೊಯ್ಯಲು ಬಂದಿದ್ದ UITBB ಪ್ರ ಕಾರ್ಯದರ್ಶಿ ಮೀಖಾಲೀಸ್ ಪಾಪೋಲೀಕೊಡಾ ನಮಗೆ ಈಗ ಒಣಗಿ ಬಯಲಾಗಿದ್ದ ಜಮೀನಗಳನ್ನು ತೋರಿಸುತ್ತಾ ಹೇಳುತ್ತಾ ಹೋದರು.

ಅಂದರೆ ಈ ಪ್ರದೇಶಗಳಲ್ಲಿ ಆಗ ಹೆಚ್ಚಿನ ಮಳೆಯಾಗುತ್ತಿತ್ತು. ಸುತ್ತಲಿನ ಪರ್ವತ ಪ್ರದೇಶಗಳಿಂದ ನದಿಗಳು ಹರಿಯುತ್ತಿದ್ದವು. ಈಗ ಅವು ಯಾವುದು ಇಲ್ಲ ಮಾತ್ರವಲ್ಲ ಈಗ 500–600 ಅಡಿಗಳ ಆಳಕ್ಕೆ ಬೋರ್ ವೆಲ್ ಗಳನ್ನು ಕೊರೆದರೂ ನೀರು ಸಿಗುವ ಗ್ಯಾರಂಟಿ ಇಲ್ಲ ಎನ್ನುವ ಸಂಗತಿಯನ್ನು ಅವರು ನಮಗೆ ವಿವರಿಸುವಾಗ ಲಾರನೇಕಾ ಭವಿಷ್ಯ ಏನು ಎನ್ನುವುದು ಯಕ್ಷಪ್ರಶ್ನೆಯಾಗಿ ನಮಗೆ ಉಳಿಯಿತು. ಯಾಕೆಂದರೆ ಈಗ ಅವರೇನೂ ಆಹಾರವಾಗಿ ಬಳಸುತ್ತಿದ್ದಾರೋ ಅವುಗಳನ್ನೆಲ್ಲಾ ಲಾರನೇಕಾ ಹೊರಗಿನ ಪ್ರದೇಶಗಳಿಂದಲೇ ತರಿಸಿಕೊಳ್ಳಬೇಕು. ಉತ್ತಮ ಫಲವತ್ತಾದ ಭಾಗದ ಪ್ರದೇಶಗಳು 1974 ನಂತರ ಟರ್ಕರ ವಶವಾಗಿವೆ.

ಇನ್ನೂ ಇಲ್ಲಿ ದೊರಕುವ ತರಕಾರಿ,ಹಾಗೂ ಮಾಂಸ ಹಾಗೂ ಮೀನುಗಳಿಂದ ಕೇವಲ ಏಕ ಪ್ರಕಾರವಾಗಿ ಆಹಾರ ತಯಾರಿಸದೇ ವೈವಿಧ್ಯತೆಯನ್ನು ಕಾಪಾಡುತ್ತಾರೆ ಮತ್ತು ಕೇವಲ ಮಾಂಸಹಾರದೊಂದಿಗೆ ತರಕಾರಿ ಹಾಗೂ ಹಣ್ಣುಗಳನ್ನು ಅತಿಹೆಚ್ಚಾಗಿ ಸೇವಿಸುವ ಪರಿಪಾಠವನ್ನು ಇಲ್ಲಿನವರು ಪಾಲಿಸುತ್ತಾರೆ. ಮತ್ತು ಊಟದ ಜೊತೆ ಬೀರು, ವೈನ್ ಗಳನ್ನು ಕುಟುಂಬವಾಗಿ ಹೆಚ್ಚು ಕಡಿಮೆ ಎಲ್ಲರೂ ಬಳಸುವ ವ್ಯವಸ್ಥೆ ಇಲ್ಲಿ ರೂಢಿಯಲ್ಲಿದೆ.

ಆಲಿವ್ ಗಳಿಂದ ಹಾಗೂ ನಮ್ಮ ಮಲೆ ನಾಡಿನಲ್ಲಿ ಸಿಗುವ ಮುರುಗನ್ ಹುಳಿಯಂತಿರುವ ದ್ರವ ರೂಪದ ಮಿಶ್ರಣ ಆಹಾರ ಪದಾರ್ಥಗಳ ಮೇಲ್ಗಡೆ ಬಳಸುವುದರಿಂದ ಬಾಯಿಗೆ ಅತ್ಯಂತ ರುಚಿಯೆನಿಸುತ್ತದೆ.



JANASHAKTHI KANNADA VARA PATRIKE DECEMBER 24-30, 2018 Price: Rs. 10/- Date of Publication: 21 DECEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಡಿಎಸ್‌ಎಂಎಂ ಸಂಸದ್ ಚಲೋ– ಮನುವಾದಿ ಅಜೆಂಡಾವನ್ನು ಪದಚ್ಯುತಗೊಳಿಸಲು ಕರೆ





ಡಿಸೆಂಬರ್ 20 ರಂದು ನವದೆಹಲಿಯ ರಾಜಮಾರ್ಗಗಳಲ್ಲಿ ದೇಶದ ಎಲ್ಲೆಡೆಗಳಿಂದ, ಕರ್ನಾಟಕ, ಕೇರಳ, ಹಿಮಾಚಲಪ್ರದೇಶ, ತ್ರಿಪುರ, ಬಂಗಾಲ, ಮಹಾರಾಷ್ಟ್ರ, ತಮಿಳುನಾಡು ಮತ್ತಿತರ ರಾಜ್ಯಗಳಿಂದ ಬಂದ ಸಾವಿರಾರು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಕಾರ್ಯಕರ್ತರು ಮಂಡಿ ಹೌಸ್‌ನಿಂದ ಸಂಸದ್ ಮಾರ್ಗ್‌ವರೆಗೆ ಮೆರವಣಿಗೆ ನಡೆಸಿ ಸಂಸತ್ತಿನ ಎದುರು "ಮನುವಾದ–ಮುಕ್ತ ಭಾರತ" ನಿರ್ಮಿಸಬೇಕು ಎಂದು ಕರೆ ನೀಡಿದರು. ಇದರಲ್ಲಿ ಡಿಎಸ್‌ಎಂಎಂ ಕಾರ್ಯಕರ್ತರಲ್ಲದೆ, ದಲಿತ ಬುದ್ಧಿಜೀವಿಗಳು ಮತ್ತು ದಲಿತ ಸಮುದಾಯದ ಇತರ ಹಲವರೂ ಭಾಗವಹಿಸಿದರು.




ಜನವರಿ ಒಂದರಂದು ಕೇರಳದಲ್ಲಿ ನಡೆಯಲ್ಲಿರುವ ಮಹಿಳಾ ಗೋಡೆಯ ಒಂದು ಪೋಸ್ಟರ್

ದಲಿತರ ಹಕ್ಕುಗಳು ಮತ್ತು ಸಂವಿಧಾನವನ್ನು ರಕ್ಷಿಸಲು ಮನುವಾದಿ ಬಿಜೆಪಿಯನ್ನು ಸೋಲಿಸಬೇಕು ಎಂದು ಮೆರವಣಿಗೆಯ ಕೊನೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಮುಖಂಡರು ಕರೆ ನಿಡಿದರು.

ಡಿಎಸ್‌ಎಂಎಂ ನ ಅಧ್ಯಕ್ಷರೂ, ಕೇರಳ ವಿಧಾನಸಭೆಯ ಮಾಜೀ ಅಧ್ಯಕ್ಷರೂ ಆದ ಕೆ. ರಾಧಾಕೃಷ್ಣನ್, ಈ ಮೋದಿ ಸರಕಾರ ಕಳೆದ ನಾಲ್ಕೂವರೆ ವರ್ಷಗಳಲ್ಲಿ ದಲಿತರಿಗೆ ನ್ಯಾಯ ಒದಗಿಸುವ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ಹೇಳಿದರು. ಡಿಎಸ್‌ಎಂಎಂ ಸಂಘಟನೆಗಳು ಮುಂದಿನ ಚುನಾವಣೆಗಳಲ್ಲಿ ಮನುವಾದಿ ಶಕ್ತಿಗಳನ್ನು ಅಧಿಕಾರದಿಂದ ಇಳಿಸಲು ಪ್ರಚಾರಾಂದೋಲನ ನಡೆಸಬೇಕು ಎಂದು ಅವರು ಕರೆ ನೀಡಿದರು.

ಡಿಎಸ್‌ಎಂಎಂ ಉಪಾಧ್ಯಕ್ಷರೂ ಆಗಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಸುಭಾಷಿಣಿ ಅಲಿಯವರು ಬಿಜೆಪಿ ಸರಕಾರದ ದಿನಗಳು ಕೊನೆಗೊಳ್ಳುತ್ತಿವೆ ಎಂದರು. ದಲಿತರ ಹಕ್ಕುಗಳನ್ನು ಎತ್ತಿ ಹಿಡಿಯಲು ದಿಲ್ಲಿಯನ್ನೇ ಈ ದಿನ ಆರಿಸಿಕೊಳ್ಳಲು ಕಾರಣ, ಇದನ್ನು 2019ರ ಚುನಾವಣೆಗಳ ಮೊದಲು ಮೋದಿ ಸರಕಾರಕ್ಕೆ ಒಂದು ಎಚ್ಚರಿಕೆಯಾಗಿ ತೋರಿಸಬೇಕು ಎಂದು. ಮುಂದಿನ ಆರು ತಿಂಗಳು ನಿರ್ಣಾಯಕ, ಬಿಜೆಪಿ ಸರಕಾರವನ್ನು ಅದರ ಮನುವಾದಿ ಅಜೆಂಡಾದೊಂದಿಗೆ ಪದಚ್ಯುತಗೊಳಿಸಲು ಸರ್ವಪ್ರಯತ್ನ ನಡೆಸಬೇಕು ಎಂದು ಅವರು ಕರೆ ನೀಡಿದರು. ಡಿಎಸ್‌ಎಂಎಂ ಪ್ರಧಾನ ಕಾರ್ಯದರ್ಶಿ ಮತ್ತು ಮಾಜಿ ಸಂಸದ್ ಸದಸ್ಯ ರಾಮಚಂದ್ರ ಡೋಮ್ 'ಸಂವಿಧಾನ ಉಳಿಸಿ, ದಲಿತರ ಹಕ್ಕುಗಳನ್ನು ಉಳಿಸಿ" ಈ ರ್‍ಯಾಲಿಯ ಘೋಷವಾಕ್ಯವಾಗಿರುವುಉದ ಏಕೆ ಎಂದು ವಿವರಿಸಿದರು. ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್‌ನ ಮುಖಂಡರೂ, ಸಂಸತ್ ಸದಸ್ಯರೂ ಆದ ಜಿತೇಂದ್ರ ಚೌಧುರಿ, ಸಂಸತ್ ಸದಸ್ಯರಾದ ಪಿ ಕೆ ಬಿಜು ಮತ್ತು ಝರನಾ ದಾಸ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ ಆದಿವಾಸಿ ಜನಗಳ ಬೆಂಬಲವನ್ನು ವ್ಯಕ್ತಪಡಿಸಿದರು.

ಅತ್ಯಾಚಾರ ತಡೆ ಕಾಯ್ದೆ(ಪಿಒಎ)ಯನ್ನು ಸಂವಿಧಾನದ 9ನೇ ಶೆಡ್ಯೂಲಿನಲ್ಲಿ ಸೇರಿಸಬೇಕು, ಅದನ್ನು ಸರಿಯಾಗಿ ಜಾರಿಗೊಳಿಸಬೇಕು, ಮೀಸಲಾತಿಯನ್ನು ಸರಿಯಾಗಿ ಜಾರಿ ಮಾಡಬೇಕು, ತುಂಬದೆ ಉಳಿಸಿರುವ ಮೀಸಲಾತಿ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು, ಎಸ್‌ಸಿ/ಎಸ್‌ಟಿ ಬಡ್ತಿಗಳಲ್ಲಿ ಕೆನೆಪದರ ಎಂಬುದು ಇರಬಾರದು, ಭೂಹೀನ ದಲಿತರು ಮತ್ತು ಆದಿವಾಸಿಗಳಿಗೆ ಭೂಮಿ ಪಟ್ಟಾ, ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರೋಹಿತ್ ಕಾಯ್ದೆ, ದೇಶಾದ್ಯಂತ ವಿವಿಧ ಸುಳ್ಳು ಕೇಸುಗಳಲ್ಲಿ ಬಂಧಿಸಿರುವ ದಲಿತ ಕಾರ್ಯಕರ್ತರ ಬೇಷರತ್ ಬಿಡುಗಡೆ, ಮನರೇಗ ದಲ್ಲಿ 200 ದಿನಗಳ ಕೆಲಸ, 350 ರೂ. ದಿನಗೂಲಿ, ಆಹಾರ ಭದ್ರತೆ ಕಾಯ್ದೆ ಮತ್ತು ಎಲ್ಲ ಬಡಜನರಿಗೆ ವಸತಿ ಮುಂತಾದ ಹನ್ನೊಂದು ಬೇಡಿಕೆಗಳನ್ನು ಈ ರ್‍ಯಾಲಿ ಮುಂದಿಟ್ಟಿದೆ.





ರಫೇಲ್ ಹಗರಣದ ಕಟಕಟೆಯಲ್ಲಿ ಮೋದಿ,, ಸಿಐಟಿಯು ಅಧ್ಯಕ್ಷರಾದ ಕಾಂ. ಎ.ಕೆ. ಪದ್ಮನಾಭನರವರು ಪುಸ್ತಕ ಬಿಡುಗಡೆ ಮಾಡುತ್ತಿರುವುದು

ರಫೇಲ್ ಹಗರಣದ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಅತ್ಯವಶ್ಯ ಓದು.
ವಿವರವಾದ ಅಧ್ಯಯನ. ಕೇಂದ್ರ ಸಮಿತಿ ಪ್ರಕಟಿಸಿದ ಇಂಗ್ಲಿಷಿನ ಈ ಕಿರು ಪುಸ್ತಿಕೆ ಈಗ ಕನ್ನಡದಲ್ಲಿ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**